# 01-05-2021

## ಪಾಕ್ ಪ್ರಧಾನಿ ಗಿಲ್ಗಿಟ್ ಬಲ್ತಿಸ್ತಾನ್‌ಗೆ ಅಭಿವೃದ್ಧಿ ಪ್ಯಾಕೇಜ್ ಘೋಷಣೆ



* ಪಾಕಿಸ್ತಾನ ಪ್ರಧಾನಿ ಇಮ್ರಾನ್ ಖಾನ್ ಅವರು ಗಿಲ್ಗಿಟ್ ಬಲ್ತಿಸ್ತಾನ್‌ಗೆ 370 ಬಿಲಿಯನ್ ರೂ.ಗಳ ಅಭಿವೃದ್ಧಿ ಪ್ಯಾಕೇಜ್ ಘೋಷನೆ ಮಾಡಿದ್ದಾರೆ.

* ಈ ಅಭಿವೃದ್ಧಿ ಪ್ಯಾಕೇಜ್'ನಿಂದಾಗಿ ಕೌಶಲ್ಯ ಅಭಿವೃದ್ಧಿ ಉಪಕ್ರಮಗಳ ಮೂಲಕ ಯುವಕರಿಗೆ ಸಹಾಯ ಮಾಡಲು ಮತ್ತು ಪ್ರದೇಶವನ್ನು ಉನ್ನತ ಪ್ರವಾಸೋದ್ಯಮ ತಾಣವಾಗಿ ಪರಿವರ್ತಿಸಲು ಈ ಪ್ಯಾಕೇಜ್ ಸಹಾಯವಾಗಲಿದೆ ಎಂದು ಪಾಕ್ ಪ್ರಧಾನಿ ತಿಳಿಸಿದ್ದಾರೆ.

* ಪಾಕಿಸ್ತಾನವು ತನ್ನ ಸರ್ಕಾರದ ಸಂಪುಟದ ಸಚಿವರೊಂದಿಗೆ ಗಿಲ್ಗಿಟ್ ಗೆ ಭೇಟಿ ನೀಡಿದ ಸಂಧರ್ಭದಲ್ಲಿ ಮುಂಬರುವ ಐದು ವರ್ಷಗಳಲ್ಲಿ ಗಿಲ್ಗಿಟ್ ಬಲ್ತಿಸ್ತಾನ ಅಭಿವೃದ್ಧಿಗಾಗಿ 370 ಬಿಲಿಯನ್ ರೂ.ಗಳ ಪ್ಯಾಕೇಜ್ ಘೋಷಣೆ ಮಾಡುತ್ತಿದ್ದೇವೆ ಎಂದು ಪಾಕ್ ಪ್ರಧಾನಿ ತಿಳಿಸಿದರು.

* ಈ ಅಭಿವೃದ್ಧಿ ಪ್ಯಾಕೇಜ್'ನಿಂದಾಗಿ ಗಿಲ್ಗಿಟ್ ಬಲ್ತಿಸ್ತಾನ್ ಪ್ರದೇಶವನ್ನು ಸ್ವಿಟ್ಜರ್ಲೆಂಡ್‌ನ ಮತ್ತು ಯುರೋಪಿಯನ್ ದೇಶಕ್ಕಿಂತ ಸುಂದರದ ಪ್ರವಾಸೋದ್ಯಮ ತಾಣವಾಗಿ ಮಾರ್ಪಡಿಸಲಾಗುವದು ಎಂದು ಪಾಕಿಸ್ತಾನ ಪ್ರಧಾನಿ ಇಮ್ರಾನ್ ಖಾನ್ ತಿಳಿಸಿದ್ದಾರೆ.

## ಭಾರತೀಯ ನೌಕಾಪಡೆಯಿಂದ ಆಪರೇಷನ್ ಸಮುದ್ರ ಸೇತು 2 ಪ್ರಾರಂಭ



* ಭಾರತದಲ್ಲಿ ಕೋರೋಣ ವೈರಸ್ 2ನೇ ವ್ಯಾಪಕವಾಗಿ ಹರಡುತ್ತಿರುವದನ್ನು ಮನಗಂಡ ಆಸ್ಪತ್ರೆಗಳಿಗೆ ಆಮ್ಲಜನಕ ಪೂರೈಕೆ ಮಾಡಲು ಭಾರತೀಯ ನೌಕಾಪಡೆಯು ಆಪರೇಷನ್ ಸಮುದ್ರ ಸೇತು 2 ಆರಂಭಿಸಿದೆ.

* ಭಾರತೀಯ ನೌಕಾ ಯುದ್ಧನೌಕೆಗಳು ದ್ರವ ಆಮ್ಲಜನಕ ತುಂಬಿದ ಕ್ರಯೋಜೆನಿಕ್ ಟ್ಯಾಂಕರ್ ಹಾಗೂ ವೈದ್ಯಕೀಯ ಸಲಕರಣೆಗಳನ್ನು ಸಾಗಿಸಲು ಭಾರತೀಯ ನೌಕಾಪಡೆಯ ಸಿದ್ದವಾಗಿದೆ ಎಂದು ತಿಳಿಸಿದೆ.

* ಪ್ರಸ್ತುತ 40 ಮೆಟ್ರಿಕ್ ಟನ್(MT) ದ್ರವ ಆಮ್ಲಜನಕವನ್ನು ಮುಂಬೈಗೆ ಸಾಗಿಸಲು ಐಎನ್‌ಎಸ್ ಕೋಲ್ಕತಾ ಹಾಗೂ ಐಎನ್‌ಎಸ್ ಟಾಲ್ವಾರ್ ಎಂಬ ಎರಡು ಹಡಗುಗಳು ಬಹ್ರೇನ್‌ನ ಮನಮಾ ಬಂದರಿನಿಂದ ಹೊರಡಲು ಸಿದ್ದವಾಗಿವೆ ಎಂದು ತಿಳಿಸಿದ್ದಾರೆ.

* ಭಾರತೀಯ ನೌಕಾಪಡೆ ವಂದೇ ಭಾರತ್ ಮಿಷನ್‌ನ ಅಂಗವಾಗಿ ಈ ಹಿಂದಿನ ವರ್ಷ ಆಪರೇಷನ್ ಸಮುದ್ರ ಸೇತು ಆರಂಭಿಸಿತ್ತು.

* ಪ್ರಸ್ತುತ ಅಹಮದಾಬಾದ್'ನಲ್ಲಿ ಕೋವಿಡ್'ನ ಪರಿಣಾಮ ಎದುರಿಸಲು ಸಶಸ್ತ್ರ ಪಡೆಗಳಿಂದ ಸಹಾಯಕ್ಕಾಗಿ 4 ವೈದ್ಯರು, 7 ದಾದಿಯರು, 26 ಅರೆವೈದ್ಯರು ಮತ್ತು 20 ಸಹಾಯಕ ಸಿಬ್ಬಂದಿಗಳನ್ನು ಹಾಗೂ 57 ಸದಸ್ಯರ ನೌಕಾ ವೈದ್ಯಕೀಯ ತಂಡವನ್ನು ಏಪ್ರಿಲ್ 29 ರಂದು ರೋಗಿಗಳ ಆರೈಕೆಗಾಗಿ ನಿಯೋಜನೆ ಮಾಡಲಾಗಿದೆ ಎಂದು ತಿಳಿದು ಬಂದಿದೆ. ಭಾರತೀಯ ನೌಕಾಪಡೆ ಬಗ್ಗೆ ಮಾಹಿತಿ

* ಭಾರತೀಯ ನೌಕಾಪಡೆ ಇದು ಭಾರತೀಯ ರಕ್ಷಣಾ ಪಡೆಗಳ ನೌಕಾ ಅಂಗವಾಗಿದೆ. ಇದು ಜಗತ್ತಿನ ಐದನೇಯ ಅತಿ ದೊಡ್ಡ ನೌಕಾಪಾಡೆಯಾಗಿದ್ದು, ಇದರಲ್ಲಿ ಸುಮಾರು 55,000 ಜನರು ಕಾರ್ಯನಿರತರಾಗಿದ್ದಾರೆ. ಇವರಲ್ಲಿ ಸುಮಾರು 5000 ಜನ ನೌಕಾ ವಾಯುಪಡೆಗೆ ಸೇರಿದ್ದು ಮತ್ತು ಸುಮಾರು 2000 ಜನ ನೌಕಾ ಕಮಾಂಡೋಗಳಾಗಿದ್ದಾರೆ. ಭಾರತೀಯ ನೌಕಾಪಡೆ ಒಟ್ಟು 155 ನೌಕೆಗಳನ್ನು ಹೊಂದಿದ್ದು, ಐ.ಎನ್.ಎಸ್.ವಿರಾಟ್ ಎಂಬ ವಾಯು ಯುದ್ಧ ನೌಕೆಯನ್ನು ಹೊಂದಿದೆ. ಸಂಪೂರ್ಣ ಏಷ್ಯಾ ಖಂಡದಲ್ಲಿರುವ ಎರಡು ವಾಯು ಯುದ್ಧ ನೌಕೆಗಳಲ್ಲಿ ಇದು ಒಂದು.

## ರಷ್ಯಾದ 2 ಲಕ್ಷ ಸ್ಪುಟ್ನಿಕ್ ವಿ ಲಸಿಕೆಗಳು ಮೇ ನಲ್ಲಿ ಭಾರತಕ್ಕೆ




* ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಭಾರತಕ್ಕೆ ಸ್ಪುಟ್ನಿಕ್ ವಿ ಲಸಿಕೆಯನ್ನು ನೀಡುವುದಾಗಿ ಭರವಸೆ ನೀಡಿದ್ದರು ಇದೀಗ ಮೇ ತಿಂಗಳಿನ ಆರಂಭದಲ್ಲಿ ರಷ್ಯಾ ಮೂಲದ ಸ್ಪುಟ್ನಿಕ್ ವಿ ಲಸಿಕೆ ಭಾರತಕ್ಕೆ ಬರಲಿವೆ ಎಂದು ತಿಳಿಸಿದ್ದಾರೆ.

* ರಷ್ಯಾದ ಭಾರತೀಯ ರಾಯಭಾರಿಯಾಗಿರುವ ಬಾಲ ವೆಂಕಟೇಶ್ ವರ್ಮಾ ಮೇ ತಿಂಗಳಿನ ಆರಂಭದಲ್ಲಿ 150,000 ರಿಂದ 200,000 ಸ್ಪುಟ್ನಿಕ್ ವಿ ಲಸಿಕೆಗಳು ಭಾರತಕ್ಕೆ ತಲುಪುವ ಸಾಧ್ಯತೆ ಎಂದ ಮಾಹಿತಿಯನ್ನು ನೀಡಿದ್ದಾರೆ.

* ರಷ್ಯಾದಿಂದ ಇದೆ ರೀತಿ ಮುಂದೆ ಜೂನ್ ತಿಂಗಳಿನಲ್ಲಿ 5 ಮಿಲಿಯನ್ ರಿಂದ 10 ಮಿಲಿಯನ್ ಸ್ಪುಟ್ನಿಕ್ ಲಸಿಕೆಗಳು ಭಾರತಕ್ಕೆ ಬರುವ ನಿರೀಕ್ಷೆ ಇದೆ ಎಂದು ಅವರು ತಿಳಿಸಿದ್ದಾರೆ.

* ರಷ್ಯಾದ ನೇರ ಹೂಡಿಕೆ ನಿಧಿಯು, 5 ಭಾರತೀಯ ಕಂಪನಿಗಳೊಂದಿಗೆ ಲಸಿಕೆ ಉತ್ಪಾದಿಸುವ ಒಪ್ಪಂದಕ್ಕೆ ಸಹಿ ಹಾಕಲಾಗಿದೆ ಮತ್ತು ಮೇ'ನಲ್ಲಿ ಲಸಿಕೆ ಉತ್ಪಾದನೆ ಆರಂಭವಾಗುತ್ತದೆ.

* ಭಾರತದಲ್ಲಿ ಶೇಕಡಾ 60 ರಿಂದ 70 ಕ್ಕಿಂತ ಹೆಚ್ಚಿನ ಪ್ರಮಾಣದ ಸ್ಪುಟ್ನಿಕ್ ವಿ ಲಸಿಕೆಗಳನ್ನೂ ಮುಂಬರುವ ತಿಂಗಳಿನಲ್ಲಿ ಉತ್ಪಾದನೆ ಮಾಡಲಾಗುತ್ತದೆ ಎಂದು ನಿರೀಕ್ಷಿಸಲಾಗಿದೆ.

* ರಷ್ಯಾ ದೇಶವು ಕೋವಿಡ್ ನಿಯಂತ್ರಣಕ್ಕಾಗಿ ಈಗಾಗಲೇ ಭಾರತಕ್ಕೆ ಆಮ್ಲಜನಕ

## ಇದೀಗ ಟಾಟಾ ಸ್ವಾಧೀನಕ್ಕೆ ಬಿಗ್ ಬಾಸ್ಕೆಟ್




* ಸಿಸಿಐ (Competition Commission of India) ಆನ್ ಲೈನ್ ಪ್ಲಾಟ್ ಫಾರ್ಮ್ ಬಿಗ್ ಬಾಸ್ಕೆಟ್'ನ್ನು ಇದೀಗ ಟಾಟಾ ಡಿಜಿಟಲ್'ಗೆ ಸ್ವಾಧೀನಪಡಿಸಿಕೊಳ್ಳಲು ಅನುಮೋದನೆಯನ್ನು ನೀಡಿದೆ.

* CCI ನೀಡಿರುವ ಅನುಮೋದನೆಯಿಂದ ಟಾಟಾ ಡಿಜಿಟಲ್ ಲಿಮಿಟೆಡ್ ಶೇಕಡಾ 64.3ರಷ್ಟು ಬಿಗ್ ಬಾಸ್ಕೆಟ್ ಪಾಲನ್ನು ಪಡೆಯಲಿದೆ.

* ಬೆಂಗಳೂರಿನ ಮೂಲದ ಸ್ಟಾರ್ಟ್ ಅಪ್ ಸಂಸ್ಥೆಯಾಗಿರುವ ಬಿಗ್ ಬಾಸ್ಕೆಟ್'ನೊಂದಿಗೆ ಟಾಟಾ ಡಿಜಿಟಲ್ ಈ ಒಪ್ಪಂದಕ್ಕೆ ಸಹಿ ಹಾಕಿದೆ, ಇದರಿಂದ ಸರಿ ಸುಮಾರು 1.2 ಬಿಲಿಯನ್ ಡಾಲರ್ ಹೂಡಿಕೆಯನ್ನು ಟಾಟಾ ಡಿಜಿಟಲ್ ಮಾಡಿದೆ.

* ಆನ್ ಲೈನ್ ಮೂಲಕ ದಿನಸಿ ವಸ್ತುಗಳ ಪೂರೈಕೆ ಮಾಡುವ ಬಿಗ್ ಬಾಸ್ಕೆಟ್ ಸುಮಾರು 1.85 ಬಿಲಿಯನ್ ಡಾಲರ್ ಮೌಲ್ಯವನ್ನು ಹೊಂದಿದೆ, ಇದು ಹರಿ ಮೆನನ್ ನೇತೃತ್ವದ ಬೆಂಗಳೂರು ಕಂಪನಿಯು ಯುನಿಕಾರ್ನ್ ಕ್ಲಬ್'ಗೆ ಪ್ರವೇಶಿಸಿದ ಸುಮಾರು 20 ತಿಂಗಳ ನಂತರ ಟಾಟಾ ಡಿಜಿಟಲ್'ನೊಂದಿಗೆ ಈ ಒಪ್ಪಂದಕ್ಕೆ ಸಿದ್ದವಾಗಿದೆ.

## ನಿವೃತ್ತ ಅಟರ್ನಿ ಜನರಲ್ ಸೋಲಿ ಸೊರಾಬ್ಜಿ ವಿಧಿವಶ




* ಪದ್ಮವಿಭೂಷಣ ಹಾಗೂ ನಿವೃತ್ತ ಅಟರ್ನಿ ಜನರಲ್, ಹಿರಿಯ ವಕೀಲ ಸೋಲಿ ಸೊರಾಬ್ಜಿ ಅವರು ತಮ್ಮ 91ನೇ ವಯಸ್ಸಿನಲ್ಲಿ ವಿಧಿವಶರಾಗಿದ್ದಾರೆ.
* ಸೋಲಿ ಸೊರಬ್ಜಿ 9 ಮಾರ್ಚ್ 1930 ರಂದು ಬಾಂಬೆಯಲ್ಲಿ ಜನಿಸಿದರು, ಇವರು ಮುಂಬೈನ ಸೇಂಟ್ ಕ್ಸೇವಿಯರ್ಸ್ ಕಾಲೇಜು & ಮುಂಬೈನ ಸರ್ಕಾರಿ ಕಾನೂನು ಕಾಲೇಜಿನಲ್ಲಿ ಅಧ್ಯಯನ ಮಾಡಿದರು.

* ಸೋಲಿ ಸೊರಬ್ಜಿ ಅವರನ್ನು1971ರಲ್ಲಿ ಬಾಂಬೆ ಹೈಕೋರ್ಟ್‌ನ ಹಿರಿಯ ವಕೀಲರನ್ನಾಗಿ ನೇಮಿಸಲಾಯಿತು, ಮತ್ತು ಇವರು 1977 ರಿಂದ 1980 ರವರೆಗೆ ಭಾರತದ ಸಾಲಿಸಿಟರ್ ಜನರಲ್ ಆಗಿ ಸೇವೆ ಸಲ್ಲಿಸಿದರು.

* ಸೋಲಿ ಸೊರಬ್ಜಿ ಅವರು 1989ರ ಡಿಸೆಂಬರ್ 9 ರಿಂದ 1990ರ ಡಿಸೆಂಬರ್ 2ರವರೆಗೆ ಭಾರತಕ್ಕೆ ಅಟಾರ್ನಿ ಜನರಲ್ ಆಗಿ ನೇಮಕಗೊಂಡರು, ಇದಾದ ನಂತರ ಮತ್ತೆ 1998ರ ಏಪ್ರಿಲ್ 7 ರಿಂದ 2004ರ ವರೆಗೆ ಈ ಹುದ್ದೆಯಲ್ಲಿ ಸೇವೆ ಸಲ್ಲಿಸಿದ್ದರು.

* ಸೋಲಿ ಸೊರಬ್ಜಿ ಅವರು 2002ರ ಮಾರ್ಚ್'ನಲ್ಲಿಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಮಾನವ ಹಕ್ಕುಗಳ ರಕ್ಷಣೆಗಾಗಿ ಪದ್ಮವಿಭೂಷಣವನ್ನು ಪಡೆದುಕೊಂಡರು.

* 2006ರ ಮಾರ್ಚ್'ನಲ್ಲಿ ಇವರು, ಆಸ್ಟ್ರೇಲಿಯಾ ಭಾರತ ದ್ವಿಪಕ್ಷೀಯ ಕಾನೂನು ಸಂಬಂಧಗಳ ಸೇವೆಗಾಗಿ ಆರ್ಡರ್ ಆಫ್ ಆಸ್ಟ್ರೇಲಿಯಾದ ಗೌರವ ಸದಸ್ಯರನ್ನಾಗಿ ನೇಮಿಸಲಾಗಿತ್ತು. ಸೋಲಿ ಸೊರಾಬ್ಜಿ ರವರ ಬಗ್ಗೆ ಮಾಹಿತಿ

* ಸೋಲಿ ಜೆಹಂಗೀರ್ ಸೊರಬ್ಜಿ, ಎಎಮ್ ಭಾರತೀಯ ನ್ಯಾಯಶಾಸ್ತ್ರಜ್ಞರಾಗಿದ್ದು, ಅವರು 1989 ರಿಂದ 1990 ರವರೆಗೆ ಮತ್ತು ಮತ್ತೆ 1998 ರಿಂದ 2004 ರವರೆಗೆ ಭಾರತಕ್ಕೆ ಅಟಾರ್ನಿ ಜನರಲ್ ಆಗಿ ಸೇವೆ ಸಲ್ಲಿಸಿದರು. 2002 ರಲ್ಲಿ ಅವರು ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಮಾನವನ ರಕ್ಷಣೆಗಾಗಿ ಪದ್ಮವಿಭೂಷಣವನ್ನು ಪಡೆದರು.

* ಜನನ: 9 ಮಾರ್ಚ್ 1930, ಮುಂಬೈ
* ನಿಧನ: 30 ಏಪ್ರಿಲ್ 2021
* ಪುಸ್ತಕಗಳು: ನಾನಿ ಪಾಲ್ಖಿವಾಲಾ: ನ್ಯಾಯಾಲಯದ ಜೀನಿಯಸ್,
* ಶಿಕ್ಷಣ: ಸೇಂಟ್ ಜೇವಿಯರ್ಸ್ ಕಾಲೇಜು (ಸ್ವಾಯತ್ತ), ಸರ್ಕಾರಿ ಕಾನೂನು ಕಾಲೇಜು, ಮುಂಬೈ

## ವಿದೇಶದಿಂದ 4.5 ಲಕ್ಷ ರೆಮಿಡಿಸಿವರ್ ಆಮದು ಮಾಡಿಕೊಳ್ಳಲು ನಿರ್ಧರಿಸಿದ ಕೇಂದ್ರ ಸರ್ಕಾರ




* ಪ್ರಸ್ತುತ ಭಾರತ ದೇಶದಲ್ಲಿ ಕೊರೊನಾ ಸೋಂಕು ವ್ಯಾಪಕವಾಗಿ ಹರಡುತ್ತಿರುವದರಿಂದಾಗಿ ಕೇಂದ್ರ ಸರ್ಕಾರವು ವಿದೇಶಗಳಿಂದ ಜೀವರಕ್ಷಕ ವಾಗಿರುವ ರೆಮಿಡಿಸಿವರ್'ನ 4.5 ಲಕ್ಷ ಚುಚ್ಚುಮದ್ದುಗಳನ್ನು ಆಮದು ಮಾಡಿಕೊಳ್ಳಲು ಮುಂದಾಗಿದೆ

ಎಂದು ರಸಗೊಬ್ಬರ ಸಚಿವಾಲಯ ಮಾಹಿತಿ ನೀಡಿದೆ.

* ಸರ್ಕಾರಿ ಸ್ವಾಮ್ಯದ ಹೆಚ್‌ಎಲ್‌ಎಲ್ ಲೈಫ್‌ಕೇರ್ ಸಂಸ್ಥೆಯು ಅಮೆರಿಕಾದ ಗಿಲೇಡ್ ಸೈನ್ಸ್ ಸಂಸ್ಥೆ ಹಾಗೂ ಈಜಿಪ್ಟಿಯನ್ ಫಾರ್ಮಾ ಸಂಸ್ಥೆಗಳಿಂದ 4.5 ಲಕ್ಷ ರೆಮಿಡಿಸಿವರ್ ವಯಲ್‌ಗಳನ್ನು ಆಮದು ಮಾಡಿಕೊಳ್ಳಲಾಗುತ್ತಿದೆ.

* ಪ್ರಸ್ತುತ ಅಮೆರಿಕಾದ ಗಿಲೇಡ್ ಸೈನ್ಸ್ ಸಂಸ್ಥೆ ಕೆಲವೇ ದಿನಗಳಲ್ಲಿ 75 ಸಾವಿರ ದಿಂದ 1ಲಕ್ಷದಷ್ಟು ರೆಮಿಡಿಸಿವರ್ ಚುಚ್ಚುಮದ್ದುಗಳನ್ನು ಭಾರತಕ್ಕೆ ಸಾಗಿಸಲು ಸಿದ್ಧವಾಗಿದೆ ಎಂದು ತಿಳಿದು ಬಂದಿದೆ.

* ಈಜಿಪ್ಟಿಯನ್ ಫಾರ್ಮಾ ಸಂಸ್ಥೆಯಿಂದ 15 ದಿನಕೊಮ್ಮೆ 50 ಸಾವಿರ ವಯಲ್‌ಗಳನ್ನು ನೀಡಲು ಒಪ್ಪಿಗೆಯನ್ನು ನೀಡಿದೆ.

## ಮೇ 1: ಅಂತರರಾಷ್ಟ್ರೀಯ ಕಾರ್ಮಿಕರ ದಿನ




* ಮೇ 1ನ್ನು ಅಂತರರಾಷ್ಟ್ರೀಯ ಕಾರ್ಮಿಕರ ದಿನ ಅಥವಾ ಕಾರ್ಮಿಕ ದಿನ ಎಂದೂ ಆಚರಿಸುತ್ತಾರೆ.

* 1923ರಲ್ಲಿ ಭಾರತದಲ್ಲಿ ಮೊದಲ ಕಾರ್ಮಿಕ ದಿನವನ್ನು ಮದ್ರಾಸ್‌ನಲ್ಲಿ ಲೇಬರ್ ಕಿಸಾನ್ ಪಕ್ಷ ಆಯೋಜಿಸಿತ್ತು, ಹಾಗೂ ಇದು ಕಾರ್ಮಿಕ ಸಂಘ ಚಳವಳಿಯಿಂದ ಪ್ರಾರಂಭವಾಯಿತು.

* ಕಾರ್ಮಿಕ ಸಂಘ ಚಳುವಳಿಯು ಕೈಗಾರಿಕಾ ಬಂಡವಾಳಶಾಹಿಗಳ ದಾಳಿಯ ಪ್ರತಿಯಾಗಿ ಪ್ರಾರಂಭವಾಯಿತು.

* ಇದು ಯುರೋಪಿನ ಕೈಗಾರಿಕಾ ಕ್ರಾಂತಿಯ ಸಮಯದಲ್ಲಿ ಕಾರ್ಮಿಕ ಸಂಘ ಚಳುವಳಿ ಪ್ರಾರಂಭವಾಯಿತು.

* ಭಾರತೀಯ ರಾಷ್ಟ್ರೀಯ ಟ್ರೇಡ್ ಯೂನಿಯನ್ ಕಾಂಗ್ರೆಸ್ 1920ರಲ್ಲಿ ಸ್ಥಾಪನೆಗೊಂಡಿತು, ಇದರಿಂದ ಲೇಬರ್ ಯೂನಿಯನ್ ಚಳವಳಿಗೆ ಒಂದು ಮುಖ್ಯ ಉತ್ತೇಜನ ಸಿಕ್ಕಿದಂತಾಯಿತು.

* 1881 ರಲ್ಲಿ ಮೊದಲ ಕೈಗಾರಿಕಾ ಕಾಯ್ದೆಯನ್ನು ಅಂಗೀಕರಿಸಲಾಯಿತು, ನಂತರ ಲೋಕಂಡೆ ಬಾಂಬೆ ಪ್ರೆಸಿಡೆನ್ಸಿಯಲ್ಲಿ ಶೃಂಗಸಭೆಯನ್ನು ಏರ್ಪಡಿಸಲಾಯಿತು ಈ ಸಭೆಯಲ್ಲಿ ಪ್ರಮುಖ ಬೇಡಿಕೆ ಮತ್ತು ಸಾಪ್ತಾಹಿಕ ರಜೆ ಹಾಗೂ ಪ್ರತಿದಿನ ಅರ್ಧ ಘಂಟೆಯ ವಿಶ್ರಾಂತಿ ಜೊತೆಗೆ ಕಾರ್ಮಿಕರಿಗೆ ಆಕಸ್ಮಿಕ ಪರಿಹಾರಗಳನ್ನೂ ನೀಡುವದಾಗಿತ್ತು.

* ಮುದ್ರಣಾಲಯದ ಕಾರ್ಮಿಕರು 1905ರಲ್ಲಿ ತಮ್ಮನ್ನು ಟ್ರೇಡ್ ಯೂನಿಯನ್'ಆಗಿ ಸಂಘಟಿಸಿದರು.

* ಅಂಚೆ ನೌಕರರು 1907ರಲ್ಲಿ ಟ್ರೇಡ್ ಯೂನಿಯನ್ ರಚಿಸಿದರು ಮತ್ತು 1910ರಲ್ಲಿ ಕಾರ್ಮಿಕ ಕಲ್ಯಾಣ ಸಂಘವನ್ನು ಸ್ಥಾಪಿಸಿದರು. ಭಾರತೀಯ ರಾಷ್ಟ್ರೀಯ ಟ್ರೇಡ್ ಯೂನಿಯನ್ ಕಾಂಗ್ರೆಸ್ ಬಗ್ಗೆ ಮಾಹಿತಿ :

* ಸ್ಥಾಪಕರು: ಅಲನ್ ಆಕ್ಟೇವಿಯನ್, ಹ್ಯೂಮ್ದಾದಾಭಾಯಿ, ನವ್ರೋಜಿದಿನ್ಶಾ ವಾಚಾ

| | |
|---|---|
| * ಪಕ್ಷದ ಅಧ್ಯಕ್ಷರು | ಸೋನಿಯಾ ಗಾಂಧಿ |
| * ಸಂಸದೀಯ ಅಧ್ಯಕ್ಷೆ | ಸೋನಿಯಾ ಗಾಂಧಿ |
| * ಲೋಕಸಭೆಯಲ್ಲಿ ನಾಯಕ | ಅಧಿರ್ ರಂಜನ್ ಚೌಧರಿ |
| * ರಾಜ್ಯಸಭೆಯಲ್ಲಿ ನಾಯಕ (ಪ್ರತಿಪಕ್ಷದ ನಾಯಕ) | ಗುಲಾಮ್ ನಬಿ ಆಜಾದ್ |
| * ಸ್ಥಾಪನೆ | 28 ಡಿಸೆಂಬರ್ 1885 |

* ಪ್ರಧಾನ ಕಚೇರಿ 24, ಅಕ್ಬರ್ ರಸ್ತೆ, ನವದೆಹಲಿ

# 03-05-2021

## ವೈದ್ಯಕೀಯ ಆಕ್ಸಿಜನ್ ಉತ್ಪಾದಕ ಕಂಪನಿ ಎಂಬ ಹೆಗ್ಗಳಿಕೆ ಪಡೆದ ರಿಯಲನ್ಸ್



* ಪ್ರಸ್ತುತ ಭಾರತದಲ್ಲಿ ಕೋವಿಡ್ 19 ಸೋಂಕು ವ್ಯಾಪಕವಾಗಿ ಹರಡುತ್ತಿರುವ ಹಿನ್ನಲೆಯಿಂದಾಗಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಆಕ್ಸಿಜನ್ ಸಮಸ್ಯೆ ಎದುರಾಗುತ್ತಿದೆ ಇದನ್ನು ಮನಗಂಡ ರಿಲಯನ್ಸ್ ಇಂಡಸ್ಟ್ರೀಸ್ ಕಂಪನಿಯು ವೈದ್ಯಕೀಯ ಶ್ರೇಣಿಯ ಲಿಕ್ವಿಡ್ ಆಕ್ಸಿಜನ್ ಜೀವರಕ್ಷಕವನ್ನು ಉತ್ಪಾದಿಸುವ ಭಾರತದ ಅತಿ ದೊಡ್ಡ ಉತ್ಪಾದಕ ಕಂಪನಿಯಾಗಿ ರಿಲಯನ್ಸ್ ಇಂಡಸ್ಟ್ರೀಸ್ ಹೊರ ಹೊಮ್ಮಿದೆ.

* ಪ್ರಸ್ತುತ ರಿಲಯನ್ಸ್ ಕಂಪನಿ ಪ್ರತಿ ದಿನವೂ 1000 MTಗಳಷ್ಟು ವೈದ್ಯಕೀಯ ಶ್ರೇಣಿಯ ಲಿಕ್ವಿಡ್ ಆಕ್ಸಿಜನ್ ಉತ್ಪಾದಣೆ ಮಾಡುತ್ತಿದೆ ಎಂದು ತಿಳಿದು ಬಂದಿದೆ.

* ರಿಲಯನ್ಸ್ ಇಂಡಸ್ಟ್ರೀಸ್ ಕಂಪನಿಯು ಒಟ್ಟಾರೆ ಭಾರತದ ಉತ್ಪಾದನೆಯ ಶೇ 11ರಷ್ಟು ಪಾಲು ಹೊಂದಿದೆ ಎಂದು ತಿಳಿಸಿದೆ.

* ಗುಜರಾತನ್ ಜಾಮ್ನಗರ ನಗರದಲ್ಲಿನ ರಿಲಯನ್ಸ್ ಕಂಪನಿಯು ಇಂಜಿನಿಯರ್'ಗಳು ಈ ಸವಾಲನ್ನು ಎದುರಿಸಲು ದಣಿವಿಲ್ಲದೆ ಕೆಲಸ ಮಾಡುತ್ತಿದ್ದಾರೆ ಎಂದು ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಮುಕೇಶ್ ಅಂಬಾನಿ ಅವರು ಮಾಹಿತಿಯನ್ನು ನೀಡಿದ್ದಾರೆ.

* ಪ್ರಸ್ತುತ ರಿಲಯನ್ಸ್ ಕಂಪನಿಯು ದೇಶದ ಬೇರೆ ಬೇರೆ ರಾಜ್ಯ ಸರ್ಕಾರಗಳಿಗೆ ಉಚಿತವಾಗಿ ಆಕ್ಸಿಜನ್ ನೀಡುತ್ತಿದೆ, 2020ರ ಮಾರ್ಚ್ ತಿಂಗಳಿಂದ ದೇಶದಾದ್ಯಂತ 55,000 MT (ಮೆಟ್ರಿಕ್ ಟನ್)ಗಳಷ್ಟು ವೈದ್ಯಕೀಯ ಲಿಕ್ವಿಡ್ ಆಕ್ಸಿಜನ್ ಪೂರೈಕೆ

ಮಾಡಿದೆ ಎಂದು ರಿಲಯನ್ಸ್ ಕಂಪನಿ ತಿಳಿಸಿದೆ. ರಿಲಯನ್ಸ್ ಇಂಡಸ್ಟ್ರೀಸ್ ಕಂಪನಿಯ ಬಗ್ಗೆ ಮಾಹಿತಿ :

* ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಭಾರತದ ಬಹುರಾಷ್ಟ್ರೀಯ ಕಂಪನಿಯಾಗಿದೆ, ಇದು ಭಾರತದ ಮುಂಬೈನಲ್ಲಿ ಪ್ರಧಾನ ಕಚೇರಿಯನ್ನು ಹೊಂದಿದೆ.

* ಇಂಧನ, ಪೆಟ್ರೋಕೆಮಿಕಲ್ಸ್, ಜವಳಿ, ನೈಸರ್ಗಿಕ ಸಂಪನ್ಮೂಲಗಳು, ಚಿಲ್ಲರೆ ವ್ಯಾಪಾರ ಮತ್ತು ದೂರಸಂಪರ್ಕದಲ್ಲಿ ತೊಡಗಿರುವ ಭಾರತದಾದ್ಯಂತ ವ್ಯವಹಾರಗಳನ್ನು ರಿಲಯನ್ಸ್ ಹೊಂದಿದೆ.

* ರಿಲಯನ್ಸ್ ಭಾರತದ ಅತ್ಯಂತ ಲಾಭದಾಯಕ ಕಂಪನಿಗಳಲ್ಲಿ ಒಂದಾಗಿದೆ, ಮಾರುಕಟ್ಟೆ ಬಂಡವಾಳೀಕರಣದಿಂದ ಭಾರತದಲ್ಲಿ ಸಾರ್ವಜನಿಕವಾಗಿ ವ್ಯಾಪಾರ ಮಾಡುವ ಅತಿದೊಡ್ಡ ಕಂಪನಿ, ಮತ್ತು ಇತ್ತೀಚೆಗೆ ಸರ್ಕಾರದ ನಿಯಂತ್ರಿತ ಭಾರತೀಯ ತೈಲ ನಿಗಮವನ್ನು ಮೀರಿಸಿದ ನಂತರ ಆದಾಯದಿಂದ ಅಳೆಯಲ್ಪಟ್ಟ ಭಾರತದ ಅತಿದೊಡ್ಡ ಕಂಪನಿಯಾಗಿದೆ.

* ಸೆಪ್ಟೆಂಬರ್ 10, 2020 ರಂದು, ರಿಲಯನ್ಸ್ ಇಂಡಸ್ಟ್ರೀಸ್ ಮಾರುಕಟ್ಟೆ ಬಂಡವಾಳೀಕರಣದಲ್ಲಿ 200 ಬಿಲಿಯನ್ ದಾಟಿದ ಮೊದಲ ಭಾರತೀಯ ಕಂಪನಿಯಾಗಿದೆ.

## ಪಂಚರಾಜ್ಯ ಚುನಾವಣಾ ಫಲಿತಾಂಶ ಪ್ರಕಟ 2021




* ಪಂಚರಾಜ್ಯಗಳ ಅಂದರೆ ಪಶ್ಚಿಮ ಬಂಗಾಳ, ಕೇರಳ, ತಮಿಳುನಾಡು, ಅಸ್ಸಾಂ, ಪುದಿಚೇರಿ, ಪ್ರಸ್ತುತ ಈ 5 ರಾಜ್ಯಗಳ ಚುನಾವಣಾ ಫಲಿತಾಂಶ ಇದೀಗ ಪ್ರಕಟವಾಗಿದೆ.

* ಪಶ್ಚಿಮ ಬಂಗಾಳ: ರಾಜ್ಯದಲ್ಲಿ ಮಮತಾ ಬ್ಯಾನರ್ಜಿ ಅವರ TMC ಪಕ್ಷವು ಗೆಲುವು ಸಾಧಿಸಿದೆ ಮತ್ತು ಬಲಿಷ್ಠ ನಾಯಕಿಯಾಗಿ ಹೊರಹೊಮ್ಮಿದ್ದಾರೆ.

* ಇದೇ ಪಶ್ಚಿಮ ಬಂಗಾಳ ರಾಜ್ಯದಲ್ಲಿ ಬಿಜೆಪಿ ಪಕ್ಷವು 80 ಕ್ಷೇತ್ರ ಗೆದ್ದುಕೊಂಡಿದೆ.

* ತಮಿಳುನಾಡು: ರಾಜ್ಯದಲ್ಲಿ ಇದೀಗ 2021ರ ಚುನಾವಣೆಯಲ್ಲಿಡಿಎಂಕೆ ಕಾಂಗ್ರೆಸ್ ಮೈತ್ರಿ ದಿಗ್ವಿಜಯ ಸಾಧಿಸಿದೆ.

* ತಮಿಳುನಾಡು ರಾಜ್ಯದಲ್ಲಿ ಎಂ.ಕೆ. ಸ್ಟಾಲಿನ್ ಅವರು ಮುಖ್ಯ ಮಂತ್ರಿಯಾಗಲಿದ್ದಾರೆ ಎಂದು ತಿಳಿಸಲಾಗಿದೆ.

* ಅಸ್ಸಾಂ: ರಾಜ್ಯದಲ್ಲಿ ಬಿಜೆಪಿ ಪಕ್ಷವು ಗೆಲುವು ಸಾಧಿಸಿದೆ, ಬಿಜೆಪಿ ನಾಯಕ ಸಿಎಂ ಸರ್ಬಾನಂದ ಸೋನೊವಾಲ್ ಮತ್ತು ಜನಪ್ರಿಯ ನಾಯಕ ಹಿಮಾಂತ ಬಿಸ್ವಾ ಶರ್ಮರನ್ನೇ ಅಸ್ಸಾಂ ಜನತೆ ನೆಚ್ಚಿಕೊಂಡಿದ್ದಾರೆ.

* ಹಿಮಾಂತ ಬಿಸ್ವಾ ಶರ್ಮ ಅವರನ್ನು ಸಿಎಂ ಅಭ್ಯರ್ಥಿಯನ್ನಾಗಿ ಈ ಹಿಂದೆಯೇ ಘೋಷಣೆ ಮಾಡಲಾಗಿದೆ ಎಂದು ತಿಳಿದು ಬಂದಿದೆ.

* ಕೇರಳ: ರಾಜ್ಯವು ದೇವರ ನಾಡು ಎಂದು ಪ್ರಖ್ಯಾತಿ ಪಡೆದಿದೆ, ಸತತವಾಗಿ 2ನೇ ಬಾರಿ ಅಧಿಕಾರವನ್ನು ಎಲ್‌ಡಿಎಫ್ (ಲೆಫ್ಟ್ ಡೆಮಾಕ್ರಟಿಕ್ ಫ್ರಂಟ್) ಪಕ್ಷವು ಪಡೆದುಕೊಂಡಿದೆ.

* ಕೇರಳ ರಾಜ್ಯದಲ್ಲಿ ಸಿಎಂ ಪಿಣರಾಯಿ ವಿಜಯನ್'ರವರು ಮತ್ತೆ ಮುಖ್ಯ ಮಂತ್ರಿಯಾಗಲಿದ್ದಾರೆ ಎಂದು ತಿಳಿಸಲಾಗಿದೆ.

* ಪುದುಚೇರಿ: ರಾಜ್ಯದಲ್ಲಿ ಬಿಜೆಪಿ ಪಕ್ಷವು ಗೆಲುವು ಸಾಧಿಸಿದೆ.

## ಕರ್ನಾಟಕ ರಾಜ್ಯದ ಉಪಚುನಾವಣೆ ಫಲಿತಾಂಶ ಪ್ರಕಟ 2021



* ಕರ್ನಾಟಕ ರಾಜ್ಯದಲ್ಲಿ ಏಪ್ರಿಲ್ 17ರಂದು ಒಂದು ಲೋಕಸಭೆ ಬೆಳಗಾವಿ ಹಾಗೂ ಎರಡು ವಿಧಾನಸಭೆ ಬಸವಕಲ್ಯಾಣ, ಮಸ್ಕಿ ಕ್ಷೇತ್ರಗಳ ಉಪ ಚುನಾವಣೆಗೆ ಮತದಾನ ನಡೆಸಲಾಯಿತು, ಇದೀಗ ಈ 3 ಕ್ಷೇತ್ರಗಳ ಉಪಚುನಾವಣೆ ಫಲಿತಾಂಶ ಪ್ರಕಟವಾಗಿದೆ.

* ಬೆಳಗಾವಿ ಲೋಕಸಭೆ ಕ್ಷೇತ್ರದ ಉಪ ಚುನಾವಣೆಯಲ್ಲಿ ಬಿಜೆಪಿ ಪಕ್ಷದ ವತಿಯಿಂದ ಮಂಗಳ ಅಂಗಡಿಯವರು ಜಯ ಗಳಿಸಿದ್ದಾರೆ, ಪ್ರಸ್ತುತ ಬೆಳಗಾವಿ ಲೋಕಸಭಾ ಕ್ಷೇತ್ರ: 54.73% ಮತದಾನ ದಾಖಲಾಗಿದೆ.

* ಬಸವಕಲ್ಯಾಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಬಿಜೆಪಿ ಪಕ್ಷದ ವತಿಯಿಂದ ಶರಣು ಸಲಗರ ಅವರು ಜಯ ಗಳಿಸಿದ್ದಾರೆ, ಕ್ಷೇತ್ರ: 59.57% ಮತದಾನ ದಾಖಲಾಗಿದೆ.

* ಮಸ್ಕಿ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ ಬಸನಗೌಡ ತುರವಿಹಾಳ್ ಗೆಲುವು ಸಾಧಿಸಿದ್ದಾರೆ, ಕ್ಷೇತ್ರ: 70. 48% ಮತದಾನ ದಾಖಲಾಗಿದೆ. ಲೋಕಸಭೆ ಬಗ್ಗೆ ಮಾಹಿತಿ :

* ಲೋಕಸಭೆ ಭಾರತದ ಸಂಸತ್ತಿನ ಎರಡು ಸಭೆಗಳಲ್ಲಿ ಒಂದು (ಇನ್ನೊಂದು ರಾಜ್ಯಸಭೆ), ಲೋಕಸಭೆಯ ಸದಸ್ಯರು ಜನರಿಂದಲೇ ನೇರ ಚುನಾವಣೆಗಳಿಂದ ಚುನಾಯಿತರಾದ ವ್ಯಕ್ತಿಗಳು. ಭಾರತೀಯ ಸಂವಿಧಾನದಂತೆ ಲೋಕಸಭೆ ಗರಿಷ್ಠವಾಗಿ 552 ಸದಸ್ಯರನ್ನು ಹೊಂದಿರಬಲ್ಲುದು.

* ಭಾರತದ ವಿವಿಧ ರಾಜ್ಯಗಳಿಂದ ಗರಿಷ್ಠ 530 ಸದಸ್ಯರು ಚುನಾಯಿತರಾಗುತ್ತಾರೆ. 20 ಸದಸ್ಯರು ಕೇಂದ್ರಾಡಳಿತ

ಪ್ರದೇಶಗಳಿಂದ ಚುನಾಯಿತರಾದರೆ, ಇನ್ನಿಬ್ಬರು ಸದಸ್ಯರನ್ನು ಆಂಗ್ಲೋ ಇಂಡಿಯನ್ ವರ್ಗವನ್ನು ಪ್ರತಿನಿಧಿಸಲು ನೇಮಿಸುವ ಅಧಿಕಾರ ಭಾರತದ ಅಧ್ಯಕ್ಷರಿಗೆ ಅಧಿಕಾರ ನೀಡಲಾಗಿದೆ.

* ಲೋಕಸಭೆಯ ಸದಸ್ಯರಾಗಲು ಕನಿಷ್ಠ 25 ವರ್ಷ ವಯಸ್ಸಾಗಿರಬೇಕು.

* ಲೋಕಸಭೆಯನ್ನು ಕೆಳಮನೆ (ಭಾರತದ ಸಂಸತ್) ಎಂದು ಕರೆಯಲಾಗುತ್ತದೆ.
* ಅಧಿಕಾರಾವಧಿಯ ಮಿತಿಗಳು 5 ವರ್ಷಗಳು
* ಪ್ರಸ್ತುತ ಸ್ಪೀಕರ್: ಓಂ ಬಿರ್ಲಾ, ಭಾರತೀಯ ಜನತಾ ಪಕ್ಷ 19 ಜೂನ್ 2019
* ಕಾರ್ಯದರ್ಶಿ: ಸ್ನೇಹಲತಾ ಶ್ರೀವಾಸ್ತವ 1 ಡಿಸೆಂಬರ್ 2017
* ಆಡಳಿತ ಪಕ್ಷದ ನಾಯಕ ನರೇಂದ್ರ ಮೋದಿ, ಭಾರತೀಯ ಜನತಾ ಪಕ್ಷ 26 ಮೇ 2014

## ಟಿ. ರಬಿ ಶಂಕರ್ RBI ಡೆಪ್ಯೂಟಿ ಗವರ್ನರ್ ಆಗಿ ನೇಮಕ



* ಪ್ರಸ್ತುತ RBI ಡೆಪ್ಯೂಟಿ ಗವರ್ನರ್ ಆಗಿ ಟಿ. ರಬಿ ಶಂಕರ್ ನೇಮಕ ಮಾಡಲಾಗಿದೆ, ಈ ಹಿಂದೆ ಇವರು ನಾರ್ತ್ ಬ್ಲಾಕ್ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಕಾರ್ಯನಿರ್ವಾಹಕ ನಿರ್ದೇಶಕರಾಗಿದ್ದರು, ಮತ್ತು ಇವರು ಕೇಂದ್ರ ಬ್ಯಾಂಕಿನ 4ನೇ ಉಪ ಗವರ್ನರ್ ಆಗಿ ನೇಮಕಗೊಂಡಿದ್ದಾರೆ.

* ಇತ್ತೀಚಿಗೆ ನಿವೃತ್ತರಾದ ಬಿಪಿ ಕನುಂಗೊ ಅವರ ಸ್ಥಾನದಲ್ಲಿ ಶಂಕರ್ ಕೆಲಸ ಮಾಡಲಿದ್ದಾರೆ.

* ಟಿ. ರಬಿ ಶಂಕರ್ ಅವರನ್ನು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಉಪ ಗವರ್ನರ್ ಹುದ್ದೆಗೆ ನೇಮಕ ಮಾಡಲು ಕ್ಯಾಬಿನೆಟ್ ನೇಮಕಾತಿ ಸಮಿತಿ ಅನುಮೋದನೆ ನೀಡಿದೆ.

* ಟಿ. ರಬಿ ಶಂಕರ್ ಅವರು 1990ರ ಸೆಪ್ಟೆಂಬರ್ ತಿಂಗಳಿನಲ್ಲಿ ಕೇಂದ್ರೀಯ ಬ್ಯಾಂಕ್‌ಗೆ ಸಂಶೋಧನಾ ಅಧಿಕಾರಿಯಾಗಿ ನೇಮಕಗೊಂಡಿದ್ದರು.

* ಈ ಹಿಂದಿನ ವರ್ಷ ಟಿ. ರಬಿ ಶಂಕರ್ RBIನ ಸಂಪೂರ್ಣ ಸ್ವಾಮ್ಯದ ಅಂಗಸಂಸ್ಥೆಯಾದ ಭಾರತೀಯ ಹಣಕಾಸು ತಂತ್ರಜ್ಞಾನ ಮತ್ತು ಅಲೈಡ್ ಸರ್ವೀಸಸ್'ನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. RBI ಬಗ್ಗೆ ಮಾಹಿತಿ :

* ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಭಾರತದ ಕೇಂದ್ರ ಬ್ಯಾಂಕ್ ಮತ್ತು ಭಾರತ ಸರ್ಕಾರದ ಹಣಕಾಸು ಸಚಿವಾಲಯದ ವ್ಯಾಪ್ತಿಯಲ್ಲಿರುವ ನಿಯಂತ್ರಕ ಸಂಸ್ಥೆಯಾಗಿದೆ. ಇದು ಭಾರತೀಯ ರೂಪಾಯಿ ವಿತರಣೆ ಮತ್ತು ಪೂರೈಕೆ ಮತ್ತು ಭಾರತೀಯ ಬ್ಯಾಂಕಿಂಗ್ ವ್ಯವಸ್ಥೆಯ ನಿಯಂತ್ರಣಕ್ಕೆ ಕಾರಣವಾಗಿದೆ.

* ರಾಜ್ಯಪಾಲರು: ಶಕ್ತಿಕಾಂತ ದಾಸ್ ಟ್ರೆಂಡಿಂಗ್
* ಮೀಸಲು:, 83,830,997 ಕೋಟಿ (ಯುಎಸ್ $ 540 ಬಿಲಿಯನ್)
* ಮೀಸಲು ಮೇಲಿನ ಬಡ್ಡಿ: 3.35%
* ಬ್ಯಾಂಕ್ ದರ: 4.00%
* ಮಾಲೀಕತ್ವ: ಹಣಕಾಸು ಸಚಿವಾಲಯ, ಭಾರತ ಸರ್ಕಾರ
* ಕರೆನ್ಸಿ: ಭಾರತೀಯ ರೂಪಾಯಿ

## ಪತ್ರಕರ್ತರು ಕೂಡ ಕೋವಿಡ್ ಸೇನಾನಿಗಳು : ಒಡಿಶಾ ರಾಜ್ಯ ಸರ್ಕಾರವು ಘೋಷಣೆ




* ಒಡಿಶಾ ರಾಜ್ಯ ಸರ್ಕಾರವು ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರು ಸಮ್ಮುಖದಲ್ಲಿ ಮಹತ್ವದ ತೀರ್ಮಾನವನ್ನು ತಿಳಿಸಿದೆ, ಅದುವೇ ರಾಜ್ಯದಲ್ಲಿ ಕಾರ್ಯನಿರತ ಪತ್ರಕರ್ತರು ಮುಂಚೂಣಿ ಕೋವಿಡ್ ಸೇನಾನಿಗಳಾಗಿದ್ದಾರೆ ಘೋಷಣೆ ಮಾಡಿದೆ.

* ಪ್ರಸ್ತುತ ಒಡಿಶಾ ರಾಜ್ಯದ ಕಾರ್ಯನಿರತ ಪತ್ರಕರ್ತರು ರಾಜ್ಯದ ಜನರಿಗೆ ಸುದ್ದಿಗಳನ್ನು ನೀಡುವ ಮೂಲಕ ರಾಜ್ಯಕ್ಕೆ ಉತ್ತಮ ಸೇವೆ ಸಲ್ಲಿಸುತ್ತಿದ್ದಾರೆ, ಅದರಲ್ಲಿಯೂ ಈ ಕೋವಿಡ್ 19'ಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಜನರಲ್ಲಿ ಎಚ್ಚರಿಕೆ ಅಥವಾ ಜಾಗೃತಿ ಮೂಡಿಸುತ್ತಿದ್ದಾರೆ ಎಂದು ತಿಳಿಸಿದೆ.

* ಒಡಿಶಾ ಸರ್ಕಾರದ ಈ ಮಹತ್ವದ ತೀರ್ಮಾನದಿಂದಾಗಿ ಗೋಪಬಂಧು ಸಾಂಬದಿಕ ಸ್ವಾಸ್ಥ್ಯ ಭೀಮಾ ಯೋಜನೆ ವ್ಯಾಪ್ತಿಗೆ ಬರುವ 6,944 ಕಾರ್ಯನಿರತ ಪತ್ರಕರ್ತರಿಗೆ ತಲಾ 2 ಲಕ್ಷ ರೂ.ಗಳ ಆರೋಗ್ಯ ವಿಮೆ ಸಿಗಲಿದೆ ಎಂಬ ಮಾಹಿತಿಯನ್ನು ನೀಡಿದ್ದಾರೆ.

## ಭಾರತಕ್ಕೆ ಅಮೆರಿಕದ ರಾಯಭಾರಿಯಾಗಿ ಡೇನಿಯಲ್ ಸ್ಮಿತ್ ನೇಮಕ



* ಡೇನಿಯಲ್ ಸ್ಮಿತ್ ಅವರು ಭಾರತಕ್ಕೆ ಅಮೆರಿಕದ ರಾಯಭಾರಿಯಾಗಿ ನೇಮಕಗೊಂಡಿದ್ದಾರೆ, ಇವರು ಪ್ರಭಾರಿ ಸೆಕ್ರೆಟರಿ ಆಫ್ ಸ್ಟೇಟ್ ಮತ್ತು ಹಂಗಾಮಿ ಡೆಪ್ಯುಟಿ ಸೆಕ್ರೆಟರಿ ಆಫ್ ಸ್ಟೇಟ್ ಆಗಿ ಕಾರ್ಯನಿರ್ವಹಿಸಿದ ಫಾರಿನ್ ಸರ್ವೀಸಸ್ ಇನ್ಸ್ಟಿಟ್ಯೂಟ್ ನಿರ್ದೇಶಕರಾದ ಅಂಬಾಸಿಡರ್ ಡೇನಿಯಲ್ ಸ್ಮಿತ್ ಅವರು ಮಧ್ಯಂತರ ಚಾರ್ಜ್ ಡಿ ಅಫೇರ್ಸ್ ಆಗಿ ಕಾರ್ಯ ನಿರ್ವಹಿಸಲಿದ್ದಾರೆ.

* ಅಂಬಾಸಡರ್ ವೃತ್ತಿಜೀವನದ ಅತ್ಯುನ್ನತ ವಿದೇಶಾಂಗ ಸೇವಾ ಶ್ರೇಣಿಯನ್ನು ಡೇನಿಯಲ್ ಸ್ಮಿತ್ ಅವರು ಹೊಂದಿದ್ದಾರೆ.

* ಡೇನಿಯಲ್ ಸ್ಮಿತ್ ಕಲಾ ಪೂರೈಕೆ ತಯಾರಕ ಮತ್ತು ಚಿಲ್ಲರೆ ವ್ಯಾಪಾರಿಯಾಗಿದ್ದಾರೆ.

* 1976ರಲ್ಲಿ ಪ್ರಸಿದ್ಧ ಮುದ್ರಣ ತಯಾರಕ ಕಲಾವಿದ ಡಾನ್ ಸ್ಮಿತ್ ಕಾರ್ಯಾಚರಣೆಯನ್ನು ಸ್ಥಾಪಿಸಿದರು.

* ಪ್ರಸ್ತುತ ಭಾರತಕ್ಕೆ ಅಮೆರಿಕದ ರಾಯಭಾರಿಯಾಗಿ ನೇಮಕ ಗೊಳ್ಳುತ್ತಿರುವ ಡೇನಿಯಲ್ ಸ್ಮಿತ್'ಅವರು ಭಾರತದ ಜೊತೆಯಾಗಿ ಕೆಲಸ ಕಾರ್ಯಗಳನ್ನೂ ಮಾಡಲು ಬದ್ಧರಾಗಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ. ಫಾರಿನ್ ಸರ್ವೀಸಸ್ ಇನ್ಸ್ಟಿಟ್ಯೂಟ್ ಬಗ್ಗೆ ಮಾಹಿತಿ :

* ವಿದೇಶಿ ಸೇವಾ ಸಂಸ್ಥೆ ಯು.ಎಸ್. ವಿದೇಶಾಂಗ ವ್ಯವಹಾರಗಳ ಸಮುದಾಯದ ಉದ್ಯೋಗಿಗಳಿಗೆ ಯುನೈಟೆಡ್ ಸ್ಟೇಟ್ಸ್ ಫೆಡರಲ್ ಸರ್ಕಾರದ ಪ್ರಾಥಮಿಕ ತರಬೇತಿ ಸಂಸ್ಥೆಯಾಗಿದ್ದು, ವಿದೇಶಿ ಮತ್ತು ವಾಷಿಂಗ್ಟನ್‌ನಲ್ಲಿ ಯು.ಎಸ್. ವಿದೇಶಾಂಗ ವ್ಯವಹಾರಗಳ ಹಿತಾಸಕ್ತಿಗಳನ್ನು ಹೆಚ್ಚಿಸಲು ಅಮೆರಿಕದ ರಾಜತಾಂತ್ರಿಕರು ಮತ್ತು ಇತರ ವೃತ್ತಿಪರರನ್ನು ಸಿದ್ಧಪಡಿಸುತ್ತದೆ.

* ಸ್ಥಾಪನೆ: 13 ಮಾರ್ಚ್ 1947
* ವಾರ್ಷಿಕ ಬಜೆಟ್: $ 115 ಮಿಲಿಯನ್ (ಎಫ್‌ವೈ 2012)
* ಉದ್ಯೋಗಿಗಳು: 1,332 (ಡಿಸೆಂಬರ್ 2012 ರಂತೆ)
* ಏಜೆನ್ಸಿ ಕಾರ್ಯನಿರ್ವಾಹಕ: ಡೇನಿಯಲ್ ಬೆನೆಟ್ ಸ್ಮಿತ್, ಎಫ್ ಎಸ್ಐ ನಿರ್ದೇಶಕ
* ಅಂಗಸಂಸ್ಥೆ: ಇತಿಹಾಸಕಾರರ ಕಚೇರಿ
* ಪೋಷಕ ಸಂಸ್ಥೆ: ಯು.ಎಸ್. ರಾಜ್ಯ ಇಲಾಖೆ

### ಫುಟ್‌ಬಾಲ್ ಆಟಗಾರ ರಾಮಕೃಷ್ಣ ವಿಧಿವಶ



* ಫುಟ್ಬಾಲ್ ಆಟಗಾರ ರಾಮಕೃಷ್ಣ ಅವರು ರಾಮಿ ಎಂದೇ ಖ್ಯಾತರಾಗಿದ್ದರು, ಇವರು ತಮ್ಮ 91ನೇ ವಯಸ್ಸಿನಲ್ಲಿ ವಿಧಿವಶರಾದರು.

* ರಾಮಕೃಷ್ಣ ಅವರು ಐಟಿಐ'ಗೆ ಸೇರುವ ಮುಂಚೆ ಮೈಸೂರು ರಾಜ್ಯ ಮತ್ತು ಬೆಂಗಳೂರು ಬ್ಲೂಸ್‌ಗಳನ್ನು ಪ್ರತಿನಿಧಿಸಿದರು, ಮತ್ತು ಇವರು ಪಟಿಯಾಲದ ಭಾರತ ಕ್ರೀಡಾ ಸಂಸ್ಥೆಯಲ್ಲಿ ಕೋಚಿಂಗ್ ಪಡೆದು ಕೊಂಡಿದ್ದರು.

* ರಾಮಕೃಷ್ಣ ಅವರು ಬೆಂಗಳೂರು ವಿಶ್ವವಿದ್ಯಾಲಯವನ್ನು 1952ರಲ್ಲಿ ಪ್ರತಿನಿಧಿಸಿದ್ದರು ಹಾಗೂ 1953ರಿಂದ 1956ರವರೆಗೆ ಕೋಲ್ಕತ್ತ, ಚೆನ್ನೈ, ಕೇರಳದ ಎರ್ನಾಕುಳಂ ಮತ್ತು ತಿರುವನಂತಪುರಂನಲ್ಲಿ ನಡೆದ ಫುಟ್ಬಾಲ್ ಪಂದ್ಯಗಳಲ್ಲಿ ಕರ್ನಾಟಕ ರಾಜ್ಯ ತಂಡವನ್ನು ಪ್ರತಿನಿಧಿಸಿದ್ದರು.

* 1956ರಲ್ಲಿ ಬೆಂಗಳೂರಿನಲ್ಲಿ ನಡೆದಿರುವ ರಷ್ಯಾ ವಿರುದ್ಧದ ಪಂದ್ಯದಲ್ಲಿ ಭಾರತೀಯ ರಾಷ್ಟ್ರೀಯ ತಂಡದ ಪರವಾಗಿ ಆಟವಾಡಿದ್ದರು.

* 1977ರಲ್ಲಿ ಐಟಿಐ ಫೆಡರೇಶನ್ ಕಪ್‌ನ ಮೊದಲ ಆವೃತ್ತಿಯಲ್ಲಿ ಗೆಲುವು ದಾಖಲಿಸಿದ್ದರು, ಹಾಗೂ ಒಂದು ದಶಕಕ್ಕೂ ಹೆಚ್ಚು ಕಾಲ ಐಟಿಐಗೆ ತರಬೇತಿ ನೀಡಿದರು.

## 04-05-2021

### ಮಾಜಿ ಗವರ್ನರ್ ಜಗಮೋಹನ್ ವಿಧಿವಶ



* ಮಾಜಿ ಗವರ್ನರ್ ಜಗಮೋಹನ್ ಮಲ್ಹೋತ್ರಾ ಅವರು ಅನಾರೋಗ್ಯದ ಕಾರಣದಿಂದಾಗಿ ನಿಧನರಾಗಿದ್ದಾರೆ.

* ಜಗಮೋಹನ್ ಮಲ್ಹೋತ್ರಾ ಭಾರತದ ಮಾಜಿ ನಾಗರಿಕ ಸೇವಕ ಮತ್ತು ಭಾರತೀಯ ಜನತಾ ಪಕ್ಷಕ್ಕೆ ಸೇರಿದ ರಾಜಕಾರಣಿಯಾಗಿದ್ದರು.

* ಇವರು ದೆಹಲಿ ಮತ್ತು ಗೋವಾದ ಲೆಫ್ಟಿನೆಂಟ್ ಗವರ್ನರ್ ಆಗಿ, ಹಾಗೂ ಜಮ್ಮು ಮತ್ತು ಕಾಶ್ಮೀರದ 5 ನೇ ಗವರ್ನರ್ ಆಗಿ ಸೇವೆ ಸಲ್ಲಿಸಿದ್ದಾರೆ.

* ಜಗಮೋಹನ್ ಮಲ್ಹೋತ್ರಾ ಅವರು 1927ರ ಸೆಪ್ಟೆಂಬರ್ 25 ರಂದು ಜನಿಸಿದ್ದರು.

* 1970ರ ದಶಕದ ಮಧ್ಯಭಾಗದಲ್ಲಿ ದೆಹಲಿ ಅಭಿವೃದ್ಧಿ ಪ್ರಾಧಿಕಾರದ ಉಪಾಧ್ಯಕ್ಷರಾಗಿ ಜಗಮೋಹನ್ ಮೊದಲ ಬಾರಿಗೆ ಕುಖ್ಯಾತಿಯನ್ನು ಪಡೆದರು, ಅದೇ ಸಮಯದಲ್ಲಿ ಅವರು ಸಂಜಯ್ ಗಾಂಧಿಯವರೊಂದಿಗೆ ಹತ್ತಿರವಾದರು.

* 1975 77 ತುರ್ತು ಪರಿಸ್ಥಿತಿಯಲ್ಲಿ ಸಂಜಯ್ ಗಾಂಧಿ ಜಗಮೋಹನ್ ಅವರನ್ನು ದೆಹಲಿಯ ಸುಂದರೀಕರಣವನ್ನು ಮಾಡಲು ಒಪ್ಪಿಸಿದರು, ಈ ಕಾರ್ಯವು ದೊಡ್ಡ ಪ್ರಮಾಣದ ಕೊಳೆಗೇರಿಗಳನ್ನು ಉರುಳಿಸುವುದನ್ನು ಒಳಗೊಂಡಿತ್ತು.

* ಜಗಮೋಹನ್ ಅವರಿಗೆ 1977ರಲ್ಲಿ ಪದ್ಮಭೂಷಣ ನೀಡಿ ಗೌರವಿಸಲಾಗಿತ್ತು.

## ಭಾರತಕ್ಕೆ 510 ಕೋಟಿ ರೂ. ಔಷಧ ದೇಣಿಗೆ ನೀಡಿದ ಫೈಝರ್ ಕಂಪನಿ



* ಭಾರತಕ್ಕೆ 510 ಕೋಟಿ ರೂ. ಅಧಿಕ ಮೌಲ್ಯದ ಔಷಧಿಗಳನ್ನು ಅಮೇರಿಕದ ಔಷಧ ಉತ್ಪಾದಕ ಕಂಪೆನಿ ಫೈಝರ್ ತನ್ನ ಅಮೆರಿಕ, ಯುರೋಪ್'ನಲ್ಲಿರುವ ವಿತರಣಾ ಕೇಂದ್ರಗಳಿಂದ ಭಾರತಕ್ಕೆ ನೀಡಲಾಗುತ್ತಿದೆ ಎಂದು ಕಂಪೆನಿಯ ಅಧ್ಯಕ್ಷ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆಲ್ಬರ್ಟ್ ಬೋರ್ಲಾ ಮಾಹಿತಿಯನ್ನು ನೀಡಿದ್ದಾರೆ.

* ಭಾರತ ದೇಶಾದ್ಯಂತ ಇರುವ ಎಲ್ಲ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕೋವಿಡ್ 19 ರೋಗಿಗಳು ಫೈಝರ್ ಔಷಧಿಗಳನ್ನು ಉಚಿತವಾಗಿ ಪಡೆಯಲು ಸಾಧ್ಯವಾಗುವಂತೆ ಈ ಔಷಧಿಗಳನ್ನು ನೀಡುತ್ತಿದ್ದೇವೆ ಎಂದು ಫೈಝರ್ ಕಂಪನಿ ಅಧ್ಯಕ್ಷ ಆಲ್ಬರ್ಟ್ ಬೋರ್ಲಾ ಹೇಳಿದರು.

## ಭಾರತಕ್ಕೆ ಆಮ್ಲಜನಕ ಉತ್ಪಾದನಾ ಘಟಕ ಮತ್ತು ತಜ್ಞರ ತಂಡ ರವಾನಿಸಿದ ಇಟಲಿ



* ಭಾರತದಲ್ಲಿ ಕೊರೊನಾ ವೈರಸ್ 2ನೇ ಅಲೆ ವ್ಯಾಪಕವಾಗಿ ಹರಡುತ್ತಿರುವ ಹಿನ್ನಲೆಯಿಂದಾಗಿ ಪ್ರಸ್ತುತ ಭಾರತ ದೇಶಕ್ಕೆ ಸಹಾಯ ಮಾಡಲು ಇಟಲಿ ದೇಶವು ತಜ್ಞರ ತಂಡ ಮತ್ತು ಆಮ್ಲಜನಕ ಉತ್ಪಾದನಾ ಘಟಕ ಹಾಗೂ 20 ವೆಂಟಿಲೇಟರ್'ನ್ನು ಭಾರತಕ್ಕೆ ನೀಡಿದೆ.

* ಇಟಲಿಯ ವಾಯುಪಡೆ ಸಿ 130 ವಿಮಾನವು ವೈದ್ಯಕೀಯ ಉಪಕರಣ ಮತ್ತು ತಜ್ಞರ ತಂಡವು ದೆಹಲಿಗೆ ಬಂದಿದೆ, ಭಾರತದಲ್ಲಿರುವ ಇಟಲಿಯ ರಾಯಭಾರಿ ವಿನ್ಸೆಂಜೋ ಡಿ ಲೂಕಾ ಅವರು ಭಾರತದ ರಾಯಭಾರಿ ಉಗೊ ಅಸ್ತುಟೊ ಜೊತೆಯಾಗಿ ಸ್ವಾಗತ ಮಾಡಿಕೊಂಡರು.

* ಪ್ರಸ್ತುತ ಭಾರತ ದೇಶಕ್ಕೆ ಸಹಾಯ ನೀಡಲು ಮುಂದಾಗಿರುವ ಹಲವು ಪ್ರಮುಖ ದೇಶಗಳು ಅಮೆರಿಕ, ರಷ್ಯಾ, ಫ್ರಾನ್ಸ್, ಜರ್ಮನಿ, ನ್ಯೂಜಿಲ್ಯಾಂಡ್, ಆಸ್ಟ್ರೇಲಿಯಾ, ಐರ್ಲೆಂಡ್, ಬೆಲ್ಜಿಯಂ, ಪೋರ್ಚುಗಲ್, ರೊಮೇನಿಯಾ, ಲಕ್ಸೆಂಬರ್ಗ್, ಸಿಂಗಾಪುರ್, ಸ್ವೀಡನ್, ಕುವೈತ್ ಈ ಎಲ್ಲ ದೇಶಗಳು ಭಾರತಕ್ಕೆ ಸಹಾಯಸ್ತ ನೀಡಿವೆ.

## ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಬಿಲೀವ್ ಇನ್ ಸ್ಪೋರ್ಟ್ಸ್ ಅಭಿಯಾನಕ್ಕೆ ರಾಯಭಾರಿಗಳ ನೇಮಕ



* ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಬಿಲೀವ್ ಇನ್ ಸ್ಪೋರ್ಟ್ಸ್ ಅಭಿಯಾನಕ್ಕೆ ರಾಯಭಾರಿಗಳ ನೇಮಕ ಮಾಡಲಾಗುತ್ತಿದೆ, ಪ್ರಸ್ತುತ ಭಾರತದ ಬ್ಯಾಡ್ಮಿಂಟನ್ ಆಟಗಾರ್ತಿ ಒಲಿಂಪಿಕ್ಸ್'ನಲ್ಲಿ ಬೆಳ್ಳಿ ಪದಕ ವಿಜೇತರಾದ ಪಿ.ವಿ.ಸಿಂಧು ಮತ್ತು ಕೆನಡಾದ ಮಿಶೆಲ್ಲೆ ಲೀ ಅವರು ಬಿಲೀವ್ ಇನ್ ಸ್ಪೋರ್ಟ್ಸ್ ಅಭಿಯಾನಕ್ಕೆ ಕ್ರೀಡಾ ರಾಯಭಾರಿಗಳಾಗಿ ನೇಮಕಗೊಂಡಿದ್ದಾರೆ ಎಂದು ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ ಈ ಮಾಹಿತಿಯನ್ನು ನೀಡಿದೆ.

* ಕಳೆದ ವರ್ಷದ ಏಪ್ರಿಲ್‌ದಿಂದ ಈ ಭಾರತ ಮತ್ತು ಕೆನಡಾದ ಆಟಗಾರ್ತಿಯರು ಬಿಡಬ್ಲ್ಯುಎಫ್'ನ' ಐ ಆಯಮ್ ಬ್ಯಾಡ್ಮಿಂಟನ್ ಅಭಿಯಾನದ ರಾಯಭಾರಿಗಳಾಗಿದ್ದರು.

* ಬಿಲೀವ್ ಇನ್ ಸ್ಪೋರ್ಟ್ಸ್ ಅಭಿಯಾನವನ್ನು ಕೋಚ್‌ಗಳು ಹಾಗೂ ಸಿಬ್ಬಂದಿ, ಮತ್ತು ಅಥ್ಲೀಟ್‌ಗಳಲ್ಲಿ ಜಾಗೃತಿ ಮೂಡಿಸುವ ಸಲುವಾಗಿ 2018ರಿಂದ ಪ್ರಾರಂಭಿಸಲಾಗಿದೆ.

## ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಶ್ರೀಲಂಕಾ ಕ್ರಿಕೆಟ್‌ಗೆ ತಿಸಾರ ಪೆರೇರ ವಿದಾಯ



* ಶ್ರೀಲಂಕಾ ಕ್ರಿಕೆಟ್ ತಂಡದ ಆಲ್‌ರೌಂಡರ್ ತಿಸಾರ ಪೆರೇರ ಅವರು 2021 ರ ಮೇ 3ರಂದು ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ತಿಳಿಸಿದ್ದಾರೆ, ಮತ್ತು ಯುವ ಆಟಗಾರರಿಗೆ ಅವಕಾಶ ಸಿಗಲಿ ಎಂದು ಶ್ರೀಲಂಕಾ ಕ್ರಿಕೆಟ್‌ಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

* ಇವರು ದೇಶೀಯ ಮತ್ತು ಫ್ರ್ಯಾಂಚೈಸ್ ಕ್ರಿಕೆಟ್‌ನಲ್ಲಿ ಆಡುವುದನ್ನು ಮುಂದುವರಿಸುತ್ತೇನೆ ಎಂದು ತಿಳಿಸಿದ್ದಾರೆ.

* ಶ್ರೀಲಂಕಾ ಕ್ರಿಕೆಟ್ ತಂಡದ ಆಟಗಾರ ಪೆರೇರ ಅವರು 32 ವರ್ಷದವರಾಗಿದ್ದರೆ, ಇವರು 166 ಏಕದಿನ, 6 ಟೆಸ್ಟ್ ಮತ್ತು 84 T20 ಪಂದ್ಯಗಳನ್ನೂ ಶ್ರೀಲಂಕಾ ತಂಡದಲ್ಲಿ ಆಡಿದ್ದಾರೆ.

* ಶ್ರೀಲಂಕಾ ತಂಡವನ್ನು 7 ವಿಶ್ವಕಪ್ ಟೂರ್ನಿಗಳಲ್ಲಿ ಮುನ್ನಡೆಸಿದ್ದಾರೆ, 2014ರ ಬಾಂಗ್ಲಾದೇಶದಲ್ಲಿ ನಡೆದ T20 ವಿಶ್ವಕಪ್‌ನಲ್ಲಿ ಭಾರತ ತಂಡವನ್ನು ಮಣಿಸಿ ಪ್ರಶಸ್ತಿಯನ್ನು

ಪಡೆದಿರುವದರಲ್ಲಿ ನನ್ನ ಪಾತ್ರ ಇದೆ ಎಂದು ತಿಸಾರ ತಿಳಿಸಿದ್ದಾರೆ.

* ತಿಸಾರ ಪೆರೇರ ಅವರು ಮುಖ್ಯವಾಗಿ ಬೌಲಿಂಗ್ ಆಲ್‌ರೌಂಡರ್, ಹಾಗೂ ಆಕ್ರಮಣಕಾರಿ ಎಡಗೈ ಬ್ಯಾಟ್ಸಮನ್ ಆಗಿದ್ದರು ಇವರು ಡೆತ್ ಓವರ್‌ಗಳಲ್ಲಿ ಸಿಕ್ಸರ್‌ಗಳನ್ನು ಹೊಡೆಯುವ ಶಕ್ತಿಯನ್ನು ಹೊಂದಿದ್ದಾರೆ.

## ಟಿ 20 ರ್‍ಯಾಂಕಿಂಗ್' ನಲ್ಲಿ ಭಾರತಕ್ಕೆ 2ನೇ ಸ್ಥಾನ



* ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್‌ನ (ICC) ವಾರ್ಷಿಕ ಕ್ರಮಾಂಕಗಳನ್ನು ಪ್ರಕಟಿಸಿದೆ.

* ಭಾರತ ತಂಡವು T20 ರ್‍ಯಾಂಕಿಂಗ್‌ನಲ್ಲಿ 2ನೇ ಸ್ಥಾನದಲ್ಲಿದೆ ಎಂದು ತಿಳಿಸಿದೆ.

* ಇಂಗ್ಲೆಂಡ್ ತಂಡವು T20 ರ್‍ಯಾಂಕಿಂಗ್ ನಲ್ಲಿ ಪ್ರಥಮ ಸ್ಥಾನದಲ್ಲಿದೆ.

* ನ್ಯೂಜಿಲೆಂಡ್ ತಂಡವು 3ನೇ ಸ್ಥಾನದಲ್ಲಿದೆ.
* ಆಸ್ಟ್ರೇಲಿಯಾ ತಂಡವು 5ನೇ ಸ್ಥಾನದಲ್ಲಿದೆ.
* ಭಾರತ ತಂಡವು ಏಕದಿನ ರ್‍ಯಾಂಕಿಂಗ್ ನಲ್ಲಿ 3ನೇ ಸ್ಥಾನದಲ್ಲಿದೆ.
* ನ್ಯೂಜಿಲೆಂಡ್ ಪ್ರಥಮ ಸ್ಥಾನ ಮತ್ತು ಆಸ್ಟ್ರೇಲಿಯಾ ತಂಡವು 2ನೇ ಸ್ಥಾನದಲ್ಲಿದೆ.

## ನೇಪಾಳ ಪ್ರಧಾನಿ ಮೇ.10ರಂದು ವಿಶ್ವಾಸ ಮತ ಯಾಚನೆ



* ನೇಪಾಳ ಪ್ರಧಾನಮಂತ್ರಿಯಾಗಿರುವ ಕೆ.ಪಿ.ಶರ್ಮಾ ಓಲಿ ಅವರು ಇದೇ ಮೇ. 10ರಂದು ಸಂಸತ್‌ನಲ್ಲಿ ವಿಶ್ವಾಸ ಮತಯಾಚನೆ ಮಾಡಲಿದ್ದಾರೆ.

* ನೇಪಾಳ ಪ್ರಧಾನಿ ಕಳೆದ ಡಿಸಂಬರ್‌ನಲ್ಲಿ ಹಲವು ಸದಸ್ಯರನ್ನು ಕಾನೂನುಬಾಹಿರವಾಗಿ ಡಿಸಾಲ್ವ ಮಾಡಿದ ವಿವಾದಾತ್ಮಕ ತೀರ್ಪಿನ ಹಿನ್ನಲೆಯಿಂದಾಗಿ ವಿಶ್ವಾಸ ಮತ ಯಾಚನೆ ಕೇಳುವ ಪರಿಸ್ಥಿತಿ ಬಂದಿದೆ ಎನ್ನಲಾಗಿದೆ.

* ನೇಪಾಳ ಅಧ್ಯಕ್ಷರಾದ ಬಿದ್ಯಾದೇವಿ ಭಂಡಾರಿ ಅವರು ಪ್ರಧಾನಮಂತ್ರಿ ಕೆ.ಪಿ.ಶರ್ಮಾ ಓಲಿ ಅವರಿಗೆ ಮೇ.10ರಂದು ಅಧಿವೇಶನ ಏರ್ಪಡಿಸಿ ವಿಶ್ವಾಸಮತ ಯಾಚನೆ ಮಾಡುವಂತೆ ಶಿಫಾರಸು ಮಾಡಿದ್ದಾರೆ.

* ನೇಪಾಳ ಅಧ್ಯಕ್ಷರ ಸೂಚನೆ ಮೇರೆಗೆ ಪ್ರಧಾನಮಂತ್ರಿ ಕೆ.ಪಿ.ಶರ್ಮಾ ಓಲಿ ಅವರು ಇದೇ ತಿಂಗಳು ಮೇ.10 ರಂದು ವಿಶ್ವಾಸ ಮತ ಯಾಚನೆ ಮಾಡಲು ತೀರ್ಮಾನವನ್ನು ಕೈಗೊಂಡಿದ್ದಾರೆ.

* ಪ್ರಸ್ತುತ ನೇಪಾಳನ 275 ಸದಸ್ಯರ ಸಂಸತ್‌ನಲ್ಲಿ ಪ್ರಧಾನಮಂತ್ರಿ ಕೆ.ಪಿ.ಶರ್ಮಾ ಓಲಿ ಅವರು ವಿಶ್ವಾಸ ಮತ ಗೆಲ್ಲಬೇಕಾದರೆ 136 ಮತ ಪಡೆಯಬೇಕಾಗಿದೆ.

# 05-05-2021

## ಮನಸ್ ಬಿಹಾರಿ ವರ್ಮಾ ವಿಧಿವಶ



* ದೇಶದ ಮೊದಲ ತೇಜಸ್ ಎಂಬ ಲಘು ಯುದ್ಧ ವಿಮಾನ ಅಭಿವೃದ್ಧಿ ಕಾರ್ಯಗಳಲ್ಲಿ ಪ್ರಮುಖ ಪಾತ್ರ ನಿರ್ವಹಿಸಿರುವ ಏರೋನಾಟಿಕಲ್ ವಿಜ್ಞಾನಿ ಮನಸ್ ಬಿಹಾರಿ ವರ್ಮಾ ತಮ್ಮ 78ನೇ ವಯಸ್ಸಿನಲ್ಲಿ ಇತ್ತೀಚಿಗೆ ವಿಧಿವಶರಾದರು.

* ಮನಸ್ ಬಿಹಾರಿ ವರ್ಮಾ ಅವರು 1943 ಜುಲೈ. 29ರಂದು ಜನಿಸಿದರು, ಭಾರತದ ವೈಮಾನಿಕ ವಿಜ್ಞಾನಿ, ತೇಜಸ್ ಎಂಬ ಲಘು ಯುದ್ಧ ವಿಮಾನದ ಅಭಿವೃದ್ಧಿಕಾರ್ಯಗಳಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ್ದರು.

* 2018ರಲ್ಲಿ ಮನಸ್ ಬಿಹಾರಿ ವರ್ಮಾ ಅವರಿಗೆ ಪದ್ಮಶ್ರೀ ನಾಗರಿಕ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿತ್ತು, ಇವರು ರಕ್ಷಣಾ ಸಂಶೋಧನಾ ಅಭಿವೃದ್ಧಿ ಸಂಸ್ಥೆಯಲ್ಲಿ(DRDO) ಬೆಂಗಳೂರಿನಲ್ಲಿ ಕೆಲಸ ಮಾಡಿದರು.

* ಮನಸ್ ಬಿಹಾರಿ ವರ್ಮಾ ಅವರು ತಮ್ಮ ನಿವೃತ್ತಿಯ ನಂತರ ಬಿಹಾರದಲ್ಲಿ ವಿಜ್ಞಾನ ಶಿಕ್ಷಣವನ್ನು ಉತ್ತೇಜಿಸುವ ಉದ್ದೇಶದಿಂದ ಮೊಬೈಲ್ ಸೈನ್ಸ್ ಲ್ಯಾಬ್ ಅನ್ನು ಆರಂಭಿಸಿದರು.

## ಅಮೆರಿಕದ ಎಚ್1ಬಿ ವೀಸಾ ವಿವಾದಕ್ಕೆ ಕೊನೆ




* ಅಮೆರಿಕದ 7 ಉದ್ಯಮಗಳು ಒಟ್ಟಾರೆ ಸೇರಿಕೊಂಡು ಅಮೆರಿಕದ ಪೌರತ್ವ ಮತ್ತು ವಲಸೆ ಸೇವಾ ಸಂಸ್ಥೆ ವಿರುದ್ಧ ಮಸಾಚುಸೆಟ್ಸ್ ಜಿಲ್ಲಾ ನ್ಯಾಯಾಲಯದಲ್ಲಿ ಹೂಡಿದ್ದ ಮೊಕದ್ದಮೆಯನ್ನು ಕೈ ಬಿಡಲಾಗಿದೆ

ಎಂದು ತಿಳಿದು ಬಂದಿದೆ.

* ಪ್ರಸ್ತುತ ವಿದೇಶಗಳ ಕೆಲಸಗಾರರಿಗೆ ಈ ಹಿಂದೆ ಇರುವಂತೆಯೇ ವಿದೇಶಿ ಕೆಲಸದ ವೀಸಾ ನೀಡಲು ಒಪ್ಪಿಕೊಳ್ಳಗಿದೆ ಇದರಿಂದಾಗಿ ಈ ಮೊಕದ್ದಮೆಯನ್ನು ಕೈ ಬಿಡಲಾಗಿದೆ ಎಂದು ತಿಳಿಸಿದೆ, ಇದರಿಂದ ವಿದೇಶಿ ಕಂಪನಿಗಳಲ್ಲಿ ಕೆಲಸ ಮಾಡುವ ಯೋಚನೆ ಇರುವ ಉದ್ಯೋಗಿಗೆ ಉಪಯೋಗವಾಗಿದೆ.

* ಈ ಹಿಂದೆ ಯುಎಸ್‌ಸಿಐಎಸ್ ಎಚ್ 1ಬಿ ವೀಸಾಗಳಿಗಾಗಿ ಅಕ್ಟೋಬರ್ 1ರ ನಂತರ ಸಲ್ಲಿಸಿರುವ ಅರ್ಜಿಗಳನ್ನು ತಿರಸ್ಕರಿಸಲಾಗಿತ್ತು ಸದ್ಯ ವಲಸೆ ಮಂಡಳಿಯು ಅಮೆರಿಕದ 7 ಉದ್ಯಮಗಳ ಪರವಾಗಿ ಅರ್ಜಿಯನ್ನು ಸಲ್ಲಿಸಿದೆ.

* ಈ ಸಂಧರ್ಭದಲ್ಲಿ ಭಾರತೀಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೀಸಾದೊಂದಿಗೆ ಅಮೇರಿಕಕ್ಕೆ ಪ್ರಯಾಣ ಬೆಳಸಲು ಅಮೆರಿಕ ಸರಕಾರ ಷರತ್ತುಬದ್ಧ ಅನುಮತಿ ನೀಡಿದೆ.

## ಸುಪ್ರೀಂಕೋರ್ಟ್ ನಿಂದ ಪಶ್ಚಿಮ ಬಂಗಾಳ ಸರ್ಕಾರದ ರಿಯಲ್ ಎಸ್ಟೇಟ್ ಕಾನೂನು ರದ್ದು



* ಪಶ್ಚಿಮ ಬಂಗಾಳ ಸರ್ಕಾರವು 2017ರಲ್ಲಿ ಪಶ್ಚಿಮ ಬಂಗಾಳ ಹೌಸಿಂಗ್ ಇಂಡಸ್ಟ್ರಿ ರೆಗ್ಯುಲೇಷನ್ ಕಾಯ್ದೆಯನ್ನು ಜಾರಿಗೆ ತಂದಿದೆ.

* ಈ ಕಾಯ್ದೆಯು ರಿಯಲ್ ಎಸ್ಟೇಟ್ ಕ್ಷೇತ್ರದ ನಿಯಂತ್ರಣಕ್ಕಾಗಿ ಕಾನೂನನ್ನು ರೂಪಿಸಿತ್ತು ಇದೀಗ ಈ ಕಾನೂನನ್ನು ಸುಪ್ರೀಂಕೋರ್ಟ್ ರದ್ದುಪಡಿಸಿದೆ.

* ಪಶ್ಚಿಮ ಬಂಗಾಳ ಸರ್ಕಾರವು ರೂಪಿಸಿರುವ ಈ ಕಾನೂನು ಕೇಂದ್ರದ ರಿಯಲ್ ಎಸ್ಟೇಟ್ ನಿಯಂತ್ರಣ ಮತ್ತು ಅಭಿವೃದ್ಧಿ ಕಾಯ್ದೆಯನ್ನು ಅತಿಕ್ರಮಿಸಿದ್ದರಿದಾಗಿ ಸುಪ್ರೀಂಕೋರ್ಟ್ ಈ ಕಾನೂನ್ನು ರದ್ದುಪಡಿಸಿದೆ.

* ಪಶ್ಚಿಮ ಬಂಗಾಳ ಸರ್ಕಾರವು ರೂಪಿಸಿರುವ ಈ ರಿಯಲ್ ಎಸ್ಟೇಟ್ ಕಾನೂನನಿಂದಾಗಿ ಮನೆ ಖರೀದಿಸುವವರ ಹಿತರಕ್ಷಣೆಯ ಅಂಶವನ್ನು 2017ರ ಕಾನೂನಿನಲ್ಲಿ ನಿರ್ಲಕ್ಷಿಸಲಾಗಿದೆ ಎಂದು ನ್ಯಾಯಮೂರ್ತಿಗಳಾದ ಡಿವೈ ಚಂದ್ರಚೂಡ್ ಮತ್ತು ಎಂ.ಆರ್ ಶಾ ಅವರಿದ್ದ ನ್ಯಾಯಪೀಠದ ಅಭಿಪ್ರಾಯವಾಗಿದೆ ಎಂದು ತಿಳಿಸಿದ್ದಾರೆ.

* ಪ್ರಸ್ತುತ ಈ ಕಾನೂನು ಸಂಸತ್ತಿನ ಅಧಿಪತ್ಯವನ್ನು ಅತಿಕ್ರಮಿಸಿದೆ ಮತ್ತು ಅಸಾಂವಿಧಾನಿಕವಾಗಿದೆ ಎಂದು ನ್ಯಾಯಪೀಠ ಅಭಿಪ್ರಾಯ ತಿಳಿಸಿದೆ.

* ಪ್ರಸ್ತುತ ಪಶ್ಚಿಮ ಬಂಗಾಳದ ಈ ಕಾನೂನು ಕೇಂದ್ರ ಸರಕಾರದ ಕಾನೂನಿಗೆ ಹೋಲುತ್ತದೆ ಆದ್ದರಿಂದ ಈ ಕಾನೂನನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿದೆ ಎಂದು ತಿಳಿಸಿಲಾಗಿದೆ.

## ಪ್ರಧಾನಿ ನರೇಂದ್ರ ಮೋದಿ ಮತ್ತು ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ನಡುವೆ ವರ್ಚುವಲ್ ಸಭೆ



* ಭಾರತ ದೇಶದ ಭ್ರಷ್ಟ ಉದ್ಯಮಿಗಳಾಗಿರುವ ವಿಜಯ್ ಮಲ್ಯ, ನೀರವ್ ಮೋದಿ ಉದ್ಯಮಿಗಳನ್ನೂ ಅತೀ ಶೀಘ್ರವೇ ಭಾರತಕ್ಕೆ ಹಸ್ತಾಂತರ ಮಾಡಲಾಗುವದು ಎಂದು ಈ ವರ್ಚುವಲ್ ಸಭೆಯಲ್ಲಿ ತಿಳಿಸಿದರು.

* ಈ ವರ್ಚುವಲ್ ಸಭೆಯಿಂದಾಗಿ ವಿವಿಧ ಕ್ಷೇತ್ರಗಳಲ್ಲಿ ಉಭಯ ದೇಶಗಳ ನಡುವಿನ ಸಹಕಾರವು ಮತ್ತಷ್ಟು ಉತ್ತಮವಾಗುವ ನಿಟ್ಟಿನಲ್ಲಿ ಭಾರತ ಮತ್ತು ಬ್ರಿಟನ್ ಸಮ್ಮತಿಯನ್ನು ನೀಡಿದವು.

* ಎರಡು ದೇಶಗಳು ದ್ವಿಪಕ್ಷೀಯ ಸಂಬಂಧ ವೃದ್ಧಿಗಾಗಿ ಚರ್ಚೆ ನಡೆಸಿದವು ಎಂದು ವಿದೇಶಾಂಗ ಸಚಿವಾಲಯದ ಕಾರ್ಯದರ್ಶಿ ಸಂದೀಪ್ ಚಕ್ರವರ್ತಿ ಅವರು ಪತ್ರಿಕಾಗೋಷ್ಠಿಯಲ್ಲಿ ವಿವರಣೆಯನ್ನು ನೀಡಿದರು.

* ಕೋವಿಡ್ 19 ಲಸಿಕೆ ಉತ್ಪಾದನಾ ಘಟಕವನ್ನು ಸೀರಂ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ ಬ್ರಿಟನ್‌ನಲ್ಲಿ ಸ್ಥಾಪಿಸಲಿದೆ ಬೋರಿಸ್ ಜಾನ್ಸನ್ ಮಾಹಿತಿಯನ್ನು ನೀಡಿದರು.

* ವರ್ಚುವಲ್ ಸಭೆಯಿಂದಾಗಿ ಭಾರತ ಮತ್ತು ಬ್ರಿಟನ್ ದೇಶಗಳ ಮಧ್ಯೆ ಬಾಂಧವ್ಯ, ವ್ಯಾಪಾರ, ರಕ್ಷಣೆ, ಭದ್ರತೆ, ಹವಾಮಾನ ಬದಲಾವಣೆ ಹಾಗೂ ಆರೋಗ್ಯ ಕ್ಷೇತ್ರದಲ್ಲಿ ಸಹಕಾರವನ್ನು ನೀಡಲು ಸಮ್ಮತಿಯನ್ನು ನೀಡಿವೆ.

## ಭಾರತದ 4 ಆಟಗಾರ್ತಿಯರಿಗೆ "ದ ಹಂಡ್ರೆಡ್ ಕ್ರಿಕೆಟ್" ಟೂರ್ನಿಯಲ್ಲಿ ಆಡಲು BCCI ಅನುಮತಿ



* ಪ್ರಸ್ತುತ ಭಾರತೀಯ 4 ಆಟಗಾರ್ತಿಯರಿಗೆ ಇಂಗ್ಲೆಂಡ್'ನಲ್ಲಿ ಮೊದಲ ಬಾರಿ ನಡೆಯಲಿರುವ "ದ ಹಂಡ್ರೆಡ್ ಕ್ರಿಕೆಟ್" ಟೂರ್ನಿಯಲ್ಲಿ ಆಡಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (BCCI) ಅನುಮತಿಯನ್ನು ನೀಡಿದೆ.

* "ದ ಹಂಡ್ರೆಡ್ ಕ್ರಿಕೆಟ್" (100 ಎಸೆತ) ಟೂರ್ನಿಯ ಜುಲೈ 21ರಿಂದ ನಡೆಯಲಿದೆ, ಈ ಟೂರ್ನಿಯಲ್ಲಿ ಭಾಗವಹಿಸಲು ಹರ್ಮನ್‌ಪ್ರೀತ್, ಸ್ಮೃತಿ ಮಂದಾನ, ದೀಪ್ತಿ ಶರ್ಮಾ ಈ 3 ಆಟಗಾರ್ತಿಗಳ ಹೆಸರನ್ನು ತಿಳಿಸಿದ್ದಾರೆ ಆದರೆ 4ನೇ ಆಟಗಾರ್ತಿಯ ಹೆಸರನ್ನು ತಿಳಿಸಲಾಗಿಲ್ಲ.

* ಜೂನ್ ಜುಲೈ ತಿಂಗಳಿನಲ್ಲಿ ಭಾರತ ಮಹಿಳಾ ಕ್ರಿಕೆಟ್ ತಂಡವು

ಇಂಗ್ಲೆಂಡ್ ಪ್ರವಾಸ ಕೈಗೊಳ್ಳಲಿದೆ, ಅಲ್ಲಿ 1 ಟೆಸ್ಟ್, 3 ಟಿ20 ಮತ್ತು ಏಕದಿನ ಪಂದ್ಯಗಳನ್ನು ಆಡಲಿದ್ದಾರೆ ಎಂದು ತಿಳಿಸಲಾಗಿದೆ, ಈ ಎಲ್ಲ ಸರಣಿಗಳು ಮುಕ್ತಾಯವಾದ ಬಳಿಕ "ದ ಹಂಡ್ರೆಡ್" ಟೂರ್ನಿಯಲ್ಲಿ ಆಡಲು 4 ಆಟಗಾರ್ತಿಯರು ಇಂಗ್ಲೆಂಡ್'ನಲ್ಲಿ ಉಳಿಯಲಿದ್ದಾರೆ ಎಂದು BCCI ತಿಳಿಸಿದೆ.

## ವಿಶ್ವದ ಮೊದಲ ಕೃತಕ ಬುದ್ಧಿವಂತ (ಇಂಟೆಲಿಜೆನ್ಸ್) ಹಡಗು ಮೇಫ್ಲವರ್ 400



* ಮೇಫ್ಲವರ್ 400 ವಿಶ್ವದ ಮೊದಲ ಕೃತಕ ಬುದ್ಧಿವಂತ(ಇಂಟೆಲಿಜೆನ್ಸ್) ಹಡಗಾಗಿದೆ, ಇದು 15M ಉದ್ದ ಮತ್ತು 9 ಟನ್ ತೂಕ ಹೊಂದಿದೆ.

* ಮೇಫ್ಲವರ್ 400 ಈ ಹಡಗು ಸಮುದ್ರ ಮಾಲಿನ್ಯವನ್ನು ಅಧ್ಯಯನ ಮಾಡುತ್ತದೆ ಹಾಗೂ ನೀರಿನಲ್ಲಿರುವ ಪ್ಲಾಸ್ಟಿಕ್‌ಗಳನ್ನು ವಿಶ್ಲೇಷಿಸುವ ಹಡಗಾಗಿದೆ, ಮತ್ತು ಘರ್ಷಣೆಯನ್ನು ಹೇಗೆ ತಪ್ಪಿಸಬೇಕು ಎಂಬುವದನ್ನು ಕೂಡ ಕಲಿಸಲಾಗಿದೆ, ಜೊತೆಗೆ ಇದಕ್ಕೆ 100 ಗಂಟೆಗಳ ಆಡಿಯೊ ಡೇಟಾ ತರಬೇತಿಯನ್ನು ನೀಡಲಾಗಿದೆ.

* ಮೇಫ್ಲವರ್ 400 ಈ ಹಡಗಿನಿಂದಾಗಿ ಸಮುದ್ರ ಪ್ರಾಣಿಗಳ ಇರುವಿಕೆಯನ್ನು ಪತ್ತೆಹಚ್ಚಲು ಆ ಪ್ರಾಣಿಗಳ ಜನಸಂಖ್ಯೆಯ ಮಾಹಿತಿಯನ್ನುನೀಡಲು ಈ ತರಬೇತಿಯನ್ನು ಮಾಡಲಾಗಿದೆ.

* ಹಡಗು ಸೌರ ಫಲಕಗಳಿಂದ ಕೂಡಿದೆ, ಮತ್ತು ಅಟ್ಲಾಂಟಿಕ್ ಸಾಗರವನ್ನು ದಾಟಿದ ಮೊದಲ ಮಾನವರಹಿತ ಮೇಫ್ಲವರ್ ವಾಹನವಾಗಿದೆ.

# 06-05-2021

## RBI ನಿಂದ ಕೋವಿಡ್ 19 ನಿಭಾಯಿಸಲು ತುರ್ತು ಆರೋಗ್ಯಸೇವೆಗಳಿಗೆ 50,000 ಕೋಟಿ



* ಭಾರತದಲ್ಲಿ ಕೋವಿಡ್ 19 ಸಾಂಕ್ರಾಮಿಕ ರೋಗವು ವ್ಯಾಪಕವಾಗಿ ಹರಡುತ್ತಿದೆ ಇದೇ ಕಾರಣದಿಂದ ಭಾರತವು ಈ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು ತುರ್ತು ಆರೋಗ್ಯ ಸೇವೆಗಳಿಗೆ ಭಾರತೀಯ ರಿಸರ್ವ್ ಬ್ಯಾಂಕ್ 50,000 ಕೋಟಿ ರೂ. ನೀಡಲಿದೆ ಎಂದು RBI ಗವರ್ನರ್ ಶಕ್ತಿಕಾಂತ್ ದಾಸ್ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

* ಭಾರತೀಯ ರಿಸರ್ವ್ ಬ್ಯಾಂಕ್'ನಿಂದ, ಲಸಿಕೆ ಉತ್ಪಾದನೆ ಮತ್ತು ಆರೋಗ್ಯದ ತುರ್ತು ಬಳಕೆಗೆ 50,000 ಕೋಟಿ ರೂ. ನೀಡಲು RBI ಸಿದ್ಧವಾಗಿದೆ ಪ್ರಸ್ತುತ ಮಾರ್ಚ್ 31, 2022 ತನಕ ಕೋವಿಡ್ 19 ಸಂಬಂಧಿತ ಸಾಲವನ್ನು RBI ನೀಡಲಿದೆ ಎಂದು ತಿಳಿಸಿದೆ.

* ಇದೇ ಮೇ 20 ರಂದು ಆರ್‌ಬಿಐನಿಂದ 35,000 ಕೋಟಿ ಮೌಲ್ಯದ ಸೆಕ್ಯೂರಿಟಿಗಳ ಖರೀದಿಯ ಎರಡನೇ ಹಂತವನ್ನು ಆರಂಭಿಸಲಿದೆ ಎಂದು ತಿಳಿಸಿದ್ದಾರೆ.

## ಖ್ಯಾತ ವೈಚಾರಿಕ ಸಾಹಿತಿ ಡಾ. ಭಾಸ್ಕರ್ ಮಯ್ಯ ವಿಧಿವಶ



* ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ, ಖ್ಯಾತ ವೈಚಾರಿಕ ಸಾಹಿತಿ ಸಾಲಿಗ್ರಾಮದ ಡಾ.ಭಾಸ್ಕರ್ ಮಯ್ಯ ಅವರು ತಮ್ಮ 70ನೇ ವಯಸ್ಸಿನಲ್ಲಿ ನಿಧನರಾದರು.

* ಡಾ.ಭಾಸ್ಕರ್ ಮಯ್ಯ ಅವರು ಕುಂದಾಪುರದ ಭಂಡಾರಕರ ಕಾಲೇಜು ಮತ್ತು ಮುಲ್ಕಿ ಕಾಲೇಜುಗಳಲ್ಲಿ ಒಟ್ಟು 4 ದಶಕಗಳಿಗೂ ಹೆಚ್ಚು ಸಂಸ್ಕೃತ, ಹಿಂದಿ, ಮತ್ತು ಇಂಗ್ಲಿಷ್ ಭಾಷೆಗಳನ್ನೂ ಬೋಧಿಸಿದ್ದರು ಜೊತೆಗೆ ಹಿಂದಿ ಪ್ರಾಧ್ಯಾಪಕರಾಗಿ ಒಳ್ಳೆಯ ಹೆಸರನ್ನು ಪಡೆದಿದ್ದರು.

* ಡಾ.ಭಾಸ್ಕರ್ ಮಯ್ಯ ಅವರು ಮೈಸೂರು ವಿಶ್ವವಿದ್ಯಾನಿಲಯದಿಂದ Ph.D ಪಡೆದು ಒಟ್ಟು 52 ಪುಸ್ತಕಗಳ ಲೇಖನಗಳನ್ನು ಪ್ರಕಟಣೆ ಮಾಡಿದ್ದಾರೆ, 2002ರಲ್ಲಿ ಪ್ರಧಾನಮಂತ್ರಿ ಶ್ರೀ ಅಟಲ್ ಬಿಹಾರಿ ವಾಜಪೇಯಿ ಅವರಿಂದ ಸನ್ಮಾನ ಗೌರವವನ್ನುಸ್ವೀಕರಿಸಿದ್ದಾರೆ.

* ಕೇಂದ್ರ ಸರ್ಕಾರ 2004ರಲ್ಲಿ ಡಾ.ಭಾಸ್ಕರ್ ಮಯ್ಯ ಅವರ ವೈಚಾರಿಕ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡಿ ಗೌರವನೀಡಿತ್ತು.

## ವಿಶ್ವದ ಅತ್ಯಂತ ಉದ್ದದ ಸೇತುವೆ ಪೋರ್ಚುಗಲ್‌ನಲ್ಲಿ ನಿರ್ಮಾಣ



* ವಿಶ್ವದ ಅತ್ಯಂತ ಉದ್ದದ ಸೇತುವೆ ಪೋರ್ಚುಗಲ್‌ನಲ್ಲಿ ನಿರ್ಮಾಣ ಮಾಡಲಾಗಿದೆ, ಇದು ಪಾದಚಾರಿಗಳ ತೂಗು ಸೇತುವೆಯಾಗಿದೆ ಪ್ರಸ್ತುತ ಈ ಪಾದಚಾರಿಗಳ ತೂಗು ಸೇತುವೆಯನ್ನು ಅನಾವರಣ ಗೊಳಿಸಲಾಗಿದೆ.

* ಈ ಪಾದಚಾರಿಗಳ ಸೇತುವೆ ವಿಶ್ವದ ಅತ್ಯಂತ ಉದ್ದದ ಪಾದಚಾರಿ ತೂಗು ಸೇತುವೆ ಎಂಬ ಕೀರ್ತಿಯನ್ನು ಪಡೆದಿದೆ, ಈ ತೂಗು ಸೇತುವೆ ನಿರ್ಮಾಣ ಕಾರ್ಯವು 2017ರಲ್ಲಿ ಪ್ರಾರಂಭವಾಗಿತ್ತು.

* ಈ ಪಾದಚಾರಿಗಳ ತೂಗು ಸೇತುವೆ 516 ಮೀಟರ್ ಉದ್ದ ಹಾಗೂ ನದಿ ನೀರಿನ ಮಟ್ಟದಿಂದ 175ಮೀ. ಎತ್ತರದಲ್ಲಿದೆ, ಹಾಗೂ ಇದು 6 ವರ್ಷದ ಒಳಗಿನ ಮಕ್ಕಳಿಗೆ ಪ್ರವೇಶ ಇರುವದಿಲ್ಲ ಎಂದು ತಿಳಿಸಿದೆ.

* ಪಾದಚಾರಿಗಳ ಸೇತುವೆಯು ಯುನೆಸ್ಕೋ ಗ್ಲೋಬಲ್ ಜಿಯೋಪಾರ್ಕ್‌ನಲ್ಲಿದೆ, ಈ ಜಿಯೋಪಾರ್ಕ್ ಅಗುಯಿರಿಸ್ ಜಲಪಾತ ಹಾಗೂ ಪೈವಾ ಜಾರ್ಜ್‌ನ್ನು ಒಂದುಗೂಡಿಸುತ್ತದೆ.

## ಕೊರೊನಾ ಲಸಿಕೆ ವಿತರಣೆ ವಿಚಾರಕ್ಕೆ ಪ್ರಧಾನಿ ಮೋದಿ ಕೇರಳ ಸರ್ಕಾರಕ್ಕೆ ಮೆಚ್ಚುಗೆ



* ಕೊರೋನಾ ಲಸಿಕೆಯನ್ನು ಜನರಿಗೆ ನೀಡುವ ವಿಚಾರದಲ್ಲಿ ಕೇರಳ ಸರಕಾರವು ಉತ್ತಮ ಕೆಲಸ ಮಾಡಿದೆ ಎಂದು ಪ್ರಧಾನಿ ಮೋದಿ ಅವರು ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ.

* ದೇಶಾದ್ಯಂತ ಕೋವಿಡ್ 19 ಲಸಿಕೆ ಎಲ್ಲಿಲ್ಲದ ಬೇಡಿಕೆ ಮತ್ತು ಹಾಹಾಕಾರ ನಡೆದಿದೆ, ಇದರಂತೆಯೇ ಕೋವಿಡ್ 19 ಲಸಿಕೆಗಳ ಜನರಿಗೆ ನೀಡುವಲ್ಲಿ ಹಲವು ರಾಜ್ಯಗಳು ಲಸಿಕೆಗಳನ್ನು ಹಾಳುಮಾಡಿದ್ದವು ಇದೀಗ ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕೇರಳ ರಾಜ್ಯವು ಲಸಿಕೆ ವ್ಯರ್ಥ ಮಾಡುವಲ್ಲಿ ಅತಿ ಕಡಿಮೆ ಪ್ರಮಾಣವದ ಲಸಿಕೆಗಳನ್ನೂ ವ್ಯರ್ಥ ಮಾಡಿದೆ ಎಂದು ತಿಳಿದು ಬಂದಿದೆ.

* ಕೇರಳ ರಾಜ್ಯದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ರಾಜ್ಯದಲ್ಲಿ ಯಾವ ತರಹ ಕೊರೊನಾ ಲಸಿಕೆಗಳ ಸದ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂಬುವದನ್ನು ಟ್ವೀಟ್ ಮೂಲಕ ತಿಳಿಸಿದ್ದಾರೆ, ಈ ವಿಚಾರಕ್ಕೆ ಮೋದಿ ಅವರು ಅಭಿನಂದನೆಯನ್ನು ತಿಳಿಸಿದ್ದಾರೆ.

* ಪ್ರಸ್ತುತ ಕೇಂದ್ರ ಸರ್ಕಾರವು ಕೇರಳ ರಾಜ್ಯಕ್ಕೆ 73,38,806 ಡೋಸ್ ಲಸಿಕೆಗಳುನ್ನು ನೀಡಿತ್ತು, ಆದರೆ ಈ ರಾಜ್ಯದಲ್ಲಿ ಒಬ್ಬ ವ್ಯಕ್ತಿಗೆ ಲಸಿಕೆ ನೀಡಿದ ನಂತರ ವ್ಯರ್ಥವಾಗಬಹುದಾದ ಲಸಿಕೆಯನ್ನು ಬಳಸಿಕೊಂಡು ಒಟ್ಟಾರೆ 74,26,164 ಡೋಸ್ ಲಸಿಕೆಯನ್ನು ಕೇರಳ ಸರ್ಕಾರವು ನೀಡಿದೆ.

* ಕೇರಳ ರಾಜ್ಯದ ಆರೋಗ್ಯ ಕಾರ್ಯಕರ್ತರು ಹಾಗೂ ದಾದಿಯರ ಕಾರ್ಯ ಕ್ಷಮತೆ ಮತ್ತು ದಕ್ಷತೆಗೆ ಮೆಚ್ಚುಗೆಯನ್ನು ಪಿಣರಾಯಿ ವಿಜಯನ್ ಟ್ವೀಟ್ ಮೂಲಕ ತಿಳಿಸಿದ್ದಾರೆ.

## 40 ಮೆಟ್ರಿಕ್ ಟನ್ ಆಕ್ಸಿಜನ್ ಬಹ್ರೇನ್ ದೇಶದಿಂದ ಮಂಗಳೂರಿಗೆ ತಲುಪಿದೆ



* ಭಾರತ ಸರ್ಕಾರದ ಒಪ್ಪಂದದಹಾಗೆ ಬಹ್ರೇನ್ ದೇಶದಿಂದ ಕರ್ನಾಟಕದ ಮಂಗಳೂರಿಗೆ 40 ಮೆಟ್ರಿಕ್ ಟನ್ ಆಕ್ಸಿಜನ್ ಹಡಗಿನ ಮೂಲಕ ನವಮಂಗಳೂರು ಬಂದರಿಗೆ ಬಂದು ತಲುಪಿದೆ.

* ಭಾರತ ಸರ್ಕಾರ ಮತ್ತು ಬಹ್ರೇನ್ ದೇಶಗಳ ಒಪ್ಪಂದದಂತೆ 20 ಮೆಟ್ರಿಕ್ ಟನ್'ನ 2ಲಿಕ್ವಿಡ್ ಆಕ್ಸಿಜನ್ ಟ್ಯಾಂಕರ್'ಗಳು ಕರ್ನಾಟಕದ ಮಂಗಳೂರಿಗೆ ಬಂದು ತಲುಪಿವೆ.

* ಭಾರತೀಯ ಕರಾವಳಿಯ ರಕ್ಷಣಾ ಪಡೆಯ INS ತಲ್ವಾರ್ ಆಕ್ಸಿಜನ್ ಟ್ಯಾಂಕರ್'ಗಳನ್ನು ನವಮಂಗಳೂರು ಬಂದರಿನ ಪ್ರದೇಶದಲ್ಲಿ ಕ್ರೇನ್ ಮೂಲಕ ಟ್ಯಾಂಕರ್'ಗಳನ್ನು ಇಳಿಸಲಾಗಿದೆ ಎಂದು ತಿಳಿಸಲಾಗಿದೆ.

* ನವಮಂಗಳೂರು ಬಂದರಿನಲ್ಲಿ ಸಂಗ್ರಹಣೆ ಮಾಡಲಾಗಿರುವ ಆಕ್ಸಿಜನ್'ನ್ನು ರಾಜ್ಯ ಸರ್ಕಾರವು ಯಾವ ಜಿಲ್ಲೆಗೆ ಎಷ್ಟು ರವಾನಿಸಬೇಕು ಎಂದು ರಾಜ್ಯ ಸರ್ಕಾರ ನಿರ್ಧಾರವನ್ನು ಕೈಗೊಳ್ಳಲಿದೆ, ನಂತರ ದಕ್ಷಿಣ ಕನ್ನಡ ಜಿಲ್ಲಾಡಳಿತವು ಆಕ್ಸಿಜನ್'ನ್ನು ಇತರೆ ಜಿಲ್ಲೆಗಳಿಗೆ ಸರಬರಾಜು ಮಾಡಲಿದೆ ಎಂದು ಸರ್ಕಾರ ತಿಳಿಸಿದೆ.

## ಸಾಮಾಜಿಕ ಭದ್ರತಾ ಸಂಹಿತೆಯ ಸೆಕ್ಷನ್ 142

सत्यमेव जयते

MINISTRY OF LABOUR AND EMPLOYMENT

GOVERNMENT OF INDIA

* 2020ರಲ್ಲಿ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯವು ಸಾಮಾಜಿಕ ಭದ್ರತಾ ಸಂಹಿತೆಯ ಸೆಕ್ಷನ್ 142ಕ್ಕೆ ಸೂಚನೆ ನೀಡಿತ್ತು.

* ಸಾಮಾಜಿಕ ಭದ್ರತಾ ಸಂಹಿತೆಯ ಸೆಕ್ಷನ್ 142 ಇದರಿಂದಾಗಿ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯಕ್ಕೆ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳ ಫಲಾನುಭವಿಗಳಿಂದ ಆಧಾರ್ ವಿವರಗಳನ್ನು ಸಂಗ್ರಹಿಸಲು ಸಾಧ್ಯವಾಗಲಿದೆ ಎಂದು ತಿಳಿಸಿದ್ದಾರೆ, ಈ ಸೂಚನೆಯಲ್ಲಿ ವಲಸೆ ಕಾರ್ಮಿಕರು ಕೂಡ ಸೇರಿಕೊಂಡಿದ್ದಾರೆ.

* ಈ ಸಾಮಾಜಿಕ ಭದ್ರತಾ ಸಂಹಿತೆಯ ಸೆಕ್ಷನ್ 142 ನಿಂದಾಗಿ ರಾಷ್ಟ್ರೀಯ ಮಾಹಿತಿ ಕೇಂದ್ರವು ಅಸಂಘಟಿತ ಕಾರ್ಮಿಕರಿಗಾಗಿ ರಾಷ್ಟ್ರೀಯ ದತ್ತಸಂಚಯವನ್ನು ರಚಿಸಲಾಗುತ್ತದೆ ಮತ್ತು ಪೋರ್ಟಲ್'ನಿಂದ ವಲಸೆ ಕಾರ್ಮಿಕರ ಡೇಟಾವನ್ನು ಸಂಗ್ರಹಿಸುವ ಗುರಿಯನ್ನು ಹೊಂದಲಾಗಿದೆ.

* ಕಾರ್ಮಿಕರ ಡೇಟಾವನ್ನು ಸರ್ಕಾರದ ವಿವಿಧ ಯೋಜನೆಗಳು ಬಳಸಲಾಗುತ್ತದೆ.

* ವಿಭಾಗ ಸೆಕ್ಷನ್ 142'ನ ಪ್ರಯೋಜನಗಳು ವೈದ್ಯಕೀಯ ಕಾಯಿಲೆಗಳಿಗೆ ಕೇಂದ್ರದ ಸೇವೆಗಳನ್ನು ಪಡೆಯುವುದು, ಹೆರಿಗೆ ಸೌಲಭ್ಯಗಳು, ವಿಮೆ ಮಾಡಿದ ವ್ಯಕ್ತಿಯಾಗಿ ಪಾವತಿ ಪಡೆಯಬಹುದಾಗಿದೆ ಇನ್ನು ಹೀಗೆ ಹಲವು ಉಪಯೋಗಗಳು.

* ಪ್ರಸ್ತುತ 2019ರಲ್ಲಿ ಸಾಮಾಜಿಕ ಭದ್ರತಾ ಸಂಹಿತೆಯನ್ನು ತರಲಾಯಿತು, ಇದರಿಂದ ಅಸಂಘಟಿತ ಕಾರ್ಮಿಕರಿಗೆ ಸಾರ್ವತ್ರಿಕ ಸಾಮಾಜಿಕ ಭದ್ರತೆ ಮತ್ತು ಕಾರ್ಮಿಕರಿಗೆ ಆರೋಗ್ಯ ಮತ್ತು ವಿಮಾ ಸೌಲಭ್ಯಗಳನ್ನು ನೀಡಲು ಈ ಸಂಹಿತೆಯನ್ನು ಪರಿಚಯಿಸಲಾಗಿದೆ ಎಂದು ತಿಳಸಲಾಗಿತ್ತು.

## ಮರಾಠಾ ಮೀಸಲಾತಿಯನ್ನು ಪ್ರಶ್ನಿಸಿದ ಸುಪ್ರೀಂ ಕೋರ್ಟ್



* ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠವು ಮರಾಠಾ ಕೋಟಾವನ್ನು 50% ಸೀಲಿಂಗ್ ಮಿತಿಯನ್ನು ಮೀರಿ ಅಸಂವಿಧಾನಿಕ ಎಂದು ಹೇಳಿದೆ.

* ಮರಾಠಾ ಸಮುದಾಯಕ್ಕೆ ಉದ್ಯೋಗ ಮತ್ತು ಸಾರ್ವಜನಿಕ ಶಿಕ್ಷಣದಲ್ಲಿ 50% ಮೀಸಲಾತಿಯನ್ನು ಮಹಾರಾಷ್ಟ್ರ ಕಾನೂನನ್ನು ಸುಪ್ರೀಂ ಕೋರ್ಟ್ ಪ್ರಶ್ನಿಸಿದೆ.

* ಈ ಹಿಂದೆ 2016ರಲ್ಲಿ ಮರಾಠರು ಮರಾಠಾ ಕ್ರಾಂತಿ ಮೋರ್ಚಾ ಅಡಿಯಲ್ಲಿ ಒಂದುಗೂಡಿದರು ನಂತರ ಅಹಮದ್ ನಗರದ ಕೋಪಾರ್ಡಿ ಗ್ರಾಮದಲ್ಲಿ 15ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ಹಾಗೂ ಹತ್ಯೆಯನ್ನು ಖಂಡಿಸುವಲ್ಲಿ ಕೈಜೋಡಿಸಿದರು, ಇದೇ ಕಾರಣ ಇಟ್ಟುಕೊಂಡು ಮರಾಠಾ ಸಮುದಾಯಕ್ಕೆ ಶಿಕ್ಷಣ ಸಂಸ್ಥೆಗಳು ಮತ್ತು ಸರ್ಕಾರಿ ಉದ್ಯೋಗಗಳಲ್ಲಿ ಮೀಸಲಾತಿಯನ್ನು ನೀಡಬೇಕೆಂದು 2017ರಲ್ಲಿ ಬೃಹತ್ ರ್ಯಾಲಿಗಳನ್ನು ನಡೆಸಿ ಬಾಲಕಿಗೆ ಉತ್ತಮ ರೀತಿಯಲ್ಲಿ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿದರು.

* ನಂತರ 2018 ರಲ್ಲಿ ರಸ್ತೆಗಿಳಿದು ಪ್ರತಿಭಟನೆಗಳನ್ನೂ ಆರಂಭಿಸಿದರು ಮತ್ತು 'ಏಕ್ ಮರಾಠ ಲಕ್ಷ ಮರಾಠಾ' ಎಂಬ ಘೋಷಣೆಯನ್ನು ಆರಂಭಿಸಿದರು.

* ಮಹಾರಾಷ್ಟ್ರದ ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದ ಕಾಯ್ದೆಯಡಿ 2018ರಲ್ಲಿ ಮಹಾರಾಷ್ಟ್ರ ರಾಜ್ಯ ಸರ್ಕಾರವು ಮರಾಠರಿಗೆ ಮೀಸಲಾತಿ ನೀಡಿತು, ಅದಲ್ಲದೆ ವಿಧಾನಸಭೆ ಹಾಗೂ ಪರಿಷತ್ತು ಎರಡರಲ್ಲೂ ಈ ಕಾಯ್ದೆಗೆ ಅನುಮೋದನೆ ನೀಡಿತು.

# 07-05-2021

## ರಾಜ್ಯದ 40 ಆಸ್ಪತ್ರೆಯಲ್ಲಿ ಆಕ್ಸಿಜನ್ ಘಟಕ ನಿರ್ಮಾಣಕ್ಕೆ ಅನುಮತಿ



* ಕರ್ನಾಟಕ ರಾಜ್ಯದಲ್ಲಿ ಕೋರೋಣ ವೈರಸ್ ಸಾಂಕ್ರಾಮಿಕ ರೋಗದ ಪ್ರಕರಣಗಳು ದಿನದಿಂದ ದಿನಕ್ಕೆ ಏರಿಕೆಯಾಗುತ್ತಿವೆ, ಈ ನಿಟ್ಟಿನಲ್ಲಿ ರಾಜ್ಯದ ಜಿಲ್ಲೆಗಳಲ್ಲಿನ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳು ಕೋವಿಡ್ 19 ರೋಗಿಗಳಿಗೆ ಆಕ್ಸಿಜನ್ ನೀಡಲು ಆರೋಗ್ಯ ಇಲಾಖೆಯು 10 ಜಿಲ್ಲಾ ಆಸ್ಪತ್ರೆ ಮತ್ತು 30 ತಾಲೂಕು ಆಸ್ಪತ್ರೆಗಳಲ್ಲಿ ಆಮ್ಲಜನಕ ಉತ್ಪಾದನಾ ಘಟಕ ಸ್ಥಾಪನೆಗೆ ಅನುಮತಿಯನ್ನು ನೀಡಿದೆ.

* ಪ್ರಸ್ತುತ ರಾಜ್ಯದ 10 ಜಿಲ್ಲಾ ಆಸ್ಪತ್ರೆಗಳಲ್ಲಿ 500 ಎಲ್ ಪಿಎಂ ಹಾಗೂ 30 ತಾಲೂಕು ಆಸ್ಪತ್ರೆಗಳಲ್ಲಿ 390 ಎಲ್‌ಪಿಎಂ ಸಾಮರ್ಥ್ಯದ ಆಮ್ಲಜನಕ ಉತ್ಪಾದನಾ ಘಟಕಗಳನ್ನೂ ನಿರ್ಮಾಣ ಮಾಡಲು ಅನುಮತಿ ನೀಡಿದೆ ಈ ಘಟಕಗಳು ಪಿಎಸ್‌ಎ ತಂತ್ರಜ್ಞಾನದ ಅಡಿಯಲ್ಲಿ ನಿರ್ಮಾಣವಾಗಲಿವೆ.

## ಎಂ. ಕೆ ಸ್ಟಾಲಿನ್ ತಮಿಳುನಾಡು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕಾರ



* ಇತ್ತೀಚಿಗೆ ತಮಿಳುನಾಡು ರಾಜ್ಯದಲ್ಲಿ ವಿಧಾನಸಭೆಗಳ ಚುನಾವಣೆಗಳು ನಡೆದಿದ್ದವು ಅವುಗಳಲ್ಲಿ ತಮಿಳುನಾಡಿನ ಡಿಎಂಕೆ ಪಕ್ಷವು ಗೆಲುವು ಸಾಧಿಸಿತ್ತು.

* ಇದೀಗ ಡಿಎಂಕೆ ಪಕ್ಷದ ಮುಖ್ಯಸ್ಥ ಎಂ.ಕೆ.ಸ್ಟಾಲಿನ್ ಅವರು ತಮಿಳುನಾಡು ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಅಧಿಕಾರವನ್ನು ಸ್ವೀಕರಿಸಿದರು, ಜೊತೆಗೆ 33 ಶಾಸಕರು ಕೂಡ ಸಚಿವ ಸ್ಥಾನದ ಅಧಿಕಾರ ವಹಿಸಿಕೊಂಡರು.

* ತಮಿಳುನಾಡಿನ ರಾಜ್ಯಪಾಲರಾಗಿರುವ ಬನ್ವರಿಲಾಲ್ ಪುರೋಹಿತ್ ಅವರು ಚೆನ್ನೈನ ರಾಜಭವನದಲ್ಲಿ ಎಂ ಕೆ ಸ್ಟಾಲಿನ್ ಅವರಿಗೆ ಪ್ರಮಾಣ ವಚನವನ್ನು ಬೋಧಿಸಿದರು.

* ಪ್ರಸ್ತುತ ಡಿಎಂಕೆ ಪಕ್ಷದ ಮುಖ್ಯಸ್ಥ 69 ವರ್ಷದ ಎಂ ಕೆ ಸ್ಟಾಲಿನ್ ಅವರು ಅಧಿಕಾರವನ್ನು ಸ್ವೀಕರಿಸಿದರು, ಈ ಮೂಲಕ ತಮಿಳನಾಡು ಸರ್ಕಾರದ ಇತಿಹಾಸದಲ್ಲಿಯೇ ಅತ್ಯಂತ ಹಿರಿಯ ವಯಸ್ಸಿನ ನಾಯಕ ಇದೇ ಮೊದಲಬಾರಿಗೆ ಮುಖ್ಯಮಂತ್ರಿ ಸೇವೆ ಸಲ್ಲಿಸಲು ಆರಂಭಿಸಿದ್ದಾರೆ.

* ತಮಿಳುನಾಡಿನಲ್ಲಿ ಎಂ.ಕೆ.ಸ್ಟಾಲಿನ್'ಅವರು 2018 ಆಗಸ್ಟ್. 28ರಿಂದ ಡಿಎಂಕೆ ಪಕ್ಷವನ್ನು ಮುನ್ನಡೆಸುತ್ತಿದ್ದಾರೆ.

## RLD ಮುಖ್ಯಸ್ಥ ಅಜಿತ್ ಸಿಂಗ್ ನಿಧನ



* ಮಾಜಿ ಕೇಂದ್ರ ಸಚಿವ ಮತ್ತು ರಾಷ್ಟ್ರೀಯ ಲೋಕ ದಳ (RLD) ಮುಖ್ಯಸ್ಥರಾಗಿದ್ದ ಚೌಧರಿ ಅಜಿತ್ ಸಿಂಗ್'ರವರು ತಮ್ಮ 82 ವರ್ಷ ವಯಸ್ಸಿನಲ್ಲಿ ಕೋವಿಡ್ 19 ಸೋಂಕಿನಿಂದಾಗಿ ವಿಧಿವಶರಾಗಿದ್ದಾರೆ.

* ಭಾರತೀಯ ರಾಜಕಾರಣಿ ಅಜಿತ್ ಸಿಂಗ್ ಅವರು 1986ರಲ್ಲಿ ರಾಜ್ಯಸಭಾ ಸದಸ್ಯರಾಗಿದ್ದರು, ಇವರು ಮಾಜಿ ಪ್ರಧಾನಿಯಾಗಿದ್ದ ಚೌಧರಿ ಚರಣ್ ಸಿಂಗ್ ಅವರ ಪುತ್ರ.

* ಅಜಿತ್ ಸಿಂಗ್ ಅವರು 7 ಬಾರಿ ಉತ್ತರಪ್ರದೇಶದ ಬಾಗ್

ಪೇಟ್ ಲೋಕಸಭಾ ಕ್ಷೇತ್ರದಿಂದ ಸಂಸತ್ತಿಗೆ ಆಯ್ಕೆಯಾಗಿ ಹಲವು ಉನ್ನತ ಖಾತೆಗಳನ್ನೂ ನಿರ್ವಹಿಸಿದ್ದಾರೆ.

## ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾಗಿ ಮಮತಾ ಬ್ಯಾನರ್ಜಿ ಅಧಿಕಾರ ಸ್ವೀಕಾರ



* ಇತ್ತೀಚಿಗೆ ಪಶ್ಚಿಮ ಬಂಗಾಳದ ರಾಜ್ಯದಲ್ಲಿ ವಿಧಾನಸಭೆ ಚುನಾವಣೆ ನಡೆದವು ಅದರಲ್ಲಿ TMC ಪಕ್ಷವು ಗೆಲುವು ಸಾಧಿಸಿದೆ.

* ಪಶ್ಚಿಮ ಬಂಗಾಳ ರಾಜ್ಯದಲ್ಲಿ ಮೂರನೇ ಬಾರಿ ಮುಖ್ಯಮಂತ್ರಿಯಾಗಿ ಮಮತಾ ಬ್ಯಾನರ್ಜಿ ಅವರು ಪ್ರಮಾಣ ವಚನ ಸ್ವೀಕರಿಸಿದರು.

* ಪಶ್ಚಿಮ ಬಂಗಾಳದ ರಾಜ್ಯಪಾಲರಾದ ಜಗದೀಪ್ ಧನ್‌ಖಡ್'ಅವರು ರಾಜಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ TMC ಪಕ್ಷದ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರಿಗೆ ಪ್ರಮಾಣ ವಚನವನ್ನು ಬೋಧಿಸಿದರು.

* ಪಶ್ಚಿಮ ಬಂಗಾಳದ ನಂದಿಗ್ರಾಮದ ಕ್ಷೇತ್ರದಲ್ಲಿ ಬಿಜೆಪಿಯ ಸುವೇಂದ್ರ ಅಧಿಕಾರಿ ವಿರುದ್ಧ ಮಮತಾ ಬ್ಯಾನರ್ಜಿ ಅವರು ಸೋಲುಕಂಡರು ಮಮತಾ ಅವರಿಗೆ ಕಾನೂನಿನ ಅಡಿಯಲ್ಲಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಲು ಅವಕಾಶವಿತ್ತು.

* ಮಮತಾ ಬ್ಯಾನರ್ಜಿ ಅವರು ನಂದಿಗ್ರಾಮದ ಕ್ಷೇತ್ರದಲ್ಲಿ ಸೋಲು ಅನಿಭವಿಸಿದ್ದಾರೆ ಪ್ರಸ್ತುತ ಇವರು ಸಿಎಂ ಸ್ಥಾನದಲ್ಲಿ ಮುಂದುವರೆಯಲು 6 ತಿಂಗಳ ಒಳಗೆಡೆ ವಿಧಾನಪರಿಷತ್ ಸದಸ್ಯರಾಗಿ ಆಯ್ಕೆಯಾಗಬೇಕು, ಅಥವಾ ಯಾವುದಾದರೂ ಖಾಲಿ ಇರುವ ಕ್ಷೇತ್ರದಲ್ಲಿ ನಾಮಪತ್ರ ಸಲ್ಲಿಸಿ ಉಪಚುನಾವಣೆಯಲ್ಲಿ ಗೆಲ್ಲಬೇಕು, ಒಂದು ಪಕ್ಷ ಅಲ್ಲಿ ಸೋತರೆ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಗುತ್ತದೆ.

* ಪ್ರಸ್ತುತ ಪಶ್ಚಿಮ ಬಂಗಾಳದಲ್ಲಿ ವಿಧಾನಪರಿಷತ್ ನಿರ್ಮೂಲನ ಮಾಡಲಾಗಿದೆ, ಸದ್ಯ ಇವರು ಉಪ ಚುನಾವಣೆಯ ಮೂಲಕವೇ ಗೆಲ್ಲಬೇಕು ಇಲ್ಲವಾದಲ್ಲಿ ಮುಖ್ಯಮಂತ್ರಿ ಸ್ಥಾನ ಕಳೆದುಕೊಳ್ಳುತ್ತಾರೆ.

* ಪಶ್ಚಿಮ ಬಂಗಾಳದಲ್ಲಿ ಒಟ್ಟಾರೆ 292 ವಿಧಾನಸಭೆ ಕ್ಷೇತ್ರಗಳಲ್ಲಿ ಚುನಾವಣೆ ನಡೆದಿದೆ ಅದರಲ್ಲಿ TMC ಪಕ್ಷವು 213 ಸ್ಥಾನ ಗೆದ್ದುಕೊಂಡಿದೆ.

## ಕೋವಿಡ್'ನ ಜಾಗತಿಕ ಕಾರ್ಯಪಡೆಯ ಸಮಿತಿಗೆ 3 ಭಾರತೀಯ CEO ಗಳು ನೇಮಕ




* ಪ್ರಸ್ತುತ ಭಾರತದಲ್ಲಿನ ಕೋವಿಡ್ 19 ವಿರುದ್ಧದ ಹೋರಾಟಕ್ಕೆ ಸಹಾಯವಾಗಲು ಮತ್ತು ಸಂಪನ್ಮೂಲಗಳನ್ನು ಕ್ರೋಡೀಕರಿಸಲು ಜಾಗತಿಕ ಕಾರ್ಯಪಡೆಯ ಸಮಿತಿಯನ್ನು ರಚಿಸಲಾಗಿದೆ.

* ಕೋವಿಡ್'ನ ಜಾಗತಿಕ ಕಾರ್ಯಪಡೆಯ ಸಮಿತಿಗೆ ಭಾರತೀಯ 3 CEOಗಳು ಸುಂದರ್ ಪಿಚೈ, ಡೆಲಾಯ್ಟ್‌ನ ಪುನೀತ್ ರೆಂಜನ್ ಹಾಗೂ ಅಡೋಬ್‌ನ ಶಂತನು ನಾರಾಯಣ್ ಅವರನ್ನು ಸೇರ್ಪಡೆ ಮಾಡಲಾಗಿದೆ.

* ಈ ಮೂರು ಜನ CEOಗಳ ಹೆಸರನ್ನು ಕಾರ್ಯಕಾರಿ ಸಮಿತಿಯ ಪಟ್ಟಿಗೆ ಸೇರ್ಪಡೆ ಮಾಡಿದೆ.

* ಇದು ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಟಾಸ್ಕ್ ಫೋರ್ಸ್ ಆಗಿದೆ, ಇದನ್ನು ಅಮೆರಿಕದ ಚೇಂಬರ್ ಆಫ್ ಕಾಮರ್ಸ್ ಸಂಯೋಜಿಸಿದೆ ಮತ್ತು ಬಿಸಿನೆಸ್ ರೌಂಡ್‌ಟೇಬಲ್ ಬೆಂಬಲವನ್ನು ನೀಡಿದೆ.

* ಅಮೆರಿಕದ ಕಾರ್ಪೊರೇಟ್ ವಲಯ ಕಾನ್ಸನ್ಟ್ರೇಟರ್‌ಗಳನ್ನು ತುರ್ತು ಬಳಕೆಗಾಗಿ ಆರೋಗ್ಯ ಕೇಂದ್ರಗಳಿಗೆ ರವಾನಿಸಿದೆ ಮತ್ತು 1000 ವೆಂಟಿಲೇಟರ್ ಜೂನ್ 3ರ ಹೊತ್ತಿಗೆ ಭಾರತಕ್ಕೆ ತಲುಪಲಿವೆ.

## ಕೋವಿಡ್ 19 ಲಸಿಕೆಗಳಿಗೆ ಪೇಟೆಂಟ್ ಸಂರಕ್ಷಣೆಗೆ ಜಾಗತಿಕ ರದ್ದತಿಗೆ ಅಮೇರಿಕಾ ಬೆಂಬಲ




* ಪ್ರಸ್ತುತ ಅಮೇರಿಕಾ ದೇಶವು ಕೋವಿಡ್ 19 ಲಸಿಕೆಗಳಿಗೆ ಪೇಟೆಂಟ್ ಸಂರಕ್ಷಣೆಗಾಗಿ ಜಾಗತಿಕ ರದ್ದತಿಗೆ ಬೆಂಬಲವನ್ನು ನೀಡಿದೆ, ಭಾರತವು ಈ ಬೆಂಬಲವನ್ನು ಸ್ವಾಗತಿಸಿದೆ.

* ಅಮೇರಿಕ ಸರ್ಕಾರವು ಬೆಂಬಲವನ್ನು ನೀಡಿದ ಈ ಪೇಟೆಂಟ್ ಸಂರಕ್ಷಣೆಯ ಉಪಕ್ರಮಕ್ಕೆ ಭಾರತ ಸ್ವಾಗತಿಸುತ್ತಿದೆ ಈ ರದ್ದತಿಯನ್ನು ಡಬ್ಲ್ಯುಟಿಒನಲ್ಲಿ ತ್ವರಿತವಾಗಿ ಅನುಮೋದಿಸಬಹುದು ಎಂದು ಭಾವಿಸಲಾಗಿದೆ ಎಂದು ವಾಣಿಜ್ಯ ಸಚಿವಾಲಯ ಮಾಹಿತಿಯನ್ನು ನೀಡಿದೆ.

* ಅಮೇರಿಕ ಅಧ್ಯಕ್ಷ ಬಿಡೆನ್ ಅವರು 2021 ಏಪ್ರಿಲ್ 26ರಂದು ಫೋನಿನ ಮೂಲಕ ಪ್ರಧಾನಿ ನರೇಂದ್ರ ಮೋದಿ ಡಬ್ಲ್ಯುಟಿಒನಲ್ಲಿ ಈ ಉಪಕ್ರಮದ ಮಾಹಿತಿ ನೀಡಿದರು.

* ಅಮೇರಿಕ ಅಧ್ಯಕ್ಷ ಬಿಡೆನ್ ಅವರ ಆಡಳಿತವು ಈ ಕೋವಿಡ್ 19 ಲಸಿಕೆಗಳಿಗೆ ಪೇಟೆಂಟ್ ಸಂರಕ್ಷಣೆಯ ಜಾಗತಿಕ ರದ್ದತಿಗೆ ಬೆಂಬಲವನ್ನು ಘೋಷಣೆ ಮಾಡಿದೆ ಹಾಗೂ ವಿಶ್ವ ವಾಣಿಜ್ಯ ಸಂಸ್ಥೆಯಲ್ಲಿ ಈ ರದ್ದತಿಯ ನಿಯಮಗಳ ಮಾಹಿತಿಯ ಮಾತುಕತೆ ನಡೆಯಲಿದೆ ಅಮೇರಿಕ ವಾಣಿಜ್ಯ ಪ್ರತಿನಿಧಿ ಕ್ಯಾಥರೀನ್ ತೈ ಟ್ವೀಟ್ ಮೂಲಕ ತಿಳಿಸಿದ್ದಾರೆ.

## 2021ರ ಕ್ಯೂಎಸ್ ವಿಶ್ವ ವಿಶ್ವವಿದ್ಯಾಲಯ ಶ್ರೇಯಾಂಕ ಪಟ್ಟಿ ಪ್ರಕಟ




* ಜಾಗತಿಕ ಉನ್ನತ ಶಿಕ್ಷಣ ಸಲಹಾ ಕ್ವಾಕ್ವೆರೆಲ್ಲಿ ಸೈಮಂಡ್ಸ್(QS) ವಿಶ್ವ ವಿಶ್ವವಿದ್ಯಾಲಯ ಶ್ರೇಯಾಂಕ ಪಟ್ಟಿ ಸಿದ್ಧಪಡಿಸಿದೆ, ಈ ಶ್ರೇಯಾಂಕ ಪಟ್ಟಿಯಲ್ಲಿ ಐಐಟಿ ಬಾಂಬೆಯು ಭಾರತದಲ್ಲಿಯೇ ಅಗ್ರ ಸ್ಥಾನವನ್ನು ಪಡೆದಿದೆ.

* ದೇಶದ ಅತ್ಯುತ್ತಮ ವಿಶ್ವವಿದ್ಯಾಲಯವಾಗಿ ಐಐಟಿ ಬಾಂಬೆ ಹೊರಹೊಮ್ಮಿದೆ, ಜಾಗತಿಕ ಶ್ರೇಯಾಂಕದಲ್ಲಿ 172ನೇ ಸ್ಥಾನ ಐಐಟಿ ಬಾಂಬೆ ಪಡೆದಿದೆ.

* 2021ರ ಕ್ಯೂಎಸ್ ವಿಶ್ವ ವಿಶ್ವವಿದ್ಯಾಲಯ ಶ್ರೇಯಾಂಕದಲ್ಲಿ ಐಐಎಸ್ ಸಿ ಬೆಂಗಳೂರು 185ನೇ ಸ್ಥಾನ ಪಡೆದಿದೆ ಮತ್ತು ಐಐಟಿ ದೆಹಲಿ 193ನೇ ಸ್ಥಾನ ಪಡೆದರೆ, ಐಐಟಿ ಮದ್ರಾಸ್ 275, ಐಐಟಿ ಖರಗಪುರ 314ನೇ ಹಾಗೂ ಐಐಟಿ ಕಾನ್ಪುರ್ 350ನೇ ಸ್ಥಾನವನ್ನು ಪಡೆದಿದೆ.

* 2021ರ ಕ್ಯೂಎಸ್ ವಿಶ್ವ ವಿಶ್ವವಿದ್ಯಾಲಯ ಶ್ರೇಯಾಂಕ ಪಟ್ಟಿಯ ಪ್ರಕಾರ, ಮ್ಯಾಸಚೂಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಹಾಗೂ ಸ್ಟ್ಯಾಂಡ್‌ಫೋರ್ಡ್ ವಿಶ್ವವಿದ್ಯಾಲಯ, ಮತ್ತು ಅಮೇರಿಕದ ಹಾರ್ವರ್ಡ್ ವಿಶ್ವವಿದ್ಯಾಲಯವು ಪ್ರಸ್ತುತ ವಿಶ್ವದ ಮೂರು ಉನ್ನತ ಶ್ರೇಣಿಯ ವಿಶ್ವ ವಿದ್ಯಾಲಯಗಳಾಗಿವೆ ಎಂದು ಕ್ಯೂಎಸ್ ಶ್ರೇಯಾಂಕ ಪಟ್ಟಿಯಲ್ಲಿ ತಿಳಿಸಲಾಗಿದೆ.

## 08-05-2021

### ಎನ್ ರಂಗಸ್ವಾಮಿ ಪುದುಚೇರಿ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕಾರ



* ಪ್ರಸ್ತುತ ಪುದುಚೇರಿ ನೂತನ ಮುಖ್ಯಮಂತ್ರಿಯಾಗಿ ಎನ್ ರಂಗಸ್ವಾಮಿ ಅವರು ಅಧಿಕಾರವನ್ನು ಸ್ವೀಕರಿಸಿದರು, ಇವರು ಆಲ್ ಇಂಡಿಯಾ ಎನ್‌ಆರ್ ಕಾಂಗ್ರೆಸ್ ಮುಖ್ಯಸ್ಥರಾಗಿದ್ದಾರೆ.

* ಪುದುಚೇರಿಯ ರಾಜ್ಯಪಾಲರಾದ ತಮಿಳಿಸಾಯ್ ಸೌಂದರ ರಾಜನ್ ಅವರು ರಾಜಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಎನ್ ರಂಗಸ್ವಾಮಿ ಅವರಿಗೆ ಪ್ರಮಾಣ ವಚನ ಬೋಧಿಸಿದರು.

* ಎನ್ ರಂಗಸ್ವಾಮಿ ಅವರು ಪುದುಚೇರಿಯಲ್ಲಿ 4ನೇ ಬಾರಿ ಮುಖ್ಯಮಂತ್ರಿಯಾಗಿ ಅಧಿಕಾರವನ್ನು ಸ್ವೀಕರಿಸಿದರು.

* ಪ್ರಸ್ತುತ ಪುದುಚೇರಿಯ 30 ಸ್ಥಾನಗಳ ವಿಧಾನಸಭೆಗೆ ಚುನಾವಣೆ ನಡೆಸಲಾಗಿತ್ತು, ಅದರಲ್ಲಿ ಎನ್‌ಡಿಎ ಮೈತ್ರಿಕೂಟ 16 ಸ್ಥಾನ ಗೆದ್ದು ಬಹುಮತ ಪಡೆದು ಅಧಿಕಾರವನ್ನು ಪಡೆದುಕೊಂಡಿದೆ.

* ಎ.ನಮಶಿವಾಯಂ ಅವರು ಪುದುಚೇರಿಯ ಉಪಮುಖ್ಯಮಂತ್ರಿಯಾಗುವ ಸಾಧ್ಯತೆಗಳಿವೆ ಎಂದು ಪಕ್ಷವು ಮಾಹಿತಿಯನ್ನು ನೀಡಿದೆ.

### ಆರೋಗ್ಯ ಸಂಸ್ಥೆಯು ಚೀನಾದ ಸಿನೋಫಾರ್ಮ್ ಲಸಿಕೆಯ ತುರ್ತು ಬಳಕೆಗೆ ಅನುಮತಿ




* ಪ್ರಸ್ತುತ ಆರೋಗ್ಯ ಸಂಸ್ಥೆಯು ಕೋವಿಡ್ 19 ಸಾಂಕ್ರಾಮಿಕ ರೋಗದ ವಿರುದ್ಧ ರೋಗಿಗಳ ತುರ್ತು ಬಳಕೆಗಾಗಿ ಚೀನಾದ ಸಿನೋಫಾರ್ಮ್ ಲಸಿಕೆಗೆ ಶರತ್ತುಬದ್ಧ ಅನುಮತಿ ನೀಡಿದೆ.

* ವಿಶ್ವ ಆರೋಗ್ಯ ಸಂಸ್ಥೆಯು ಈ ಹಿಂದೆ ಅನೇಕ ದೇಶಗಳ ಫೈಜರ್ /ಬಯೋಎನ್ ಟೆಕ್, ಆಸ್ಟ್ರಾಜೆನೆಕಾ ಎಸ್ ಕೆ ಬಯೋ, ಸೀರಮ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ, ಜಾನ್ಸನ್ ಲಸಿಕೆಗಳನ್ನು ಪಟ್ಟಿಮಾಡಿ ತುರ್ತು ಬಳಕೆಗೆ ಅನುಮತಿಯನ್ನು ನೀಡಿತ್ತು, ಇದೀಗ ಚೀನಾದ ಲಸಿಕೆಯ ತುರ್ತು ಬಳಕೆಗೆ ಅನುಮತಿ ನೀಡಿದೆ.

* ಚೀನಾ ದೇಶದ ಈ ಸಿನೋಫಾರ್ಮ್ ಲಸಿಕೆಯ ಪ್ರಸ್ತುತ 45 ದೇಶಗಳು ಬಳಸಲು ಅನುಮತಿಯನ್ನು ಪಡೆದಿವೆ, ಈ ಹಿಂದೆ ಚೀನಾ ದೇಶದ ಈ ಲಸಿಕೆಗೆ ವಿಶ್ವ ಆರೋಗ್ಯ ಸಂಸ್ಥೆಯ ಬಳಕೆಗೆ ಅನುಮತಿ ನೀಡದ ಕಾರಣ ಅನೇಕ ದೇಶಗಳು ಈ ಲಸಿಕೆಯನ್ನು ಬಳಸಲು ಹಿಂಜರಿಯುತ್ತಿದ್ದವು, ಇದೀಗ ಈ ಲಸಿಕೆ ತುರ್ತು ಬಳಕೆ ಮಾಡಲು ಆರೋಗ್ಯ ಸಂಸ್ಥೆ ಅನುಮತಿಯನ್ನು ನೀಡಿದೆ.

* ಪ್ರಸ್ತುತ ಚೀನಾ ದೇಶವು 5 ಲಸಿಕೆಗಳನ್ನು ತುರ್ತು ಬಳಕೆಗಾಗಿ ಅನುಮೋದಿಸಿದೆ, ಆದರೆ ಕೇವಲ ಸಿನೋಫಾರ್ಮ್ ಮತ್ತು ಸಿನೋವಾಕ್ ಎಂಬ 2 ಲಸಿಕೆಗಳನ್ನು ಬೇರೆ ದೇಶಗಳಲ್ಲಿ ಬಳಕೆ ಮಾಡಲಾಗುತ್ತಿದೆ.

### ಚುನಾವಣಾ ಆಯೋಗದ ವಕೀಲ ರಾಜೀನಾಮೆ



* ಚುನಾವಣಾ ಆಯೋಗದ ವಕೀಲರಾಗಿದ್ದ ಮೋಹಿತ್ ಡಿ. ರಾಮ್ ರಾಜೀನಾಮೆ ನೀಡಿದ್ದಾರೆ.

* ವಕೀಲ ಮೋಹಿತ್ ಡಿ. ರಾಮ್ ಅವರು ಸುಪ್ರೀಂ ಕೋರ್ಟ್‌ನಲ್ಲಿ ಚುನಾವಣಾ ಆಯೋಗವನ್ನು ಪ್ರತಿನಿಧಿಸುತ್ತಿದ್ದರು.

* ಪ್ರಸ್ತುತ ಚುನಾವಣಾ ಆಯೋಗದ ಈಗಿನ ಕಾರ್ಯನಿರ್ವಹಣೆ ಮತ್ತು ತಮ್ಮ ಮೌಲ್ಯಗಳು ಹೊಂದಾಣಿಕೆ ಆಗುತ್ತಿಲ್ಲ ಎಂಬ ಕಾರಣವನ್ನು ನೀಡಿ ಅವರು ರಾಜೀನಾಮೆ ನೀಡಿದ್ದಾರೆ.

## ಅಂಬಾದಾಸ್ ಜೋಶಿ ಗೋವಾ ನೂತನ ಲೋಕಾಯುಕ್ತರಾಗಿ ಪ್ರಮಾಣವಚನ ಸ್ವೀಕಾರ



* ಮುಂಬೈನ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಅಂಬಾದಾಸ್ ಜೋಶಿ ಅವರು ಗೋವಾ ರಾಜ್ಯದ ನೂತನ ಲೋಕಾಯುಕ್ತರಾಗಿ ಗೋವಾದ ರಾಜಭವನದಲ್ಲಿ ಪ್ರಮಾಣವಚನ ಸ್ವೀಕಾರ ಮಾಡಿದರು.

* ನಿವೃತ್ತ ನ್ಯಾಯಮೂರ್ತಿ ಅಂಬಾದಾಸ್ ಜೋಶಿ ಅವರಿಗೆ ಗೋವಾ ರಾಜ್ಯಪಾಲ ಭಗತ್‌ಸಿಂಗ್ ಕೋಶ್ಯಾರಿ ಅವರು ವೀಡಿಯೊ ಕಾನ್ಫರೆನ್ಸ್ ಮೂಲಕ ಪ್ರಮಾಣವಚನ ಬೋಧಿಸಿದರು, ಇವರ ಜೊತೆಯಲ್ಲಿ ಗೋವಾ ಮುಖ್ಯಮಂತ್ರಿ ಪ್ರಮೋದ ಸಾವಂತ್ ಕೂಡ ಇದ್ದರು.

* 2019ರ ಸಪ್ಟೆಂಬರ್‌ನಲ್ಲಿ ಗೋವಾ ರಾಜ್ಯದ ಮಾಜಿ ಲೋಕಾಯುಕ್ತ ಎಂ.ಕೆ.ಮಿಶ್ರಾ ರವರು ನಿವೃತ್ತರಾಗಿದ್ದರು.

* ಸರ್ಕಾರವು ಈ ಹಿಂದೆ ಲೋಕಾಯುಕ್ತ ಖಾಯ್ದೆಯ ತಿದ್ದುಪಡಿ ವಿಧೇಯಕಕ್ಕೆ ಮಂಜೂರಿ ನೀಡಲಾಗಿತ್ತು, ಇದರಿಂದ ಲೋಕಾಯುಕ್ತ ಖಾಯ್ದೆ ತಿದ್ದುಪಡಿ ಮಾಡಿ ಲೋಕಾಯುಕ್ತರ ಅಧಿಕಾರವನ್ನು ಕಡಿಮೆಗೊಳಿಸಲಾಗಿದೆ.

## ಭಾರತಕ್ಕೆ 10 ಸಾವಿರ ಆಮ್ಲಜನಕ ಕಾನ್ಸಂಟ್ರೇಟರ್‌ಗಳ ನೆರವು ನೀಡಿದ ವಿಶ್ವಸಂಸ್ಥೆ



* ವಿಶ್ವಸಂಸ್ಥೆಯ ಅಂಗಸಂಸ್ಥೆಗಳು 10 ಸಾವಿರ ಆಮ್ಲಜನಕ ಕಾನ್ಸಂಟ್ರೇಟರ್'ಗಳು ಹಾಗೂ 1 ಕೋಟಿ ವೈದ್ಯಕೀಯ ಮಾಸ್ಕ್‌ಗಳು ಜೊತೆಗೆ 15 ಲಕ್ಷ ಫೇಸ್‌ಶೀಲ್ಡ್‌ಗಳನ್ನು ಭಾರತಕ್ಕೆ ಕಳುಹಿಸಿಕೊಟ್ಟಿವೆ.

* ವಿಶ್ವಸಂಸ್ಥೆಯು ಕೋವಿಡ್ 19 ಸಾಂಕ್ರಾಮಿಕ ರೋಗವನ್ನು ನಿಯಂತ್ರಿಸಲು ಭಾರತಕ್ಕೆ ವೈದ್ಯಕೀಯ ಉಪಕರಣಗಳನ್ನು ನೀಡಲಾಗುತ್ತದೆ ಎಂದು ವಿಶ್ವಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿ ಅವರ ವಕ್ತಾರ ಸ್ಟೆಫನ್ ದುಜಾರ್ರಿಕ್ ಮಾಹಿತಿಯನ್ನು ನೀಡಿದ್ದಾರೆ.

* ಕೋರೋಣ ಲಸಿಕೆಗಳ ಸಂಗ್ರಹಕ್ಕಾಗಿ ಯುನಿಸೆಫ್ ಉಪಕರಣವನ್ನು ನೀಡಲಿದೆ ಎಂದು ತಿಳಿಸಿದೆ.

* ಪ್ರಸ್ತುತ ವಿಶ್ವ ಆರೋಗ್ಯ ಸಂಸ್ಥೆಯು ತಾತ್ಕಾಲಿಕವಾಗಿ ಆರೋಗ್ಯ ಸೌಲಭ್ಯಗಳಿಗೋಸ್ಕರ ಟೆಂಟ್ ಹಾಗೂ ಬೆಡ್‌ಗಳನ್ನು ನೀಡಿದೆ ಅದರ ಜೊತೆಗೆ ಸಾರ್ವಜನಿಕ ಆರೋಗ್ಯಕ್ಕೆ ಸಂಬಂಧಿಸಿದ ತಜ್ಞ ವೈದ್ಯರನ್ನು ಕೂಡ ನಿಯೋಜಿಸಲಾಗಿದೆ ಎಂದು ಮಾಹಿತಿಯನ್ನು ನೀಡಿದ್ದಾರೆ.

## ವಿಶ್ವ ಥಲಸ್ಸೆಮಿಯಾ ದಿನ ಆಚರಣೆ




* ಪ್ರತಿ ವರ್ಷ ವಿಶ್ವ ಥಲಸ್ಸೆಮಿಯಾ ದಿನವನ್ನು ಮೇ 8ರಂದು ಆಚರಿಸಲಾಗುತ್ತದೆ, ಈ ದಿನವನ್ನು ಥಲಸ್ಸೆಮಿಯಾ ರೋಗಿಗಳನ್ನು ಉತ್ತೇಜಿಸಲು ಆಚರಿಸಲಾಗುತ್ತದೆ.

* ಥಲಸ್ಸೆಮಿಯಾ ಎನ್ನುವ ರೋಗವು ಆನುವಂಶಿಕವಾಗಿರುವ ರಕ್ತದ ಕಾಯಿಲೆಯಾಗಿದೆ, ಈ ರೋಗವು ಪೋಷಕರಿಂದ ಮಕ್ಕಳಿಗೆ ರವಾನಿಸಲಾಗುತ್ತದೆ.

* ವ್ಯಕ್ತಿಯು ಥಲಸ್ಸೆಮಿಯಾ ರೋಗದ ಸೋಂಕಿಗೆ ಒಳಗಾದಾಗ ಆ ಮನುಷ್ಯನ ದೇಹವು ಹಿಮೋಗ್ಲೋಬಿನ್ ಉತ್ಪಾದಿಸುವ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತದೆ, ಮತ್ತು ಹಂತ ಹಂತವಾಗಿ ಕೆಂಪು ರಕ್ತ ಕಣಗಳ ಸಂಖ್ಯೆ ಕಡಿಮೆಯಾಗುತ್ತದೆ ಎಂದು ತಿಳಿದು ಬಂದಿದೆ.

* ಪ್ರಸ್ತುತ ಈ ಥಲಸ್ಸೆಮಿಯಾ ರೋಗವು ದಕ್ಷಿಣ ಏಷ್ಯಾ, ಆಫ್ರಿಕನ್ ಮತ್ತು ಮೆಡಿಟರೇನಿಯನ್ ದೇಶಗಳಲ್ಲಿ ಅತೀ ಹೆಚ್ಚಾಗಿ ಕಾಣಬಹುದಾಗಿದೆ.

* ಪ್ರತಿ ವರ್ಷ ಭಾರತದಲ್ಲಿ ಥಲಸ್ಸೆಮಿಯಾ ರೋಗದ 10,000 ಮಕ್ಕಳು ಜನಿಸುತ್ತಾರೆ.

* ಥಲಸ್ಸೆಮಿಯಾ ರೋಗವು ಕೆಲ ಸಮುದಾಯಗಳಿಗೆ ಅಂದರೆ ಕರ್ನಾಟಕದ ಲಿಂಗಾಯತ, ಮಹಾರಾಷ್ಟ್ರದ ಕೋಲಿಸ್ ಮತ್ತು ಅಗ್ರಿಸ್, ಪಂಜಾಬಿಗಳು ಮತ್ತು ಸಿಂಧಿಗಳಲ್ಲಿ ಹೆಚ್ಚಾಗಿ ಕಾಣಬಹುದು.

* 2020 ಅಕ್ಟೋಬರ್‌ನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಥಲಸ್ಸೆಮಿಯಾ ಬಾಲ್ ಸೇವಾ ಯೋಜನೆಯ ಎರಡನೇ ಹಂತವನ್ನು ಆರಂಭಿಸಿದೆ, ಈ ಯೋಜನೆಯು ಸಿಕಲ್ ಸೆಲ್ ಕಾಯಿಲೆ ಮತ್ತು ಥಲಸ್ಸೆಮಿಯಾಕ್ಕೆ ರೋಗವನ್ನು ಗುಣಪಡಿಸುವ ಗುರಿಯನ್ನು ಹೊಂದಿದೆ.

## ಬಾಲಿವುಡ್'ನ ಸಂಗೀತ ನಿರ್ದೇಶಕ ವನ್ರಾಜ್ ಭಾಟಿಯಾ ನಿಧನ



* ಬಾಲಿವುಡ್'ನ ಹಿರಿಯ ಸಂಗೀತ ನಿರ್ದೇಶಕರಾಗಿರುವ ರಾಷ್ಟ್ರಪ್ರಶಸ್ತಿ ಪುರಸ್ಕೃತ ವನ್ರಾಜ್ ಭಾಟಿಯಾ ಅವರು ತಮ್ಮ 93ನೇ ವಯಸ್ಸಿನಲ್ಲಿ ನಿಧನರಾದರು.

* ಭಾರತೀಯ ಸಿನಿಮಾಗಳಿಗೆ ವನ್ರಾಜ್ ಭಾಟಿಯಾ ಅವರ ಅಪಾರವಾದ ಸಂಗೀತದ ಕೊಡುಗೆಯನ್ನು ನೀಡಿದ್ದಾರೆ.

* 1988ರಲ್ಲಿ ಭಾಟಿಯಾ ಅವರಿಗೆ ಟೆಲಿವಿಷನ್ ಸಿನಿಮಾ

ತಮಸ್'ನ ಅತ್ಯುತ್ತಮ ಸಂಗೀತ ನಿರ್ದೇಶನಕ್ಕಾಗಿ ರಾಷ್ಟ್ರಪ್ರಶಸ್ತಿ ಪಡೆದುಕೊಂಡಿದ್ದಾರೆ.

* 1989 ರಲ್ಲಿ ಸಂಗೀತ್ ನಾಟಕ್ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

* 2012ರಲ್ಲಿ ದೇಶದ ಅತ್ಯುನ್ನತ ಪದ್ಮಶ್ರೀ ಪ್ರಶಸ್ತಿಯನ್ನು ಕೂಡ ಪಡೆದುಕೊಂಡಿದ್ದಾರೆ.

# 10-05-2021

## ರಷ್ಯಾದಿಂದ 361 ಮಿಲಿಯನ್ ಡೋಸ್ ಸ್ಪುಟ್ನಿಕ್ ವಿ ಕೋವಿಡ್ 19 ಲಸಿಕೆ ಭಾರತಕ್ಕೆ




* ರಷ್ಯಾ ದೇಶದ ಸ್ಪುಟ್ನಿಕ್ ವಿ ಕೋವಿಡ್ 19 ಲಸಿಕೆಯ ಸರಿ ಸುಮಾರು 361 ಮಿಲಿಯನ್ ಡೋಸ್ 2022ರ ಮಾರ್ಚ್ ತಿಂಗಳಿನ ಅಂತ್ಯಕ್ಕೆ ಭಾರತವನ್ನು ತಲುಪಲಿವೆ, ಹಾಗೂ ಕೋವಿಡ್ 19 ಲಸಿಕೆಯಿಂದ 36 ಕೋಟಿ ಭಾರತೀಯ ಜನರಿಗೆ ಉಪಯೋಗವಾಗಲಿದೆ ಎಂದು ಅಧಿಕಾರಿಗಳು ಮಾಹಿತಿಯನ್ನು ನೀಡಿದ್ದಾರೆ.

* ರಷ್ಯಾದಿಂದ ಈಗಾಗಲೇ ಮೊದಲನೇ ಹಂತವಾಗಿ ಮೇ.1 ರಂದು 1.5 ಮಿಲಿಯನ್ ಡೋಸ್ ಲಸಿಕೆಯನ್ನು ಭಾರತಕ್ಕೆ ರವಾನಿಸಲಾಗಿದೆ, ಇದೇ ತರಹ ಮೇ'ನಲ್ಲಿ 3 ಮಿಲಿಯನ್, ಹಾಗೂ ಜೂನ್'ನಲ್ಲಿ 5 ಮಿಲಿಯನ್ ಮತ್ತು ಜುಲೈ ತಿಂಗಳಿನಲ್ಲಿ 10 ಮಿಲಿಯನ್ ಸೇರಿದಂತೆ 18 ಮಿಲಿಯನ್ ಸ್ಪುಟ್ನಿಕ್ ವಿ ಲಸಿಕೆಯ ಡೋಸ್‌ಗಳನ್ನು ಭಾರತ ಪಡೆಯಲಿದೆ.

* 2020 ಜೂನ್ ನಿಂದ 2021 ಮಾರ್ಚ್'ವರೆಗೂ ಸುಮಾರು 238 ಮಿಲಿಯನ್ ಕೋವಿಡ್ 19 ಲಸಿಕೆಯ ಡೋಸ್‌ನ್ನು ಭಾರತದಲ್ಲಿಯೇ ಉತ್ಪಾದಿಸಲಾಗಿದೆ.

* ಪ್ರಸ್ತುತ ಕೋವಿಶೀಲ್ಡ್, ಕೋವಾಕ್ಸಿನ್ ಲಸಿಕೆಯ ಮತ್ತು ಸ್ಪುಟ್ನಿಕ್ ವಿ ಈ ಮೂರೂ ಲಸಿಕೆಗಳನ್ನು ಭಾರತದಲ್ಲಿ ಬಳಸಲು ಅನುಮತಿ ಪಡೆದಿವೆ.

## ಇನ್ಫೋಸಿಸ್ ಫೌಂಡೇಶನ್'ನಿಂದ ಕೋವಿಡ್ 19 ನಿಯಂತ್ರಣಕ್ಕೆ 100 ಕೋಟಿ ರೂ.ದೇಣಿಗೆ




* ಭಾರತದಲ್ಲಿ ಕರೋನ ವೈರಸ್'ನ 2ನೇ ಅಲೆ ವ್ಯಾಪಕವಾಗಿ ಹರಡುತ್ತಿರುವ ಹಿನ್ನಲೆಯಿಂದಾಗಿ ಕೋವಿಡ್ 19 ನಿಯಂತ್ರಣಕ್ಕಾಗಿ ಇನ್ಫೋಸಿಸ್ ಫೌಂಡೇಶನ್'ನ ವತಿಯಿಂದ 100 ಕೋಟಿ ರೂಪಾಯಿ ದೇಣಿಗೆ ನೀಡಲಾಗುತ್ತಿದೆ ಎಂದು ಇನ್ಫೋಸಿಸ್ ಫೌಂಡೇಶನ್ ಅಧ್ಯಕ್ಷೆ ಸುಧಾಮೂರ್ತಿ ಅವರು ತಿಳಿಸಿದ್ದಾರೆ.

* ಪ್ರಸ್ತುತ ಕೋವಿಡ್ 19 ಸಾಂಕ್ರಾಮಿಕ ರೋಗದ ನಿಯಂತ್ರಣಕ್ಕೆ ವೆಂಟಿಲೇಟರ್, ಆಕ್ಸಿಜನ್ ಪೂರೈಕೆಗೆ ಮತ್ತು ಮೂಲಸೌಕರ್ಯ ಬಳಕೆಗೆ 100 ಕೋಟಿ ರೂ. ನೀಡುವುದಾಗಿ ಇನ್ಫೋಸಿಸ್ ಫೌಂಡೇಶನ್ ತಿಳಿಸಿದೆ, ಈ ಹಿಂದೆ ಕೂಡ ಅಂದರೆ ಕೋವಿಡ್ 19 ಮೊದಲನೇ ಅಲೇ ನಿಯಂತ್ರಣಕ್ಕಾಗಿ 100 ಕೋಟಿ ರೂ.ಗಳನ್ನೂ ನೀಡಿತ್ತು, ಇದೀಗ ಇನ್ಫೋಸಿಸ್ ಫೌಂಡೇಶನ್'ನ ವತಿಯಿಂದ ಕೋವಿಡ್ 19 ರೋಗದ ವಿರುದ್ಧದ ಭಾರತದ ಹೋರಾಟಕ್ಕೆ ಒಟ್ಟಾರೆ 200 ಕೋಟಿ ರೂ. ದೇಣಿಗೆ ನೀಡಿದಂತಾಗುತ್ತಿದೆ.

## ಚೀನಾದ ಮಾರ್ಚ್ 5ಬಿ ರಾಕೆಟ್'ನ ಅವಶೇಷ ಹಿಂದೂ ಮಹಾಸಾಗರದಲ್ಲಿ ಪತನ



* ಚೀನಾ ದೇಶವು 2021ರ ಏಪ್ರಿಲ್ 29ರಂದು ದಕ್ಷಿಣ ಚೀನಾದ ಹೈನಾನ್ ಪ್ರಾಂತ್ಯದ ವೆನ್ಚಾಂಗ್ ಬಾಹ್ಯಾಕಾಶ ನೌಕೆ ಉಡಾವಣಾ ಕೇಂದ್ರದಿಂದ ಮಾರ್ಚ್ 5ಬಿ ರಾಕೆಟ್ ಬಳಸಿ ಚೀನಾ ತನ್ನ ಬಾಹ್ಯಾಕಾಶ ನಿಲ್ದಾಣದ ಪ್ರಮುಖ ಮಾಡ್ಯೂಲ್ ಅನ್ನು ಬಾಹ್ಯಾಕಾಶಕ್ಕೆ ರವಾನಿಸಿತ್ತು.

* ಇದೀಗ ಚೀನಾ ಉಡಾವಣೆ ಮಾಡಿದ್ದ ಮಾರ್ಚ್ 5ಬಿ ರಾಕೆಟ್ ನಿಯಂತ್ರಣವನ್ನು ತಪ್ಪಿತ್ತು ಸದ್ಯ ಆ ರಾಕೆಟ್ ಭೂಮಿಯನ್ನು ಪ್ರವೇಶಿಸಿದೆ ಅಂದರೆ ಮಾಲ್ಡೀವ್ಸ್ ಸಮೀಪ ಹಿಂದೂ ಮಹಾಸಾಗರದಲ್ಲಿ ರಾಕೆಟ್'ನ ಅವಶೇಷಗಳು ಪತ್ತೆಯಾಗಿವೆ ಎಂದು ತಿಳಿದು ಬಂದಿದೆ.

* ಬೀಜಿಂಗ್ ಕಾಲಮಾನದ ಪ್ರಕಾರ ಬೆಳಗ್ಗೆ 10.24ರ ವೇಳೆಗೆ ಲಾಂಗ್ ಮಾರ್ಚ್ 5ಬಿ ರಾಕೆಟ್‌ನ ಭಗ್ನಾವಶೇಷವು ಭೂ ವಾತಾವರಣವನ್ನು ಪ್ರವೇಶಿಸಿದೆ.

* ಕ್ಯಾಲಿಫೋರ್ನಿಯಾದ ಏರೋಸ್ಪೇಸ್ ಕಾರ್ಪೊರೇಷನ್ ನೀಡಿರುವ ಮಾಹಿತಿಯ ಪ್ರಕಾರ ಇದು ಪ್ರಸ್ತುತ ಭೂಮಿಯ ವಾತಾವರಣವನ್ನು ಮರುಪ್ರವೇಶಿಸಿದ 6ನೇ ಅತೀ ದೊಡ್ಡ ಅವಶೇಷವಾಗಿದೆ ಎಂದು ತಿಳಿಸಿದೆ.

* ಮಾರ್ಚ್ 5ಬಿ ರಾಕೆಟ್ 108 ಅಡಿ ಎತ್ತರ ಮತ್ತು 20 ಸಾವಿರ ಕೆ.ಜಿ. ತೂಕವನ್ನು ಹೊಂದಿತ್ತು.

## ಮ್ಯಾಡ್ರಿಡ್ ಓಪನ್ ಟೆನಿಸ್ ಟೂರ್ನಿ ಪ್ರಶಸ್ತಿ ಗೆದ್ದ ಸಬಲೆಂಕಾ



* ಮ್ಯಾಡ್ರಿಡ್ ಓಪನ್ ಟೆನಿಸ್ ಟೂರ್ನಿಯ ಮಹಿಳೆಯರ ವಿಭಾಗದ ಪ್ರಶಸ್ತಿಯನ್ನು ಬೆಲಾರಸ್'ನ ಅಯಾನ ಸಬಲೆಂಕಾ ಅವರು

ಗೆದ್ದುಕೊಂಡಿದ್ದಾರೆ.

* ಸಬಲೆಂಕಾ ಅವರು ಆಸ್ಟ್ರೇಲಿಯಾದ ಆಯಶ್ಲಿ ಬಾರ್ಟಿ ಅವರ ವಿರುದ್ಧ ನಡೆದ ಫೈನಲ್‌ನಲ್ಲಿ ಜಯಗಳಿಸಿದ್ದಾರೆ, ಪ್ರಸ್ತುತ 10ನೇ ಡಬ್ಲ್ಯೂಟಿಎ ಪ್ರಶಸ್ತಿ ಪಡೆದುಕೊಂಡಿದ್ದಾರೆ, ಇವರು ಆವೆಮಣ್ಣಿನ ಅಂಕಣದಲ್ಲಿ ಜಯಿಸಿದ (ಗೆದ್ದ) ಮೊದಲ ಪ್ರಶಸ್ತಿ ಇದಾಗಿದೆ.

### ಉತ್ತರ ಪ್ರದೇಶ ಸರ್ಕಾರದಿಂದ ಗ್ರಾಮಾಭಿವೃದ್ಧಿ ಇಲಾಖೆ ಸಿಬ್ಬಂದಿಗೆ 50 ಲಕ್ಷ ರೂಪಾಯಿ ಪರಿಹಾರ ಧನ



* ಪ್ರಸ್ತುತ ಉತ್ತರ ಪ್ರದೇಶ ಸರ್ಕಾರವು ಗ್ರಾಮಾಭಿವೃದ್ಧಿ ಇಲಾಖೆ ಸಿಬ್ಬಂದಿ ಕೋವಿಡ್ 19 ರೋಗಕ್ಕೆ ಸಾವನ್ನಪಿದ್ದರೆ ಆ ಸಿಬ್ಬಂದಿಗೆ 50 ಲಕ್ಷ ರೂಪಾಯಿ ಪರಿಹಾರ ಧನವನ್ನು ನೀಡಲಾಗುತ್ತಿದೆ ಎಂದು ತಿಳಿಸಿದೆ, ಗ್ರಾಮೀಣಾಭಿವೃದ್ಧಿ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

* ಉತ್ತರ ಪ್ರದೇಶ ಸರ್ಕಾರದ ಈ ನಿರ್ಧಾರವು ಇಲಾಖೆಗಳಿಗೆ ಬಲ ಬಂದಂತಾಗುತ್ತದೆ ಎಂದು ಉತ್ತರ ಪ್ರದೇಶ ಸರ್ಕಾರವು ಈ ನಿರ್ಧಾರವನ್ನು ಕೈಗೊಂಡಿದೆ ಎಂದು ತಿಳಿದು ಬಂದಿದೆ.

* ಪ್ರಸ್ತುತ ಕೋವಿಡ್ 19 ಸಾಂಕ್ರಾಮಿಕ ರೋಗದ ಸಮಯದಲ್ಲಿ ಕೂಡ ಗ್ರಾಮಾಭಿವೃದ್ಧಿ ಇಲಾಖೆಯು ತನ್ನ ಕೆಲಸ ಕಾರ್ಯಗಳನ್ನು ನಿಲ್ಲಿಸಿಲ್ಲ ಆದ ಕಾರಣ ಈ ಗ್ರಾಮಾಭಿವೃದ್ಧಿ ಇಲಾಖೆಯ ಸಿಬ್ಬಂದಿಗಳಿಗೆ 50 ಲಕ್ಷ ಪರಿಹಾರ ಧನವನ್ನು ನೀಡಲಾಗುವುದು ಎಂದು ಉತ್ತರ ಪ್ರದೇಶ ಸರ್ಕಾರ ತಿಳಿಸಿದೆ.

* ಪ್ರಸ್ತುತ ಈ ಉತ್ತರ ಪ್ರದೇಶ ಸರ್ಕಾರದ ಈ ನಿರ್ಧಾರವು ಸರ್ಕಾರಿ, ಅರೆ ಸರ್ಕಾರಿ, ಒಪ್ಪಂದಿತ, ದೈನಂದಿನ ಸಂಬಳ, ಹೊರಗುತ್ತಿಗೆ, ಸ್ವಾಯತ್ತ ಸಂಸ್ಥೆಗಳಿಗೂ ಕೂಡ ಅನ್ವಯಿಸುತ್ತದೆ ಎಂದು ಈ ಪ್ರಕಟಣೆಯಲ್ಲಿ ತಿಳಿಸಿದೆ.

### ಭಾರತ ಐರೋಪ್ಯ ಒಕ್ಕೂಟವು ವಾಣಿಜ್ಯ ಮಾತುಕತೆಗೆ ಒಪ್ಪಿಗೆ



* ಪ್ರಧಾನಿ ನರೇಂದ್ರ ಮೋದಿ ಅವರು ವರ್ಚುವಲ್ ಸಭೆಯ ಮೂಲಕ ಐರೋಪ್ಯ ಒಕ್ಕೂಟದ 27 ಸದಸ್ಯ ರಾಷ್ಟ್ರಗಳ ನಾಯಕರ ಜೊತೆಗೆ ಮಾತನಾಡಿದರು, ಪ್ರಸ್ತುತ 8 ವರ್ಷಗಳ ನಂತರ ಸಮಗ್ರ ವಾಣಿಜ್ಯ ಒಪ್ಪಂದಗಳ ಮಾತುಕತೆಯನ್ನು ಪುನರಾರಂಭಿಸುವ ನಿರ್ಧಾರವನ್ನು ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದೆ.

* ಇದೇ ವರ್ಚುವಲ್ ಸಭೆಯಲ್ಲಿ ಕೋವಿಡ್ 19 ಲಸಿಕೆಗಳ ಪೇಟೆಂಟ್‌ಗಳನ್ನು ಹಂಚಿಕೊಳ್ಳುವ ಪ್ರಸ್ತಾಪಕ್ಕೆ ಬೆಂಬಲನೀಡುವಂತೆ ಮನವಿ ಮಾಡಿದರು, ಇದರಿಂದ ಜಗತ್ತಿಗೆ ಸಮಾನವಾದ ಲಸಿಕೆ ಸಿಗಲಿದೆ ಎಂದು ಅಧಿಕಾರಿಗಳು ಮಾಹಿತಿಯನ್ನು ನೀಡಿದರು.

* ಭಾರತ ಐರೋಪ್ಯ ಒಕ್ಕೂಟವು ಸಮತೋಲಿತ ಮತ್ತು ಸಮಗ್ರ ಮುಕ್ತ ವ್ಯಾಪಾರ ಮತ್ತು ಹೂಡಿಕೆ ಒಪ್ಪಂದಗಳಿಗಾಗಿ ಮಾತುಕತೆಗಳನ್ನು ಪುನಆರಂಭಿಸಲು ಒಪ್ಪಿಗೆ ಸೂಚಿಸಿವೆ ಎಂದು ವಿದೇಶಾಂಗ ಸಚಿವಾಲಯದ ಕಾರ್ಯದರ್ಶಿ ವಿಕಾಸ್ ಸ್ವರೂಪ್ ತಿಳಿಸಿದ್ದಾರೆ.

* ಪ್ರಸ್ತುತ 2007ರಲ್ಲಿ ಆರಂಭವಾಗಿದ್ದ ಮುಕ್ತ ವಾಣಿಜ್ಯ ಒಪ್ಪಂದದ ಮಾತುಕತೆಯನ್ನು ಸುಂಕ, ಮಾರುಕಟ್ಟೆ ಪ್ರವೇಶ ವಿಷಯಗಳಲ್ಲಿ ಭಿನ್ನಭಿಪ್ರಾಯ ಮೂಡಿದ್ದರಿಂದ 2013ರಲ್ಲಿ ಕೈಬಿಡಲಾಗಿತ್ತು ಎಂದು ತಿಳಿಸಿದೆ, ಇದೀಗ 8ವರ್ಷಗಳ ನಂತರ ಒಪ್ಪಿಗೆಯನ್ನು ಸೂಚಿಸಿವೆ.

## 11-05-2021

### ಮ್ಯಾಡ್ರಿಡ್ ಓಪನ್ ಟೆನಿಸ್ ಟೂರ್ನಿ ಪ್ರಶಸ್ತಿ ಗೆದ್ದ ಅಲೆಕ್ಸಾಂಡರ್ ಜ್ವೆರೇವ್



* ಮ್ಯಾಡ್ರಿಡ್ ಓಪನ್ ಟೆನಿಸ್ ಟೂರ್ನಿಯ ಪುರುಷರ ವಿಭಾಗದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಅಲೆಕ್ಸಾಂಡರ್ ಜ್ವೆರೆವ್ ಅವರ ವಿರುದ್ಧ ಮಟಿಯೊ ಬರೆಟಿನಿ ಅವರು ಆಟವಾಡಿದ್ದರು, ಮತ್ತೆ ಮಟಿಯೊ ಬರೆಟಿನಿ ಅವರು ಅಂತಿಮವಾಗಿ ಕಾಸ್ಪರ್ ರೂಡ್ ಅವರನ್ನು ಸೋಲಿಸಿದರು.

* ಜರ್ಮನಿಯ ಅಲೆಕ್ಸಾಂಡರ್ ಜ್ವೆರೇವ್ 2ನೇ ಬಾರಿಗೆ ಮ್ಯಾಡ್ರಿಡ್ ಓಪನ್ ಟೆನಿಸ್ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ, ಅಲೆಕ್ಸಾಂಡರ್ ಜ್ವೆರೇವ್ ಅವರು ಫೈನಲ್ ಪಂದ್ಯದಲ್ಲಿ ಇಟಲಿಯ ಮ್ಯಾಟೊ ಬೆರೆಟಿನಿ ವಿರುದ್ಧ ಜಯ ಸಾಧಿಸಿದ್ದಾರೆ.

* ಅಲೆಕ್ಸಾಂಡರ್ ಜ್ವೆರೇವ್ ಅವರು 2018ರಲ್ಲಿ ಡೊಮಿನಿಕ್ ಥೀಮ್ ಅವರನ್ನು ಸೋಲಿಸುವ ಮೂಲಕ ಮೊದಲ ಸಲ ಮ್ಯಾಡ್ರಿಡ್ ಓಪನ್ ಚಾಂಪಿಯನ್ ಆಗಿದ್ದರು.

### ಅಮೇರಿಕ ಸರ್ಕಾರದಿಂದ ಪ್ರಾದೇಶಿಕ ತುರ್ತು ಪರಿಸ್ಥಿತಿ ಘೋಷಣೆ




* ಅಮೇರಿಕದ ಅತಿ ದೊಡ್ಡ ಇಂಧನ ಪೈಪ್ಲೈನ್ ವ್ಯವಸ್ಥೆಯು ಮೇಲೆ ಸೈಬರ್ ದಾಳಿ ಆಗಿದೆ ಮತ್ತು ಇಂಧನ ವ್ಯವಸ್ಥೆಯು ಕುಸಿದಿರುವ ಕಾರಣದಿಂದಾಗಿ ಅಮೇರಿಕ ಸರ್ಕಾರವು ಪ್ರಾದೇಶಿಕ

ತುರ್ತು ಪರಿಸ್ಥಿತಿಯನ್ನು ಘೋಷಣೆ ಮಾಡಿದೆ.

* ಅಮೇರಿಕದ ಇಂಧನ ಪೈಪ್ಲೈನ್ ವ್ಯವಸ್ಥೆಯು ಮೇಲೆ ಸೈಬರ್ ದಾಳಿ ಆಗಿರುವದನ್ನು ಎರಡು ದಿನಗಳ ಹಿಂದೆ ಅಷ್ಟೇ ಪತ್ತೆಮಾಡಲಾಗಿದೆ.

* ಟೆಕ್ಸಾಸ್ ಕೊಲ್ಲಿಕರಾವಳಿಯಿಂದ ಪೆಟ್ರೋಲ್ ಮತ್ತು ವಿಮಾನ ಇಂಧನವನ್ನು 8,850 ಕೀ.ಮೀ. ಪೈಪ್ಲೈನ್ ಮೂಲಕ ಪೂರ್ವ ಕರಾವಳಿಗೆ ಸಾಗಿಸಲಾಗುತ್ತಿತ್ತು, ಸರಿ ಸುಮಾರು 5 ಕೋಟಿ ಜನರು ಇದರ ಸದುಪಯೋಗ ಪಡೆಯುತ್ತಿದ್ದರು ಎಂದು ಕೊಲೋನಿಯಲ್ ಪೈಪ್ಲೈನ್ ಕಂಪೆನಿಯು ತಿಳಿಸಿದೆ.

* ಕೊಲೋನಿಯಲ್ ಪೈಪ್ಲೈನ್ ಕಂಪೆನಿಯು ತನ್ನ ಕಂಪ್ಯೂಟರ್ ವ್ಯವಸ್ಥೆಯ ಮೇಲೆ ರ್ಯಾನ್ಸಮ್ವೇರ್ ಎಂಬ ಸಾಫ್ಟ್ವೇರ್'ನ ಮೂಲಕ ದಾಳಿ ಮಾಡಲಾಗಿದೆ ಎಂದು ತಿಳಿಸಿದೆ.

* ಪೈಪ್ಲೈನ್ ಕಂಪೆನಿಯು ಮೇಲೆ ದಾಳಿ ಆಗಿರುವದರಿಂದ ತುರ್ತು ಪರಿಸ್ಥಿತಿಯ ಸಮಯದಲ್ಲಿ ಪೆಟ್ರೋಲ್, ಡೀಸೆಲ್, ವಿಮಾನ ಇಂಧನ ಹಾಗೂ ಪೆಟ್ರೋಲಿಯಂ ಉತ್ಪನ್ನಗಳ ತುರ್ತು ಸಾಗಣೆಗೆ ಪರ್ಯಾಯ ವಿಧಾನವನ್ನು ಕೈಗೊಳ್ಳಲಾಗುವದು ಎಂದು ತಿಳಿಸಿದೆ, ಮತ್ತು ಅಗತ್ಯವಿರುವ ಪರಿಹಾರವನ್ನು ನೀಡುತ್ತೇವೆ ಎಂದು ಸಾರಿಗೆ ಇಲಾಖೆಯು ಮಾಹಿತಿಯನ್ನು ನೀಡಿದೆ.

## ಜೋಸ್ ಜೆ ಕಟ್ಟೂರ್, RBIನ ನೂತನ ಕಾರ್ಯನಿರ್ವಾಹಕ ನಿರ್ದೇಶಕರಾಗಿ ನೇಮಕ



* ಭಾರತೀಯ ರಿಸರ್ವ್ ಬ್ಯಾಂಕ್ (RBI) ನ ನೂತನ ಕಾರ್ಯನಿರ್ವಾಹಕ ನಿರ್ದೇಶಕರಾಗಿ ಜೋಸ್ ಜೆ ಕಟ್ಟೂರ್ ಅವರನ್ನು ನೇಮಕ ಮಾಡಿದೆ.

* ಜೋಸ್ ಜೆ ಕಟ್ಟೂರ್ ಅವರು ಈ ಮೊದಲು ಕರ್ನಾಟಕದ ಪ್ರಾದೇಶಿಕ ನಿರ್ದೇಶಕರಾಗಿ RBI'ನ ಬೆಂಗಳೂರು ಪ್ರಾದೇಶಿಕ ಕಚೇರಿಯ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದರು.

* ಜೋಸ್ ಜೆ ಕಟ್ಟೂರ್ ಅವರು 3 ದಶಕಗಳಿಂದ ಸಂವಹನ, ಮಾನವ ಸಂಪನ್ಮೂಲ ನಿರ್ವಹಣೆ, ಹಣಕಾಸು ಸೇರ್ಪಡೆ, ಮೇಲ್ವಿಚಾರಣೆ, ಕರೆನ್ಸಿ ನಿರ್ವಹಣೆ ಮತ್ತು ಭಾರತದ ಕೇಂದ್ರ ಬ್ಯಾಂಕ್'ನ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

* ಜೋಸ್ ಜೆ ಕಟ್ಟೂರ್ ಅವರು ಕಾರ್ಯಕಾರಿ ನಿರ್ದೇಶಕರಾಗಿ, ಮಾನವ ಸಂಪನ್ಮೂಲ ನಿರ್ವಹಣಾ ಇಲಾಖೆ, ಕಾರ್ಪೊರೇಟ್ ಕಾರ್ಯತಂತ್ರ ಮತ್ತು ಬಜೆಟ್ ಇಲಾಖೆ ಮತ್ತು ರಾಜಭಾಷಾ ಇಲಾಖೆಯ ಮೇಲ್ವಿಚಾರಣೆ ಅಥವಾ ನೋಡಿಕೊಳ್ಳಲಿದ್ದಾರೆ ಎಂದು RBI ತಿಳಿಸಿದೆ.

## ಹಿಮಂತ್ ಬಿಸ್ವಾಸ್ ಶರ್ಮಾ, ಅಸ್ಸಾಂ'ನ 15ನೇ ಸಿಎಂ ಆಗಿ ಪ್ರಮಾಣ ವಚನ ಸ್ವೀಕಾರ



* ಅಸ್ಸಾಂ ರಾಜ್ಯದ 15ನೇ ಮುಖ್ಯಂತ್ರಿಯಾಗಿ 'ಹಿಮಂತ್ ಬಿಸ್ವಾಸ್ ಶರ್ಮಾ' ಪ್ರಮಾಣ ವಚನ ಸ್ವೀಕಾರ ಮಾಡಿದರು, 2021ರ ಏಪ್ರಿಲ್'ನಲ್ಲಿ ನಡೆದ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಮೈತ್ರಿ ಕೂಟ ಬಹುಮತ ಪಡೆಯುವ ಮೂಲಕ ಅಧಿಕಾರ ಪಡೆದಿದ್ದಾರೆ.

* ಅಸ್ಸಾಂ ರಾಜ್ಯಪಾಲ ಪ್ರೊ.ಜಗದೀಶ್ ಮುಖಿ ಅವರು ಗುಹಾತಿಯ ಶಂಕರದೇವ ಅಂತರಾಷ್ಟ್ರೀಯ ಆಡಿಟೋರಿಯಂನಲ್ಲಿ ಏರ್ಪಡಿಸಲಾಗಿದ್ದ ಕಾರ್ಯಕ್ರಮದಲ್ಲಿ ಹಿಮಂತ್ ಬಿಸ್ವಾಸ್ ಶರ್ಮಾ ಅವರಿಗೆ ಪ್ರಮಾಣ ವಚನ ಬೋಧಿಸಿದರು.

* ಈ ಮೊದಲು ಬಿಜೆಪಿಯ ಸರ್ಬಾನಂದ ಸೋನಾವಾಲ್ ಅಸ್ಸಾಂ ರಾಜ್ಯದ ಮುಖ್ಯಮಂತ್ರಿಯಾಗಿದ್ದರು.

## ಟ್ವಿಟರ್'ನಿಂದ 110 ಕೋಟಿ ರೂ. ಭಾರತಕ್ಕೆ ಆರ್ಥಿಕ ನೆರವು




* ಪ್ರಸ್ತುತ ಭಾರತದಲ್ಲಿ ಕೋವಿಡ್ 19 ಎರಡನೇ ಅಲೇ ವ್ಯಾಪಕವಾಗಿ ಹರಡುತ್ತಿರುವ ಹಿನ್ನಲೆಯಿಂದಾಗಿ ಸಾಮಾಜಿಕ ಜಾಲತಾಣ ಟ್ವಿಟರ್ ಸಂಸ್ಥೆಯು 110 ಕೋಟಿ ರೂ.ಗಳನ್ನೂ ಆರ್ಥಿಕ ನೆರವು ನೀಡುವದಾಗಿ ತಿಳಿಸಿದೆ.

* ಟ್ವಿಟರ್ ಸಂಸ್ಥೆಯು ಈ ಆರ್ಥಿಕ ನೆರವನ್ನು ಭಾರತೀಯ ಸರ್ಕಾರದ ಅಡಿಯಲ್ಲಿ ಇರುವ ಸಂಸ್ಥೆಗಳಿಗೆ ಈ ದೇಣಿಗೆ ನೀಡಿಲಾಗಿದೆ ಎಂದು ಟ್ವಿಟರ್ ಇಂಕ್'ನ CEO ಜಾಕ್ ಪ್ಯಾಟ್ರಿಕ್ ಟ್ವೀಟ್ ಮೂಲಕ ತಿಳಿಸಿದ್ದಾರೆ, ಇದರಿಂದ ಭಾರತದಲ್ಲಿ ವೈದ್ಯಕೀಯ ಉಪಕರಣಗಳನ್ನು ಪಡೆಯಲು ಅನುಕೂಲವಾಗಲಿದೆ ಎಂದು ತಿಳಿಸಲಾಗಿದೆ.

## ಅಮೇರಿಕ 12 ವರ್ಷ ಮೇಲ್ಪಟ್ಟವರಿಗೆ ಫೈಜರ್ ಲಸಿಕೆ ತುರ್ತು ಬಳಕೆಗೆ ಅನುಮತಿ




* ಪ್ರಸ್ತುತ ಅಮೇರಿಕ ದೇಶವು 12 ವರ್ಷಕ್ಕಿಂತ ಮೇಲ್ಪಟ್ಟ ಎಲ್ಲ ಜನರಿಗೂ ಫೈಜರ್ ಬಯೋಎನ್'ಟೆಕ್ ಲಸಿಕೆಯ ತುರ್ತು ಬಳಕೆಗೆ ಅನುಮತಿಯನ್ನು ನೀಡಿದೆ.

* ಫೈಜರ್ ಬಯೋಎನ್'ಟೆಕ್ ಈ ಹಿಂದೆ ಅಂದರೆ ಕಳೆದ ವಾರ

12 15 ವರ್ಷ ವಯಸ್ಸಿನ ಪ್ರಜೆಗಳಿಗೆ ಕೋವಿಡ್ 19 ಲಸಿಕೆ ನೀಡಲು ಅನುಮತಿ ವಿತರಣೆ ಮಾಡುವಂತೆ ಅಮೆರಿಕ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಲಾಗಿತ್ತು.

* ಆಹಾರ ಮತ್ತು ಔಷಧ ನಿಯಂತ್ರಣ ಪ್ರಾಧಿಕಾರವು ಕೋವಿಡ್ 19 ಲಸಿಕೆಯ ತುರ್ತು ಬಳಕೆಗೆ ಅನುಮತಿ ನೀಡಿದೆ.

* ಪ್ರಸ್ತುತ ಅಮೇರಿಕಾದಲ್ಲಿ 16 ವರ್ಷ ಮೇಲ್ಪಟ್ಟ ಜನಗಳಿಗೆ ಸದ್ಯ ಫೈಜರ್ ಬಯೋಎನ್‌ಟೆಕ್ ಕೋವಿಡ್ ಲಸಿಕೆಯನ್ನು ನೀಡಲು ಅನುಮತಿ ಇದೆ.

## ವಿಶ್ವಾಸಮತ ಕಳೆದುಕೊಂಡ ನೇಪಾಳ ಪ್ರಧಾನಿ ಕೆಪಿ ಶರ್ಮಾ ಒಲಿ



* ಈ ಹಿಂದೆ ನೇಪಾಳದ ಪ್ರತಿ ಪಕ್ಷಗಳು ಪ್ರಧಾನಿ ಕೆಪಿ ಶರ್ಮಾ ಒಲಿ ಅವರಿಗೆ ವಿಶ್ವಾಸ ಮತಯಾಚನೆ ಮಾಡುವಂತೆ ಸೂಚಿಸಿದ್ದವು ಇದರಿಂದಾಗಿ ನೇಪಾಳ ಪ್ರಧಾನಿ ವಿಶ್ವಾಸಮತ ಯಾಚನೆ ಮಾಡಿದರು, ಆದರೆ ಪ್ರಧಾನಿ ಕೆಪಿ ಶರ್ಮಾ ಒಲಿ ಅವರು ವಿಶ್ವಾಸಮತ ಕಳೆದುಕೊಂಡಿದ್ದಾರೆ ಈ ಮೂಲಕ ಪ್ರಧಾನಿ ಹುದ್ದೆ (ರಾಜೀನಾಮೆ) ತ್ಯಜಿಸಬೇಕಾಗಿದೆ.

* ಈ ಹಿಂದೆ ನೇಪಾಳ ಪ್ರಧಾನಿ ಕೆಪಿ ಶರ್ಮಾ ಒಲಿ ಅವರು ಚೀನಾದ ಪ್ರಚೋದನೆಯಿಂದಾಗಿ ಭಾರತದ ವಿರುದ್ಧ ಅನೇಕ ಹೇಳಿಕೆಗಳನ್ನು ನೀಡಿದ್ದರು, ಇದೀಗ ಇವರು ಸಂಸತ್ತಿನ ವಿಶ್ವಾಸ ಕಳೆದುಕೊಂಡಿದ್ದಾರೆ.

* ಪ್ರಸ್ತುತ ನೇಪಾಳ 275 ಸದಸ್ಯರು ಇರುವ ಪಾರ್ಲಿಮೆಂಟ್'ನ್ನು ಹೊಂದಿದೆ, ವಿಶ್ವಾಸಮತ ಪಡೆಯ ಬೇಕಾದರೆ ಕನಿಷ್ಠ ಪಕ್ಷ 136 ಮತಗಳನ್ನು ಪಡೆಯಬೇಕು.

* ನೇಪಾಳ ಪ್ರಧಾನಿ ಕೆಪಿ ಶರ್ಮಾ ಒಲಿ ಅವರು ರಾಷ್ಟ್ರಪತಿ ಬಿದ್ಯಾದೇವಿ ಭಂಡಾರಿ ಅವರ ಉಪಸ್ಥಿತಿಯಲ್ಲಿ ವಿಶ್ವಾಸ ಮತ ಯಾಚನೆ ಮಾಡಿದರು ಆದರೆ ಕೆಪಿ ಶರ್ಮಾ ಒಲಿ ಅವರು ಕೇವಲ 93 ಮತಗಳನ್ನು ಪಡೆದುಕೊಂಡು ಸೋಲ ಅನುಭವಿಸಿದ್ದಾರೆ, ಇದರಿಂದಾಗಿ ಕೆಪಿ ಶರ್ಮಾ ಒಲಿ ಅವರು ಪ್ರಧಾನಿ ಹುದ್ದೆ ತ್ಯಜಿಸಬೇಕಾಗಿದೆ.

# 12-05-2021

## ಬೆಂಗಳೂರಿನ ಕೋವಿಡ್ ಸೋಂಕಿತರಿಗೆ ಆಕ್ಸಿಬಸ್ ಸೇವೆ



* ಕರ್ನಾಟಕ ರಾಜ್ಯದಲ್ಲಿ ಕೊರೊನಾ ಸೋಂಕು ದಿನೇ ದಿನೇ ವ್ಯಾಪಕವಾಗಿ ಹರಡುತ್ತಿರುವ ಹಿನ್ನಲೆಯಿಂದ ಆಸ್ಪತ್ರೆಗಳಲ್ಲಿ ಬೆಡ್, ಆಕ್ಸಿಜನ್ ಮತ್ತು ವೆಂಟಿಲೇಟರ್ ಹಾಗೂ ಮುಂತಾದ ವೈದ್ಯಕೀಯ ಉಪಕರಣಗಳ ಸಮಸ್ಯೆಗಳು ಉಂಟಾಗುತ್ತಿವೆ.

* ಪ್ರಸ್ತುತ ಬೆಂಗಳೂರು ನಗರದ ಕೋವಿಡ್ 19 ಸೋಂಕಿತರಿಗೆ ಆಕ್ಸಿಜನ್ ಸಮಸ್ಯೆ ನೀಗಿಸುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ಆಕ್ಸಿಜನ್ ಬಸ್ ಸೇವೆಯನ್ನು ತಂದಿದೆ, ಈ ಆಕ್ಸಿಜನ್ ಬಸ್'ಗಳನ್ನೂ ತುರ್ತು ಸಂದರ್ಭದಲ್ಲಿ ಬಳಸಿ ಕೋವಿಡ್ 19 ಸೋಂಕಿತರ ಜೀವ ಉಳಿಸಲು ಸಹಾಯಕಾರಿ ಯಾಗಲಿವೆ ಎಂದು ತಿಳಿಸಿದ್ದಾರೆ.

* ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಅವರು ತಮಿಳುನಾಡು ರಾಜ್ಯದ ಮಾದರಿಯ ಆಕ್ಸಿಜನ್ ಬಸ್'ಗಳನ್ನೂ ಕರ್ನಾಟಕದಲ್ಲಿ ಉದ್ಘಾಟಿಸಿದರು ಮತ್ತು ಅವುಗಳ ಕಾರ್ಯ ವೈಖರಿಯನ್ನು ವೀಕ್ಷಣೆ ಮಾಡಿದರು, ಪ್ರಸ್ತುತ ಈ ಬಸ್'ಗಳು ಬೆಂಗಳೂರಿನ ಮಾಗಡಿ ರಸ್ತೆಯಲ್ಲಿರುವ ಆರೋಗ್ಯ ಸೌಧದ ಮುಂದೆ ನಿಲ್ಲಿಸಲಾಗಿದೆ.

* ಇದೀಗ ಬೆಂಗಳೂರಿನಲ್ಲಿ 1 ಆಕ್ಸಿಜನ್ ಬಸ್ ಪ್ರಯಾಣ ಬೆಳಸಲಿದೆ, ಈ ಬಸ್'ನ್ನು BBMP ನಿರ್ವಹಿಸಲಿದೆ, ಹಾಗೂ ಮುಂದಿನ ದಿನಗಳಲ್ಲಿ ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ಈ ಆಕ್ಸಿಜನ್ ಬಸ್ ವ್ಯವಸ್ಥೆ ಮಾಡಲಾಗುತ್ತದೆ ಎಂದು ರಾಜ್ಯ ಸರ್ಕಾರ ತಿಳಿಸಿದೆ.

## ಇಸ್ರೇಲ್'ನಿಂದ ಗಾಜಾ ನಗರದ ಉಗ್ರರ ಮೇಲೆ ರಾಕೇಟ್ ದಾಳಿ



* ಗಾಜಾ ನಗರ ಎಂದೂ ಕರೆಯಲ್ಪಡುವ ಗಾಜಾ ಪ್ರದೇಶ ಪ್ಯಾಲೇಸ್ಟಿನಿಯನ್ ನಗರವಾಗಿದೆ, ಇದು ಪ್ಯಾಲೆಸ್ಟೇನ್ ರಾಜ್ಯದ ಅತಿದೊಡ್ಡ ನಗರವಾಗಿದೆ. ಕ್ರಿ.ಪೂ 15ನೇ ಶತಮಾನದಿಂದಲೂ ವಾಸಿಸುತ್ತಿದ್ದ ಗಾಜಾ ತನ್ನ ಇತಿಹಾಸದುದ್ದಕ್ಕೂ ಹಲವಾರು ವಿಭಿನ್ನ ಜನರು ಮತ್ತು ಸಾಮ್ರಾಜ್ಯಗಳಿಂದ ಪ್ರಾಬಲ್ಯ ಹೊಂದಿದೆ.

* ಇತ್ತೀಚಿಗೆ ಇಸ್ರೇಲ್ ಮತ್ತು ಪ್ಯಾಲೆಸ್ತೇನ್'ನ ಹಮಾಸ್ ಬಂಡುಕೋರರ ಸಂಘರ್ಷ ಮತ್ತಷ್ಟು ತೀವ್ರಗೊಂಡಿದೆ, ಇಸ್ರೇಲ್ ಗಾಜಾ ನಗರದ ಮೇಲೆ ರಾಕೆಟ್ ದಾಳಿಯನ್ನು ನಡೆಸಿತ್ತು ಅದರಲ್ಲಿ 35 ಜನರು ಸಾವನ್ನಪ್ಪಿದ್ದಾರೆ ಎಂದು ವರದಿ ಮೂಲಕ ತಿಳಿದಿದೆ.

* ಪ್ರಸ್ತುತ ಪ್ಯಾಲೆಸ್ತೇನ್'ನ ಹಮಾಸ್ ಬಂಡುಕೋರರೂ ಇಸ್ರೇಲ್ ಸೇನಾಪಡೆ ಮೇಲ ಸರಣಿ ರಾಕೆಟ್ ದಾಳಿ ನಡೆಸಿದ್ದರು ಈ ರಾಕೆಟ್ ದಾಳಿಯಲ್ಲಿ ಇಸ್ರೇಲ್'ನ ಅಧಿಕಾರಿಗಳು ಮೃತಪಟ್ಟಿದ್ದಾರೆ ಎಂದು ತಿಳಿಸಲಾಗಿತ್ತು.

* ಇಸ್ರೇಲ್ ರಾಷ್ಟ್ರವು ನಡೆಸಿದ ರಾಕೆಟ್ ದಾಳಿಯಲ್ಲಿ ಗಾಜಾ ನಗರದ 35 ಜನ ಹಮಾಸ್ ಬಂಡುಕೋರರು ಸಾವನ್ನಪ್ಪಿದ್ದಾರೆ ಎಂದು ಗಾಜಾದ ಆರೋಗ್ಯ ಅಧಿಕಾರಿಗಳು ಮಾಹಿತಿಯನ್ನು ನೀಡಿದ್ದಾರೆ.

## ಪ್ರಧಾನಿ ಮೋದಿ G 7 ಶೃಂಗಸಭೆಯ ಬ್ರಿಟನ್ ಪ್ರವಾಸ ರದ್ದು



* ಭಾರತ ದೇಶದಲ್ಲಿನ ಕೋರೋಣ ಸೋಂಕಿನ ಪರಿಸ್ಥಿತಿಯಿಂದ ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಜೂನ್.11 ರಿಂದ 13ರವರೆಗೆ ನಡೆಯಲಿರುವ ಜಿ7 ರಾಷ್ಟ್ರಗಳ ಸಮ್ಮೇಳನಕ್ಕೆ ಭಾರತೀಯ ಪ್ರಧಾನಿ ನರೇಂದ್ರ ಮೋದಿ ಬ್ರಿಟನ್'ನ ಪ್ರವಾಸವನ್ನು ರದ್ದುಪಡಿಸಿದ್ದಾರೆ ಎಂದು ಕೇಂದ್ರ ಸರ್ಕಾರವು ಸುದ್ದಿ ವಾಹಿನಿಯಾಗಿರುವ NDTV ಗೆ ಮಾಹಿತಿಯನ್ನು ನೀಡಿದೆ.

* ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಅವರು ಭಾರತೀಯ ಪ್ರಧಾನಿ ಮೋದಿ ಅವರಿಗೆ ಜಿ 7 ಶೃಂಗಸಭೆಗೆ ವಿಶೇಷ ಆಹ್ವಾನವನ್ನು ನೀಡಿದ್ದರು, ಪ್ರಸ್ತುತ ಈಗಿನ ಕೋವಿಡ್ 19 ಪರಿಸ್ಥಿತಿಯನ್ನು ಪ್ರಧಾನಿ ಮೋದಿ ಅವರು ಗಮನಿಸಿದ್ದಾರೆ ಆದ್ದರಿಂದ ಈ ಜಿ 7 ಶೃಂಗಸಭೆಯಲ್ಲಿ ಪ್ರಧಾನಿ ಮೋದಿ ಭಾಗವಹಿಸುವುದಿಲ್ಲ ಎಂದು ವಿದೇಶಾಂಗ ಸಚಿವಾಲಯದ ವಕ್ತಾರರು ಮಾಹಿತಿಯನ್ನು ನೀಡಿದ್ದಾರೆ.

## ಅಂತರರಾಷ್ಟ್ರೀಯ ದಾದಿಯರ (ನರ್ಸ್) ದಿನ ಆಚರಣೆ




* ಪ್ರತಿ ವರ್ಷವು ಮೇ 12ರಂದು ದಾದಿಯರು ಸಮಾಜಕ್ಕೆ ನೀಡಿದ ಅಪಾರವಾದ ಕೊಡುಗೆಗಳನ್ನು ಗುರುತಿಸಲು ಅಂತರರಾಷ್ಟ್ರೀಯ ದಾದಿಯರ (ನರ್ಸ್) ದಿನವನ್ನು ಆಚರಿಸಲಾಗುತ್ತದೆ.

* ಫ್ಲಾರೆನ್ಸ್ ನೈಟಿಂಗೇಲ್ ಅವರ ಜನ್ಮ ದಿನಾಚರಣೆಯನ್ನು ಅಂತರರಾಷ್ಟ್ರೀಯ ದಾದಿಯರ ದಿನವೆಂದು ಆಚರಣೆ ಮಾಡಲಾಗುತ್ತದೆ.

* ಫ್ಲಾರೆನ್ಸ್ ನೈಟಿಂಗೇಲ್ ಒಬ್ಬ ಇಂಗ್ಲಿಷ್ ಸಾಮಾಜಿಕ ಸುಧಾರಕ, ಸಂಖ್ಯಾಶಾಸ್ತ್ರಜ್ಞ ಮತ್ತು ಆಧುನಿಕ ಶುಶ್ರೂಷೆಯ ಸ್ಥಾಪಕರು, ಮತ್ತು ಕ್ರಿಮಿಯನ್ ಯುದ್ಧದ ಸಮಯದಲ್ಲಿ ದಾದಿಯರೇ ವ್ಯವಸ್ಥಾಪಕರಾಗಿ ಹಾಗೂ ತರಬೇತುದಾರರಾಗಿ ಸೇವೆ ಸಲ್ಲಿಸುತ್ತಿರುವಾಗ ನೈಟಿಂಗೇಲ್ ಪ್ರಾಮುಖ್ಯತೆ ಪಡೆದಿದ್ದರು, ಇವರು ಕಾನ್‌ಸ್ಟಾಂಟಿನೋಪಲ್‌ನಲ್ಲಿ ಗಾಯಗೊಂಡ ಸೈನಿಕರಿಗೆ ಆರೈಕೆ ಮಾಡಿದರು.

* 2021ರ ಅಂತರರಾಷ್ಟ್ರೀಯ ದಾದಿಯರ ದಿನವನ್ನು "ನರ್ಸಿಂಗ್ ದಿ ವರ್ಲ್ಡ್ ಟು ಹೆಲ್ತ್" ಎಂಬ ವಿಷಯದಡಿಯಲ್ಲಿ ಆಚರಿಸಲಾಗುತ್ತದೆ.

* ಪ್ರಸ್ತುತ 1965ರಿಂದ ಅಂತರರಾಷ್ಟ್ರೀಯ ದಾದಿಯರ ದಿನವನ್ನು ಆಚರಿಸಲಾಗುತ್ತಿದೆ.

## ಕೋವಿಡ್ 19 ಗೆ ಚಿಕಿತ್ಸೆಗೆ ಐವರ್ಮೆಕ್ಟಿನ್ (Ivermectin) ಬಳಕೆಯ ವಿರುದ್ಧ ಎಚ್ಚರಿಸಿದ WHO




* ಇತ್ತೀಚೆಗೆ ಗೋವಾ ಆರೋಗ್ಯ ಸಚಿವರು 18ವರ್ಷಕ್ಕಿಂತ ಮೇಲ್ಪಟ್ಟ ಜನರಿಗೆ 'ಐವರ್ಮೆಕ್ಟಿನ್' ಬಳಕೆ ಮಾಡುವಂತೆ ಶಿಫಾರಸ್ಸು ಮಾಡಲಾಗಿತ್ತು, ಇದೀಗ ಐವರ್ಮೆಕ್ಟಿನ್ (ivermectin) ಬಳಕೆಯ ವಿರುದ್ಧ ವಿಶ್ವ ಆರೋಗ್ಯ ಸಂಸ್ಥೆ ಎಚ್ಚರಿಕೆಯನ್ನು ನೀಡಿದೆ.

* ಇತ್ತೀಚಿಗೆ ಗೋವಾ ಸರ್ಕಾರವು ಕೋವಿಡ್ 19 ಚಿಕಿತ್ಸೆಗೆ ಪ್ರೋಟೋಕಾಲ್'ನ್ನು ತೆರವುಗೊಳಿಸಿದೆ, ಇದರ ಅಡಿಯಲ್ಲಿ ಗೋವಾ ಸರ್ಕಾರವು ಐವರ್ಮೆಕ್ಟಿನ್ ಔಷಧಿಯನ್ನು ಬಳಸಲು ಶಿಫಾರಸ್ಸು ಮಾಡಿದೆ.

* ಗೋವಾ ಸರ್ಕಾರವು ಕೋವಿಡ್ 19 ಸೋಂಕಿನೊಂದಿಗೆ ಬರುವ ವೈರಲ್ ಜ್ವರವನ್ನು ತಡೆಗಟ್ಟಲು ಇದನ್ನು ಬಳಸಲು ಶಿಫಾರಸ್ಸು ಮಾಡಲಾಗಿದೆ.

* ಪ್ರಸ್ತುತ ಐವರ್ಮೆಕ್ಟಿನ್'ನ ನಿರಂತರ ಬಳಸುವುದರಿಂದ COVID 19'ನ್ನು ಕೊನೆಗೊಳಿಸುತ್ತದೆ ಎಂದು ಪೀರ್ ರಿವ್ಯೂಡ್ ಸಂಶೋಧನೆಯೊಂದು ಹೇಳಿದೆ ಎಂದು ಯುಎಸ್ ಸರ್ಕಾರಕ್ಕಾಗಿ ಕಾರ್ಯ ನಿರ್ವಹಿಸುತ್ತಿರುವ 3 ವಿಜ್ಞಾನಿಗಳು ವಿಮರ್ಶೆಯನ್ನು ಮಾಡಿದ್ದಾರೆ.

* ಕೋವಿಡ್ 19 ಚಿಕಿತ್ಸೆಗೆ ಐವರ್ಮೆಕ್ಟಿನ್'ನ್ನು ಬಳಕೆ ಮಾಡುವದರ ವಿರುದ್ಧ ಜರ್ಮನಿಯ ಆರೋಗ್ಯ ರಕ್ಷಣೆಯೂ ಎಚ್ಚರಿಕೆ ನೀಡಿದೆ ಎಂದು WHO ತಿಳಿಸಿದೆ, ಪ್ರಸ್ತುತ ಕ್ಲಿನಿಕಲ್ ಪರಿಣಾಮಕಾರಿತ್ವಕ್ಕೆ ಬೇಕಾಗುವಷ್ಟು ಅರ್ಥಪೂರ್ಣ (ಮಾಹಿತಿ) ಸಾಕ್ಷಿಗಳಿಲ್ಲದ ಕಾರಣ ಈ ಸಂಸ್ಥೆಗಳು ಔಷಧದ ವಿರುದ್ಧ ಎಚ್ಚರಿಕೆಯನ್ನು ನೀಡಿದೆ.

## ಕೇರಳ ರಾಜಕೀಯದ ಐರನ್ ಲೇಡಿ ಕೆ. ಆರ್. ಗೌರಿ ಅಮ್ಮ ವಿಧಿವಶ



* ಕಮ್ಯುನಿಸ್ಟ್ ಮುಖಂಡ ಹಾಗೂ ಮಾಜಿ ಸಚಿವರು ಕೆ. ಆರ್. ಗೌರಿ ಅಮ್ಮ ಅವರು ಇತ್ತೀಚಿಗೆ ವಿಧಿವಶರಾದರು.


* ಕೆ. ಆರ್. ಗೌರಿ ಅವರು 1919ರ ಜುಲೈ. 14 ರಂದು ಆಲಪ್ಪುಳ ಜಿಲ್ಲೆಯಲ್ಲಿ ಜನಿಸಿದರು, ನಂತರದ ದಿನಗಳಲ್ಲಿ ಇವರು ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾದ ಸದಸ್ಯರಾಗಿ ಸೇರಿಕೊಂಡರು ಮತ್ತು ಕಾರ್ಮಿಕರ ಹಕ್ಕುಗಳ ಹೋರಾಟದಲ್ಲಿ ಇವರದು ಹೆಚ್ಚಿನ ಪಾತ್ರವಾಗಿತ್ತು.

* ಕೆ. ಆರ್. ಗೌರಿ ಅವರು 1948 ರಲ್ಲಿ ತುರಾವೂರ್ ಕ್ಷೇತ್ರದಿಂದ ತಿರು ಕೊಚ್ಚಿ ವಿರುದ್ಧ ಚುನಾವಣೆಯಲ್ಲಿ ಸ್ಪರ್ಧಿಸಿದರು, ಆದರೆ ಇವರು ಚುನಾವಣೆಯಲ್ಲಿ ಸೋಲು ಅನುಭವಿಸಿದರು ನಂತರ ಇವರು ಮತ್ತೆ 1952 ಮತ್ತು 1954ರಲ್ಲಿ ನಡೆದ ಚುನಾವಣೆಯಲ್ಲಿ ಜಯ ಸಾಧಿಸಿದರು.

* ಕೆ. ಆರ್. ಗೌರಿ ಅಮ್ಮ ಅವರು ಕೇರಳ ವಿಧಾನಸಭೆಗೆ ಮೊದಲ ಚುನಾವಣೆ ನಡೆದಾಗ ಅಂದರೆ 1957ರಲ್ಲಿ ಸ್ಪರ್ಧಿಸಿ ಗೆದ್ದು ರಾಜ್ಯದ ಮೊದಲ ಕಂದಾಯ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ.

* ಒಟ್ಟಾರೆ ಕೆ. ಆರ್. ಗೌರಿ ಅವರು 17 ಚುನಾವಣೆಗಳಲ್ಲಿ ಸ್ಪರ್ಧಿಸಿದ್ದರು ಅವುಗಳಲ್ಲಿ 13 ಬಾರಿ ಗೆದಿದ್ದಾರೆ.

## ತೋಟಗಾರಿಕೆಯ ಸಮಗ್ರ ಅಭಿವೃದ್ಧಿಗೆ ಮಿಷನ್




* ಇತ್ತೀಚಿಗೆ 2021 22ನೇ ಸಾಲಿನ ತೋಟಗಾರಿಕೆಯ ಸಮಗ್ರ ಅಭಿವೃದ್ಧಿಗಾಗಿ ಮಿಷನ್'ಗಾಗಿ 2,250 ಕೋಟಿ ರೂ. ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯ ನೀಡಿದೆ.

* ಭಾರತದಲ್ಲಿನ ತೋಟಗಾರಿಕಾ ಕ್ಷೇತ್ರವನ್ನು ಅಭಿವೃದ್ಧಿಪಡಿಸುವ ಗುರಿಯನ್ನು ಸಮಗ್ರ ಅಭಿವೃದ್ಧಿ ಮಿಷನ್ ಹೊಂದಿದೆ, ಪ್ರಸ್ತುತ ಹಣ್ಣುಗಳು, ತರಕಾರಿಗಳು, ಗೆಡ್ಡೆ ಬೆಳೆಗಳು, ಬೇರುಗಳು, ಹೂಗಳು, ಬಿದಿರು, ಕೋಕೋ, ತೆಂಗಿನಕಾಯಿ, ಮಸಾಲೆಗಳು, ಆರೊಮ್ಯಾಟಿಕ್ ಸಸ್ಯಗಳು ಹಾಗೂ ಗೋಡಂಬಿಗಳನ್ನು ಒಳಗೊಂಡ ಮಿಷನ್ ಇದಾಗಿದೆ.

* ಮಿಷನ್ ಫಾರ್ ಇಂಟಿಗ್ರೇಟೆಡ್ ಡೆವಲಪ್‌ಮೆಂಟ್ ಆಫ್ ಹಾರ್ಟಿಕಲ್ಚರ್ ಅಡಿಯಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಂಡಳಿಯು ವಿವಿಧ ಯೋಜನೆಗಳನ್ನು ಜಾರಿಗೆತರುತ್ತಿದೆ.

* ತೋಟಗಾರಿಕಾ ಬೆಳೆಗಳ ಉತ್ಪಾದಕತೆ 2001ರಲ್ಲಿ ಹೆಕ್ಟೇರ್‌ಗೆ 8.8 ಟನ್‌ನಿಂದ 2019 ರಲ್ಲಿ ಹೆಕ್ಟೇರ್‌ಗೆ 12.3 ಟನ್ ಹೆಚ್ಚಳವಾಗಿದೆ.

* 2011ರಲ್ಲಿನ ತೋಟಗಾರಿಕಾ ಬೆಳೆಗಳ ಪಾಲು 39% ಆಗಿತ್ತು, ಇದೀಗ 2019ರಲ್ಲಿ 42% ಬೆಳೆಗಳ ಪಾಲು ಏರಿಕೆಯಾಗಿದೆ.

* ಭಾರತವು ಸರಿ ಸುಮಾರು 63,700 ಕೋಟಿ ತೋಟಗಾರಿಕಾ ಬೆಳೆಗಳನ್ನು 2019 20ರ ಅವಧಿಗೆ ರಫ್ತು ಮಾಡಲಾಗುತ್ತದೆ ಎಂದು ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯ ತಿಳಿಸಿದೆ.

# 13-05-2021

## ಕೇಂದ್ರ ಸರ್ಕಾರದಿಂದ ಕಡಿಮೆ ವೆಚ್ಚದ ಚಾರ್ಜಿಂಗ್ ಪಾಯಿಂಟ್ ಸ್ಥಾಪನೆ



* ಕೇಂದ್ರ ಸರ್ಕಾರವು ಎಲೆಕ್ಟ್ರಿಕ್ ವಾಹನಗಳನ್ನು ಚಾರ್ಜಿಂಗ್ ಮಾಡಿಕೊಳ್ಳಬಹುದಾದ ಕೇಂದ್ರಗಳನ್ನು ಕಡಿಮೆ ವೆಚ್ಚದಲ್ಲಿ ಶೀಘ್ರವೇ ಸ್ಥಾಪಿಸಲಾಗುವುದು ಎಂದು ತಿಳಿಸಿದೆ.

* ಪ್ರಸ್ತುತ ನೀತಿ ಆಯೋಗವು ಪ್ರಕಟಣೆಯಲ್ಲಿ ತಿಳಿಸಿರುವ ಪ್ರಕಾರ ಕೈಗೆಟಕುವ ಬೆಲೆಯಲ್ಲಿ ಹಾಗೂ ದೇಶದಾದ್ಯಂತ ವಾಹನಗಳ ಚಾರ್ಜಿಂಗ್‌ಗೆ ಸಂಬಂಧಿಸಿದ ಮೂಲಸೌಕರ್ಯ ಹೆಚ್ಚಿಸಲಾಗುವುದು ಎಂದು ಮಾಹಿತಿಯನ್ನು ನೀಡಿದೆ.

* ಪ್ರಸ್ತುತ "ಲೋ ಕಾಸ್ಟ್ ಎ.ಸಿ ಚಾರ್ಜ್ ಪಾಯಿಂಟ್ 'ಗಳನ್ನೂ ಆರಂಭಿಸುವದರಿಂದ 3 ಕಿಲೊವಾಟ್ (kw) ವರೆಗೆ ವಿದ್ಯುತ್ ಪೂರೈಕೆಆಗಲಿದೆ, ಇದರಿಂದಾಗಿ ಎಲೆಕ್ಟ್ರಿಕ್ ಸ್ಕೂಟರ್ ಹಾಗೂಇ ಆಟೋಗಳನ್ನು ಚಾರ್ಜ್ ಮಾಡಬಹುದು.

* ನೀತಿ ಆಯೋಗವು ಪಾರ್ಕಿಂಗ್ ಸ್ಥಳಗಳು, ಮಾಲ್‌ಗಳು, ಕಚೇರಿ, ಆಸ್ಪತ್ರೆ, ಕಿರಾಣಿ ಅಂಗಡಿಗಳಲ್ಲಿ ಚಾರ್ಜ್ ಪಾಯಿಂಟ್ ಡಿವೈಸ್ ಬಳಸಲಾಗುತ್ತದೆ ಇವುಗಳಿಂದ ವಾಹನಗಳನ್ನು ಚಾರ್ಜ ಮಾಡುವ ಉದ್ದೇಶ ಹೊಂದಿದೆ ಎಂದು ತಿಳಿಸಲಾಗಿದೆ.

## ಖ್ಯಾತ ವೈದ್ಯ ಎಂ. ಎಸ್. ಬಿರಾದಾರ ವಿಧಿವಶ



* ಪ್ರಸ್ತುತ BLDE ಡೀಮ್ಡ್ ವಿಶ್ವವಿದ್ಯಾಲಯ ಉಪಕುಲಪತಿ ಮತ್ತು ವಿಜಯಪುರ ನಗರದ ಖ್ಯಾತ ವೈದ್ಯ ಡಾ. ಎಂ. ಎಸ್. ಬಿರಾದಾರ ಉಕ್ಕಲಿ ಅವರು ತಮ್ಮ 65ನೇ ವಯಸ್ಸಿನಲ್ಲಿ ನಿಧನರಾದರು.

* ಖ್ಯಾತ ವೈದ್ಯ ಎಂ. ಎಸ್. ಬಿರಾದಾರ ಅವರು ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ತಾಲೂಕಿನ ಉಕ್ಕಲಿ ಗ್ರಾಮದಲ್ಲಿ ಜನಿಸಿದರು,ಇವರು ಹುಬ್ಬಳಿಯ ಕರ್ನಾಟಕ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಚಿನ್ನದ ಪದಕ ಪಡೆದುಕೊಂಡು MBBS ಪದವಿ ಪೂರ್ಣಗೊಳಿಸಿದ್ದರು.

* ವೈದ್ಯ ಎಂ. ಎಸ್. ಬಿರಾದಾರ ಅವರು 1984 ರಿಂದ 1991ರವರೆಗೆ ವಿಜಯಪುರ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರಾಗಿ ಸೇವೆ ಸಲ್ಲಿಸಿದ್ದಾರೆ, ಇವರು 1991ರಿಂದ ಬಿ. ಎಂ. ಪಾಟೀಲ್ ವೈದ್ಯಕೀಯ ಕಾಲೇಜಿನಲ್ಲಿ ಅಧ್ಯಾಪಕರಾಗಿ ಸೇವೆ ಪ್ರಾರಂಭಿಸಿದರು ಸುಧೀರ್ಘ 30 ವರ್ಷಗಳ ಕಾಲ BLDE ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸಿದರು ಮತ್ತು 2016ರಿಂದBLDE ಡೀಮ್ಡ್ ವಿಶ್ವವಿದ್ಯಾಲಯ ಉಪಕುಲಪತಿಗಳಾಗಿ ಸೇವೆ ಸಲ್ಲಿಸುತ್ತಿದ್ದರು.

* ಮಾಜಿ ಸಚಿವ ಹಾಗೂ BLDE ಸಂಸ್ಥೆಯ ಅಧ್ಯಕ್ಷರಾಗಿರುವ ಎಂ.ಬಿ.ಪಾಟೀಲ್ ಅವರು ವೈದ್ಯ ಎಂ. ಎಸ್. ಬಿರಾದಾರ ಅವರು

ನಿಧನಕ್ಕೆ ಸಂತಾಪವನ್ನು ತಿಳಿಸಿದ್ದಾರೆ.

## DRDO ಅಭಿವೃದ್ಧಿಪಡಿಸಿದ 1.5 ಲಕ್ಷ ಆಕ್ಸಿಕೇರ್ ಯುನಿಟ್ ಖರೀದಿಗೆ ಪಿಎಂ ಕೇರ್ಸ್'ನ ಅನುಮತಿ



* ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (DRDO) ಅಭಿವೃದ್ಧಿಪಡಿಸಿರುವ 1.5 ಲಕ್ಷ ಆಕ್ಸಿಕೇರ್ ಯುನಿಟ್'ಗಳನ್ನು ಪಿಎಂ ಕೇರ್ಸ್ ಫಂಡ್'ನ ಮೂಲಕ 322.5 ಕೋಟಿ ರೂ.ಗಳ ವೆಚ್ಚದಲ್ಲಿ ಖರೀದಿಸಲು ಅನುಮತಿ ನೀಡಲಾಗಿದೆ.

* ಪ್ರಸ್ತುತ DRDO'ನ ಬೆಂಗಳೂರಿನ ಡಿಫೆನ್ಸ್ ಬಯೋ ಎಂಜಿನಿಯರಿಂಗ್ ಮತ್ತು ಎಲೆಕ್ಟ್ರೋ ಮೆಡಿಕಲ್ ಲ್ಯಾಬೊರೇಟರಿ ಅಭಿವೃದ್ಧಿಪಡಿಸಿರುವ ಆಕ್ಸಿಕೇರ್'ನಿಂದಾಗಿ ರೋಗಿಗಳಿಗೆ ಆಮ್ಲಜನಕ ನೀಡುವಿಕೆ ಮಟ್ಟ ನಿಯಂತ್ರಿಸುವ ಹಾಗೂ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳ ಹೈಪೋಕ್ಸಿಯಾ ಸ್ಥಿತಿಗೆ ಹೋಗದಂತೆ ತಡೆಯಬಲ್ಲ ಆಕ್ಸಿಕೇರ್ ಯುನಿಟ ಇವಾಗಿವೆ, ಆಕ್ಸಿಕೇರ್ ಎನ್ನುವುದು ಒಂದು ಎಸ್‌ಪಿಒ 2 ಆಧಾರಿತ ಆಮ್ಲಜನಕ ಪೂರೈಕೆ ವ್ಯವಸ್ಥೆಯಾಗಿದೆ.

* ಈ ಆಕ್ಸಿಕೇರ್ ಯುನಿಟ್'ಗಳನ್ನೂ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿರುವ ಯೋಧರಿಗಾಗಿ ಬಳಕೆ ಮಾಡಲಾಗುತ್ತದೆ, ಎತ್ತರದ ಪ್ರದೇಶಗಳಲ್ಲಿ ಸೇವೆ ಸಲ್ಲಿಸುತ್ತಿರುವ ಯೋಧರಿಗೆ ಈ ಆಕ್ಸಿಕೇರ್ ಕಿಟ್ ಬಳಸಲಾಗುತ್ತದೆ ಎಂದು ತಿಳಿದು ಬಂದಿದೆ.

## ತಮಿಳುನಾಡು ಸರ್ಕಾರದಿಂದ ಮೃತಪಟ್ಟ ಕೋವಿಡ್ ವಾರಿಯರ್ ಕುಟುಂಬಕ್ಕೆ 25 ಲಕ್ಷ ರೂ. ಪರಿಹಾರ



* ವೈದ್ಯಕೀಯ ವೃತ್ತಿಪರ ವ್ಯಕ್ತಿಗಳು ಕರ್ತವ್ಯ ನಿರ್ವಹಿಸುತ್ತಿರುವ ಸಂದರ್ಭದಲ್ಲಿ ಕೋವಿಡ್ 19 ನಿಂದ ಸಾವನ್ನಪ್ಪಿದ್ದರೆ ಆ ಕುಟುಂಬಗಳಿಗೆ ತಲಾ 25 ಲಕ್ಷ ರೂ. ಧನ ಪರಿಹಾರವನ್ನು ತಮಿಳುನಾಡು ನೂತನ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಘೋಷಣೆ ಮಾಡಿದ್ದಾರೆ.

* ಈಗಿನ ಕೋವಿಡ್ ಕರ್ತವ್ಯದಲ್ಲಿ ಭಾಗಿಯಾದ ವೈದ್ಯರು, ನರ್ಸ್, ಅರೆ ವೈದ್ಯಕೀಯ ಸಿಬ್ಬಂದಿ, ಇತರ ಸಿಬ್ಬಂದಿ ಸೇರಿದಂತೆ ಮುಂಚೂಣಿ ಕಾರ್ಯಕರ್ತರಿಗೆ ಪ್ರೋತ್ಸಾಹ ಧನವನ್ನು ಪಡೆಯಲಿದ್ದಾರೆ ಎಂದು ಡಿಎಂಕೆ ಪಕ್ಷವು ತಿಳಿಸಿದೆ.

* ಪ್ರಸ್ತುತ ವೈದ್ಯರು 30 ಸಾವಿರ ರೂ. ದಾದಿಯರು ಹಾಗೂ ತರಬೇತು ವೈದ್ಯರು 20 ಸಾವಿರ ರೂ. ಸ್ವಚ್ಛತಾ ಕಾರ್ಮಿಕರು, ಸಿಟಿ ಸ್ಕ್ಯಾನ್ ವಿಭಾಗದ ಸಿಬ್ಬಂದಿ ಮತ್ತು ಆಯಂಬುಲೆನ್ಸ್'ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಇತರ ಸಿಬ್ಬಂದಿ 15 ಸಾವಿರ ರೂಪಾಯಿ ಪ್ರೋತ್ಸಾಹಕ ಧನ ಪಡೆಯಲಿದ್ದಾರೆ ಎಂದು ತಮಿಳುನಾಡು ಸರ್ಕಾರ ತಿಳಿಸಿದೆ.

* ಈ ಹಿಂದೆ ಒಡಿಶಾ ಸರ್ಕಾರವು ಕೂಡ ವ್ಯಕ್ತಿಯು ಕರ್ತವ್ಯ ನಿರ್ವಹಿಸುತ್ತಿರುವ ಸಂದರ್ಭದಲ್ಲಿ ಕೋವಿಡ್ 19 ನಿಂದ ಸಾವನ್ನಪ್ಪಿದ್ದರೆ ಆ ಕುಟುಂಬಗಳಿಗೆ 50 ಲಕ್ಷ ರೂ. ಧನ ಪರಿಹಾರವನ್ನು ನೀಡಲಾಗುವದು ಎಂದು ತಿಳಿಸಿತ್ತು.

## ಕುಶಲ್ ಪೆರೇರ ಶ್ರೀಲಂಕಾ ಏಕದಿನ ತಂಡದ ನಾಯಕನಾಗಿ ನೇಮಕ




* ಪ್ರಸ್ತುತ ಶ್ರೀಲಂಕಾ ಏಕದಿನ ಕ್ರಿಕೆಟ್ ತಂಡದ ನಾಯಕನಾಗಿ ಕುಶಲ್ ಪೆರೇರ ಅವರನ್ನು ನೇಮಕ ಮಾಡಲಾಗಿದೆ, 5 ವರ್ಷಗಳಲ್ಲಿ ಕುಶಲ್ ಪೆರೇರ ಅವರು ಏಕದಿನ ತಂಡದ 9ನೇ ನಾಯಕರಾಗಿದ್ದಾರೆ, ಹಾಗೂ ಈ ಹಿಂದಿನ ಮಾಜಿ ನಾಯಕರಾದ ದಿಮುತ್ ಕರುಣರತ್ನೆ ಮತ್ತು ಏಂಜೆಲೊ ಮ್ಯಾಥ್ಯೂಸ್ ಅವರನ್ನು ಕೈಬಿಡಲಾಗಿದೆ ಎಂದು ತಿಳಿದು ಬಂದಿದೆ.

* ದಿಮುತ್ ಕರುಣರತ್ನೆ ಅವರು ಟೆಸ್ಟ್ ತಂಡದ ನಾಯಕನಾಗಿ ಮುಂದುವರೆಯಲಿದ್ದಾರೆ, ಈ ಹಿಂದಿನ ಮಾರ್ಚ್ ತಿಂಗಳಲ್ಲಿ ನಡೆದಿರುವ ವೆಸ್ಟ ಇಂಡೀಸ್ ವಿರುದ್ಧದ ಸರಣಿಯನ್ನು ಶ್ರೀಲಂಕಾ 3 0 ಅಂತರದಿಂದ ಜಯಗಳಿಸಿದೆ.

## ದಿವಂಗತ ಮಧುಕರ್ ಶೆಟ್ಟಿ ಹೆಸರು ಹೈದರಾಬಾದ್ ಪೊಲೀಸ್ ಅಕಾಡೆಮಿ ಕೇಂದ್ರ ಸಭಾಂಗಣಕ್ಕೆ



* ಹೈದರಾಬಾದ್'ನ ಸರ್ದಾರ್ ವಲ್ಲಭಾಯ್ ಪಟೇಲ್ ರಾಷ್ಟ್ರೀಯ ಪೊಲೀಸ್ ಅಕಾಡೆಮಿ ಕೇಂದ್ರ ಸಭಾಂಗಣಕ್ಕೆ ಉಡುಪಿ ಮೂಲದ IPS ಅಧಿಕಾರಿಯಾಗಿದ್ದ ದಿವಂಗತ ಕೆ. ಮಧುಕರ್ ಶೆಟ್ಟಿ ಹೆಸರು ಇಡಲಾಗಿದೆ.

* ಪ್ರಾಮಾಣಿಕತೆ, ದಕ್ಷತೆಗೆ ಉತ್ತಮ ಹೆಸರುವಾಸಿಯಾಗಿರುವ ಮಧುಕರ್ ಶೆಟ್ಟಿ ಅವರ ಹೆಸರನ್ನು ಹೈದರಾಬಾದ್'ನ ಪೊಲೀಸ್ ಅಕಾಡೆಮಿ ಕೇಂದ್ರದ ಮುಖ್ಯ ಸಭಾಂಗಣಕ್ಕೆ ಇಡಲಾಗಿದೆ, ಈ ಮಾಹಿತಿಯನ್ನು ಪೊಲೀಸ್ ಅಕಾಡೆಮಿ ಕೇಂದ್ರ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದೆ.

* ಉಡುಪಿ ಜಿಲ್ಲೆಯ ವಡ್ಡರ್ಸೆಯವರಾದ ಡಾ. ಕೆ.

ಮಧುಕರ್ ಶೆಟ್ಟಿ (1971 2018) ಕರ್ನಾಟಕ ಕೇಡರ್ನ 1999 ಬ್ಯಾಚ್ ಭಾರತೀಯ ಪೊಲೀಸ್ ಸೇವಾ ಅಧಿಕಾರಿಯಾಗಿದ್ದರು, ಮತ್ತು ಇವರು ಕರ್ನಾಟಕದಲ್ಲಿ ಅಕ್ರಮ ಗಣಿಗಾರಿಕೆ ವಿರುದ್ಧ ಕೆಲಸ ಮಾಡಿದ್ದಕ್ಕಾಗಿ ಅವರನ್ನು ಸ್ಮರಿಸಲಾಗುತ್ತದೆ, ಇವರು ಎಚ್1ಎನ್1 ರೋಗದಿಂದ ಬಳಲುತ್ತಿದ್ದರು ಚಿಕಿತ್ಸೆ ಫಲಕಾರಿಯಾಗದೆ 2018 ಡಿಸೆಂಬರ್ 28ಕ್ಕೆ ಸಾವನ್ನಪ್ಪಿದ್ದರು.

## ತಜ್ಞರ ಸಮಿತಿ ಶಿಫಾರಸ್ಸು ಮಕ್ಕಳ ಮೇಲೆ ಕೊವ್ಯಾಕ್ಸಿನ್ ಟ್ರಯಲ್




* ಮಕ್ಕಳ ಮೇಲೆ ಕೊವ್ಯಾಕ್ಸಿನ್ ಟ್ರಯಲ್ ಮಾಡಲಾಗುತ್ತಿದೆ ಇದಕ್ಕೆ ತಜ್ಞರ ಸಮಿತಿ ಶಿಫಾರಸ್ಸು ಮಾಡಿದೆ ಸದ್ಯ 525 ಮಂದಿ ಮಕ್ಕಳ ಮೇಲೆ ಪರೀಕ್ಷೆ ನಡೆಯಲಿದೆ.

* ಪ್ರಸ್ತುತ ಭಾರತದಲ್ಲಿ ಕೋವಿಡ್ 19 ಎರಡನೇ ಅಲೆಯ ಅತೀ ಹೆಚ್ಚಾಗಿ ಯುವ ಜನತೆ ಮೇಲೆ ಪ್ರಭಾವ ಬೀರುತ್ತಿದೆ, ಮುಂದಿನ ದಿನಗಳಲ್ಲಿ 3ನೇ ಅಲೆ ಮಕ್ಕಳಿಗೆ ಅಪಾಯಕಾರಿ ಆಗಬಹುದು ಎಂದು ತಜ್ಞರ ಅಭಿಪ್ರಾಯವನ್ನು ತಿಳಿಸಿದ್ದಾರೆ, ಇದರ ಹಿನ್ನಲೆಯಿಂದಾಗಿ ಇದೀಗ ಕೊವ್ಯಾಕ್ಸಿನ್ ಲಸಿಕೆಯನ್ನು 2 ರಿಂದ 18 ವರ್ಷದ ಮಕ್ಕಳ ಮೇಲೆ ಕ್ಲಿನಿಕಲ್ ಟ್ರಯಲ್ ನಡೆಸಲು ಭಾರತೀಯ ಔಷಧ ನಿಯಂತ್ರಣ ಪ್ರಾಧಿಕಾರ ಅನುಮತಿಯನ್ನು ನೀಡಿದೆ.

* ತಜ್ಞರ ಸಮಿತಿಯು ಪ್ರಾಯೋಗಿಕ ಪರೀಕ್ಷೆ ನಡೆಸಲು ಶಿಫಾರಸ್ಸು ಮಾಡಿದ್ದಾರೆ. ದೇಶದಲ್ಲಿ ಇದೇ ಮೊದಲ ಬಾರಿ ಮಕ್ಕಳ ಮೇಲೆ ಕರೂನಾ ಲಸಿಕೆ ಕ್ಲಿನಿಕಲ್ ಟ್ರಯಲ್ ನಡೆಸಲಾಗುತ್ತಿದೆ ಹಾಗೂ ಇದಕ್ಕೆ ಷರತ್ತುಬದ್ಧ ಒಪ್ಪಿಗೆ ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

* ದೇಶದ ವಿವಿಧ ಭಾಗಗಳಲ್ಲಿ ಪ್ರಯೋಗವು ಒಟ್ಟು 525 ಮಂದಿ ಮಕ್ಕಳ ಮೇಲೆ ಟ್ರಯಲ್ ನಡೆಯಲಿದೆ, ಈ ಲಸಿಕೆಯಿಂದ ಮಕ್ಕಳಿಗೆ ಯಾವುದೇ ತರಹದ ಅಡ್ಡ ಪರಿಣಾಮ ಇಲ್ಲ ಎಂದು ಖಚಿತವಾದ ಮೇಲೆ ಲಸಿಕೆಯ ತುರ್ತು ಬಳಕೆಗೆ ಅನುಮೋದನೆ ನೀಡಲಾಗುತ್ತದೆ ಎಂದು ತಿಳಿಸಲಾಗಿದೆ.

# 14-05-2021

## ಮಧ್ಯಪ್ರದೇಶ ಸರ್ಕಾರವು ಮಕ್ಕಳಿಗೆ ಉಚಿತ ಶಿಕ್ಷಣ ಮತ್ತು ಅನಾಥರಿಗೆ ಪಿಂಚಣಿ ಘೋಷಣೆ




* ಮಧ್ಯಪ್ರದೇಶ ಸರ್ಕಾರದ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಕೋವಿಡ್ 19'ನ ಸಾಂಕ್ರಾಮಿಕ ರೋಗದಿಂದ ಮೃತಪಟ್ಟ ಪೋಷಕರ ಮಕ್ಕಳಿಗೆ ಉಚಿತ ಶಿಕ್ಷಣ ಮತ್ತು ತಿಂಗಳಿಗೆ 5,000 ರೂ. ಪಿಂಚಣಿ ನೀಡಲಾಗುತ್ತದೆ ಎಂದು ತಿಳಿಸಿದೆ.

* ಹಾಗೆಯೇ ಹೊಸದಾಗಿ ಉದ್ಯಮ ವ್ಯವಹಾರಗಳನ್ನು ಆರಂಭಿಸಲು ಬಡ್ಡಿರಹಿತ ಸಾಲ ಪಡೆಯು ಬಯಸುವವರಿಗೆ ರಾಜ್ಯ ಸರ್ಕಾರವು ಗ್ಯಾರಂಟಿಯನ್ನು ನೀಡುತ್ತದೆ ಎಂದು ಮುಖ್ಯಮಂತ್ರಿ ಚೌಹಾಣ್ ಸುದ್ದಿವಾಹಿನಿಗಳಿಗೆ ಮಾಹಿತಿಯನ್ನು ನೀಡಿದರು.

* ದೇಶದಲ್ಲಿ ಮೊದಲು ಮಧ್ಯಪ್ರದೇಶ ರಾಜ್ಯವು ಕೋವಿಡ್ 19 ಸೋಕಿನಿಂದ ಸಾವನ್ನಪ್ಪಿದ ಮಕ್ಕಳು ಹಾಗೂ ವಯಸ್ಸಾದ ಜನರಿಗೆ ಈ ಯೋಜನೆಯನ್ನು ಪ್ರಾರಂಭಿಸಲಾಗಿದೆ ಎಂದು ಮಧ್ಯಪ್ರದೇಶ ರಾಜ್ಯದ ಗೃಹ ಸಚಿವ ನರೋತ್ತಮ್ ಮಿಶ್ರಾ ಅವರು ಮಾಹಿತಿಯನ್ನು ನೀಡಿದ್ದಾರೆ.

## ಟೈಮ್ಸ್ ಗ್ರೂಪ್ ಅಧ್ಯಕ್ಷೆ ಇಂದೂ ಜೈನ್ ಇನ್ನಿಲ



* ಟೈಮ್ಸ್ ಆಫ್ ಇಂಡಿಯಾ ಪತ್ರಿಕಾ ಸಮೂಹದ ಅಧ್ಯಕ್ಷೆಯಾಗಿದ್ದ ಇಂದೂ ಜೈನ್ ಅವರು ಕೋವಿಡ್ 19 ಸಾಂಕ್ರಾಮಿಕ ರೋಗದ ಸಮಸ್ಯೆಯಿಂದ ನಿಧನರಾಗಿದ್ದಾರೆ.

* ಇಂದೂ ಜೈನ್ ಅವರು ಮಹಿಳಾ ಹಕ್ಕುಗಳ ಪ್ರತಿಪಾದಕಿಯಾಗಿ ಮತ್ತು ಆಧ್ಯಾತ್ಮಿಕ ಸಾಧನೆಯಲ್ಲಿ ಕಲೆಗಳ ಪೋಷಣೆ ಮಾಡುವಲ್ಲಿ ಅಪಾರ ಕೊಡುಗೆಗಳನ್ನೂ ನೀಡಿದ್ದಾರೆ.

* ಇಂದೂ ಜೈನ್ ಅವರು 1999 ರಿಂದ ಟೈಮ್ಸ್ ಆಫ್ ಇಂಡಿಯಾ ಪತ್ರಿಕಾ ಸಮೂಹದ ಅಧ್ಯಕ್ಷೆಯಾಗಿ ಪತ್ರಿಕೆಗಳನ್ನು ಮುನ್ನಡೆಸುತಿದ್ದರು.

* ಇಂದೂ ಜೈನ್ ಅವರು 1936 ರಲ್ಲಿ ಉತ್ತರ ಪ್ರದೇಶದ ಫೈರೂಜಾಬಾದ್'ನಲ್ಲಿ ಜನಿಸಿದರು, ಮತ್ತು ಇವರು 1983ರಲ್ಲಿ ಎಫ್ಐಸಿಸಿಐ ಮಹಿಳಾ ವಲಯದ ಸಂಸ್ಥಾಪಕ ಅಧ್ಯಕ್ಷೆಯಾಗಿ ಕಾರ್ಯ ನಿರ್ವಹಿಸುತ್ತಿದ್ದರು, ಮತ್ತು 1999ರಲ್ಲಿ ಟೈಮ್ಸ್ ಸಮೂಹದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು.

## ಕೊರೋನಾ ಲಸಿಕೆ ಪಡೆದವರು ಮಾಸ್ಕ್ ಧರಿಸುವ ಅಗತ್ಯವಿಲ್ಲವೆಂದ ಅಮೆರಿಕದ ಅಧ್ಯಕ್ಷ ಬೈಡೆನ್ ಘೋಷಣೆ



* ಪ್ರಸ್ತುತ ಅಮೇರಿಕದ ರೋಗ ನಿಯಂತ್ರಣ ಸಂಸ್ಥೆಯು ಅಮೇರಿಕ ದೇಶದಲ್ಲಿ ಕೊರೋನಾ ಲಸಿಕೆ ಪಡೆದವರು ಮಾಸ್ಕ ಧರಿಸುವ ಅಗತ್ಯವಿಲ್ಲವೆಂದು ಘೋಷಣೆ ಮಾಡಿದೆ, ಈ ಮಾಹಿತಿಯನ್ನು ಅಮೆರಿಕ ಅಧ್ಯಕ್ಷ ಜೋ ಬೈಡನ್'ರವರು ತಿಳಿಸಿದ್ದಾರೆ.

* ವಿಶ್ವದಾದ್ಯಂತ ಕೊರೊನಾ ಸಾಂಕ್ರಾಮಿಕ ಸೋಂಕು ವಿಶ್ವ ವ್ಯಾಪಿಯಾಗಿ ಹರಡುತ್ತಿದೆ ಮಾಸ್ಕ ಧರಿಸುವುದನ್ನು ಕಡ್ಡಾಯಗೊಳಿಸಲಾಗಿದೆ ಎಂದು ತಿಳಿಸಿತ್ತು, ಇದಾದ ನಂತರ ಇತ್ತೀಚಿಗೆ ಇಸ್ರೇಲ್ ಕೋವಿಡ್ 19 ರೋಗವನ್ನು ಗೆದ್ದು ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ ಕಡ್ಡಾಯವಾಗಿ ಧರಿಸುವದರಿಂದ ವಿನಾಯಿತಿಯನ್ನು ನೀಡಿತ್ತು.

* ಇದೀಗ ಅಮೇರಿಕ ರೋಗ ನಿಯಂತ್ರಣ ಸಂಸ್ಥೆಯು ಲಸಿಕೆ ಪಡೆದವರು ಮಾಸ್ಕ ಕಡ್ಡಾಯವಾಗಿ ಧರಿಸುವುದು ಬೇಕಿಲ್ಲ ಎಂಬ ಮಾಹಿತಿಯನ್ನು ತನ್ನ ದೇಶದ ಜನಕ್ಕೆ ತಿಳಿಸಿದೆ, ಸದ್ಯ ಅಮೇರಿಕ ಕೋರೋಣ ನಂತರ ಪೂರ್ವ ಜೀವನಕ್ಕೆ ಮರಳುತ್ತಿದೆ ಎಂದು ತಿಳಿಸಿದೆ ಎಂದು ಜೋ ಬೈಡನ್ ಹೇಳಿಕೆಯನ್ನು ನೀಡಿದ್ದಾರೆ.

## ರಮೇಶ್ ಪೊವಾರ್, ಭಾರತ ಮಹಿಳಾ ಕ್ರಿಕೆಟ್ ತಂಡದ ಕೋಚ್ ಆಗಿ ನೇಮಕ



* ಭಾರತದ ಮಾಜಿ ಆಫ್ ಸ್ಪಿನ್ನರ್ ರಮೇಶ್ ರಾಜಾರಾಮ್ ಪೊವಾರ್ ಅವರನ್ನು ಮಹಿಳಾ ಕ್ರಿಕೆಟ್ ತಂಡದ ಮುಖ್ಯ ಕೋಚ್'ಆಗಿ ನೇಮಕ ಮಾಡಲಾಗಿದೆ ಎಂದು BCCI ತಿಳಿಸಿದೆ.

* ರಮೇಶ್ ಪೊವಾರ್ ಅವರು ಈ ಹಿಂದೆ ಕೂಡ 2018 ಜುಲೈ ನಿಂದ 2018 ನವೆಂಬರ್'ನ ತನಕ ಮಹಿಳಾ ತಂಡದ ಕೋಚ್ ಆಗಿ ಕಾರ್ಯ ನಿರ್ವಹಿಸುತ್ತಿದ್ದರು.

* ರಮೇಶ್ ರಾಜಾರಾಮ್ ಪೊವಾರ್ ಅವರು 1978ರ ಮೇ.20 ರಂದು ಜನಿಸಿದರು, ಇವರು ಒಬ್ಬ ಭಾರತದ ಮಾಜಿ ಕ್ರಿಕೆಟ ಆಟಗಾರರಾಗಿದ್ದಾರೆ.

* ಪೊವಾರ್ ಅವರನ್ನು ಬೆಂಗಳೂರಿನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯ ಮೊದಲ ಪ್ರವೇಶಕ್ಕಾಗಿ 2000ರಲ್ಲಿ ಆಯ್ಕೆ ಮಾಡಲಾಯಿತು.

* ಪ್ರಸ್ತುತ ರಮೇಶ್ ರಾಜಾರಾಮ್ ಪೊವಾರ್ ಅವರು ಮೆನ್ ಇಂಡಿಯಾ ಎ ಬೌಲಿಂಗ್ ಕೋಚ್ ಆಗಲಿದ್ದಾರೆ ಎಂದು ತಿಳಿದು ಬಂದಿದೆ.

## ಎಸ್. ಬಾಲಚಂದ್ರನ್, ಸುರಿನಾಮ್ ಮುಂದಿನ ರಾಯಭಾರಿಯಾಗಿ ನೇಮಕ



* ವಿದೇಶಾಂಗ ವ್ಯವಹಾರಗಳ ಸಚಿವಾಲಯ ಭಾರತದ ಕಾನ್ಸುಲ್ ಜನರಲ್ ಎಸ್. ಬಾಲಚಂದ್ರನ್ ಅವರನ್ನು ಸುರಿನಾಮ್ ಗಣರಾಜ್ಯದ ಭಾರತದ ಮುಂದಿನ ರಾಯಭಾರಿಯಾಗಿ ನೇಮಿಸಲಾಗಿದೆ, ಎಂದು ಮಾಹಿತಿಯನ್ನು ನೀಡಿದೆ, ಇವರು ಅತೀ ಶೀಘ್ರದಲ್ಲೇ ಈ ನೇಮಕವನ್ನು ಸ್ವೀಕರಿಸಲಿದ್ದಾರೆ ಎಂದು ಎಂಇಎ ಮಾಹಿತಿ ನೀಡಿದೆ.

* ಸುರಿನಾಮ್ ದಕ್ಷಿಣ ಅಮೇರಿಕದ ಈಶಾನ್ಯ ಕರಾವಳಿಯಲ್ಲಿರುವ ಒಂದು ಸಣ್ಣ ದೇಶ, ಇದನ್ನು ಉಷ್ಣವಲಯದ ಮಳೆಕಾಡು, ಡಚ್ ವಸಾಹತುಶಾಹಿ ವಾಸ್ತುಶಿಲ್ಪ ಮತ್ತು ಕರಗುವ ಮಡಕೆ ಸಂಸ್ಕೃತಿಯಿಂದ ವ್ಯಾಖ್ಯಾನಿಸಲಾಗಿದೆ.

* ಅಟ್ಲಾಂಟಿಕ್ ಕರಾವಳಿಯಲ್ಲಿ ರಾಜಧಾನಿ ಪರಮರಿಬೊ ಆಗಿದೆ, ಈ ಪ್ಯಾರಾಮರಿಬೊ ಸೇಂಟ್ ಪೀಟರ್ ಮತ್ತು ಪಾಲ್ ಬೆಸಿಲಿಕಾ ಅವರ ನೆಲೆಯಾಗಿದೆ, 17ನೇ ಶತಮಾನದ ವ್ಯಾಪಾರದ ಪೋಸ್ಟ್ ಫೋರ್ಟ್ ಜಿಯೇಲ್ಯಾಂಡಿಯಾ ಬಳಿ ತಾಳೆ ತೋಟಗಳು ಬೆಳೆಯುತ್ತವೆ ಎಂದು ತಿಳಿದು ಬಂದಿದೆ.

## ಭಾರತ ಮೂಲದ ರಾಜೇಶ್ ಅಗರ್ವಾಲ್ ಲಂಡನ್'ನ ಉಪ ಮೇಯರ್ ಆಗಿ ನೇಮಕ



* ಲಂಡನ್'ನ ಉಪ ಮೇಯರ್ ಆಗಿ ಭಾರತ ಮೂಲದ ಉದ್ಯಮಿ ರಾಜೇಶ್ ಅಗ್ರವಾಲ್ ಅವರು ನೇಮಕ, ರಾಜೇಶ್ ಅಗ್ರವಾಲ್ ಅವರು ಕಳೆದ ವಾರಗಳಲ್ಲಿ ನಡೆದ ಸ್ಥಳೀಯ ಚುನಾವಣೆಯಲ್ಲಿ 2ನೇ ಬಾರಿಗೆ ಜಯಸಾಧಿಸಿದ್ದಾರೆ, ಪ್ರಸ್ತುತ ಮೇಯರ್ ಆಗಿರುವ ಸಾದಿಕ್ ಖಾನ್ ಅವರು ರಾಜೇಶ್ ಅವರನ್ನು ಲಂಡನ್ ವ್ಯವಹಾರಕ್ಕಾಗಿ ಉಪ ಮೇಯರ್ ಆಗಿ ನೇಮಕ ಮಾಡಿದ್ದಾರೆ.

* ರಾಜೇಶ್ ಅಗ್ರವಾಲ್ ಅವರು 2001ರಲ್ಲಿ ಪ್ರತಿಪಕ್ಷ ಲೇಬರ್ ಪಕ್ಷದ ಲೇಬರ್ ಫ್ರೆಂಡ್ಸ್ ಆಫ್ ಇಂಡಿಯಾ ವಲಸೆಗಾರರ ಪ್ರತಿನಿಧಿ ಗುಂಪಿನ ಸಹ ಅಧ್ಯಕ್ಷರಾಗಿರುವ ಲಂಡನ್‌ಗೆ ಆಗಮಿಸಿದರು, ಹಾಗೂ ಸಣ್ಣ ವಿದೇಶಿ ವಿನಿಮಯ ಉದ್ಯಮವನ್ನು ಬಹು ಮಿಲಿಯನ್ ಆಗಿ ಬೆಳೆಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು.

## 15-05-2021

### DRDO ಅಭಿವೃದ್ಧಿಪಡಿಸಿದ, 2 DG ಕೋವಿಡ್ ಸೋಂಕಿನ ಔಷಧಿ ಬಳಕೆಗೆ ಲಭ್ಯ




* ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯು (DRDO) ಕೋವಿಡ್ ಸೋಂಕಿನ ಔಷಧಿ ವಿರುದ್ಧ ಹೋರಾಡಲು ಅಭಿವೃದ್ಧಿಪಡಿಸಿರುವ 2 ಡಯಾಕ್ಸಿ ಡಿ ಗ್ಲೂಕೋಸ್ (2 DG) ಔಷಧದ 10 ಸಾವಿರ ಡೋಸ್‌ಗಳ ಮುಂದಿನ ವಾರ ಬಳಕೆಗೆ ಸಿಗಲಿವೆ ಹಾಗೂ ಈ ಔಷಧಿಗಳಿಗೆ ಚಾಲನೆ ನೀಡಲಾಗುವುದು ಎಂದು DRDO ಅಧಿಕಾರಿಗಳು ಮಾಹಿತಿಯನ್ನು ನೀಡಿದ್ದಾರೆ.

* ಭಾರತೀಯ ಔಷಧ ಮಹಾನಿಯಂತ್ರಕರು DRDO ಅಭಿವೃದ್ಧಿಪಡಿಸಿರುವ ಈ ಔಷಧದ ತುರ್ತು ಬಳಕೆಗೆ ಅನುಮೋದನೆ ನೀಡಿದ್ದಾರೆ.

* ಪ್ರಸ್ತುತ 2 ಡಿಜಿ ಔಷಧವನ್ನು ಹೈದರಾಬಾದ್‌ನ ಡಾ. ರೆಡ್ಡೀಸ್ ಲ್ಯಾಬ್‌ನ ಸಹಯೋಗದಲ್ಲಿ DRDOದ ಇನ್‌ಸ್ಟಿಟ್ಯೂಟ್ ಆಫ್ ನ್ಯೂಕ್ಲಿಯರ್ ಮೆಡಿಸಿನ್ ಅಂಡ್ ಅಲೈಡ್ ಸೈನ್ಸಸ್ ಪ್ರಯೋಗಾಲಯದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ, ಎಂದು ಮಾಹಿತಿ ತಿಳಿದು ಬಂದಿದೆ, ಹಾಗೂ ಈ ಔಷಧಿಗಳು ಮುಂದಿನ ವಾರದ ಆರಂಭದಲ್ಲಿ ಕೊರೋಣ ಸೋಂಕಿನ ವಿರುದ್ಧ ಬಳಕೆಗೆ ಸಿಗಲಿವೆ ಎನ್ನಲಾಗಿದೆ.

* DRDO ಅಭಿವೃದ್ಧಿಪಡಿಸಿರುವ ಮೊದಲ ಹಂತದಲ್ಲಿ 10 ಸಾವಿರ ಡೋಸ್'ಗಳನ್ನೂ ನೀಡಲಾಗುತ್ತದೆ ಎಂದು DRDO'ನ ಅಧಿಕಾರಿ ನಾರಾಯಣ್ ಭಟ್ ರವರು ಮಾಹಿತಿಯನ್ನು ನೀಡಿದ್ದಾರೆ.

* DRDO ಅಭಿವೃದ್ಧಿಪಡಿಸಿರುವ ಈ ಔಷಧಿ ಪುಡಿಯ ರೂಪದಲ್ಲಿರಲಿದೆ, ಈ 2 ಡಿಜಿ ಔಷಧವನ್ನು ನೀರಿನಲ್ಲಿ ಬೆರೆಸಿ ಸೇವಿಸಬಹುದಾಗಿದೆ, ಮತ್ತು ಇದರಿಂದ ಕೋವಿಡ್ 19 ರೋಗಿಗಳು ಶೀಘ್ರವಾಗಿ ಗುಣವಾಗಲು ಇದು ಅನುಕೂಲವಾಗಿದೆ ಜೊತೆಗೆ ರೋಗಿಗಳಿಗೆ ಆಮ್ಲಜನಕದ ಅವಲಂಬನೆಯನ್ನು ಕಡಿಮೆ ಮಾಡಲು ಸಹಾಯಕಾರಿಯಾಗಲಿದೆ ಎಂದು ವಿಜ್ಞಾನಿಗಳು ಹೇಳಿಕೆಯನ್ನು ನೀಡಿದ್ದಾರೆ.

### RBI ನಿಂದ ಪಶ್ಚಿಮ ಬಂಗಾಳದ ಕೋ ಆಪರೇಟಿವ್ ಬ್ಯಾಂಕ್ ಪರವಾನಗಿ ರದ್ದು




* ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (RBI) ಪಶ್ಚಿಮ ಬಂಗಾಳದ ಯುನೈಟೆಡ್ ಕೋ ಆಪರೇಟಿವ್ ಬ್ಯಾಂಕ್ ಪರವಾನಗಿಯನ್ನು ರದ್ದುಗೊಳಿಸಿದೆ, ಇದರಿಂದ ಬ್ಯಾಂಕ್'ನ ಯಾವುದೇ ವ್ಯವಹಾರ ಮಾಡಲು ಸಾಧ್ಯವಿಲ್ಲ ಎಂದು ತಿಳಿಸಲಾಗಿದೆ.

* ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ 2021ರ ಮೇ.13ರಂದು ಪಶ್ಚಿಮ ಬಂಗಾಳದ ಯುನೈಟೆಡ್ ಕೋ ಆಪರೇಟಿವ್ ಬ್ಯಾಂಕ್ ಪರವಾನಗಿಯನ್ನು ರದ್ದುಗೊಳಿಸಿದೆ.

* ಪ್ರಸ್ತುತ ಈ ಬ್ಯಾಂಕ್'ಗೆ RBI ಆದೇಶ ಇಲ್ಲದೆ ಖಾತೆದಾರರ ಹಣ ವಿತ್ ಡ್ರಾ ಸಾಧ್ಯವಾಗುವುದಿಲ್ಲ ಎಂದು ತಿಳಿಸಿದೆ ಆದರೆ ಜೊತೆಯಲ್ಲೇ ಬ್ಯಾಂಕ್'ನ ಎಲ್ಲ ಖಾತೆದಾರರ ಹಣ ಸುರಕ್ಷಿತವಾಗಿರುತ್ತದೆ ಎಂದು RBI ಮಾಹಿತಿಯನ್ನು ನೀಡಿದೆ.

* ಪ್ರಸ್ತುತ RBI ಪಶ್ಚಿಮ ಬಂಗಾಳದ ಈ ಯುನೈಟೆಡ್ ಕೋ ಆಪರೇಟಿವ್ ಬ್ಯಾಂಕ್ ತನ್ನ ವ್ಯವಹಾರಗಳನ್ನೂ ಮುಂದುವರಿಸಲು ಬ್ಯಾಂಕಿಗೆ ಸಾಕಷ್ಟು ಬಂಡವಾಳವಿಲ್ಲ ಮತ್ತು ಖಾತೆದಾರರ ಹಣದ ಸುರಕ್ಷತೆಯಿಂದಾಗಿ ಬ್ಯಾಂಕಿನ ವ್ಯವಹಾರವನ್ನು ಮುಚ್ಚಬೇಕಾಗುತ್ತದೆ ಎಂದು ತಿಳಿಸಿದೆ.

* RBI 1949ರ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಯ ಸೆಕ್ಷನ್ 56ರ ಸೆಕ್ಷನ್ 11(1) ಮತ್ತು ಸೆಕ್ಷನ್ 22(3) (D) ನಿಬಂಧನೆಗಳ ಅಡಿಯಲ್ಲಿ ಪಶ್ಚಿಮ ಬಂಗಾಳದ ಈ ಯುನೈಟೆಡ್ ಕೋ ಆಪರೇಟಿವ್ ಬ್ಯಾಂಕ್'ನ್ನು ಸ್ಥಗಿತಗೊಳಿಸಲು RBI ಕ್ರಮ ಕೈಗೊಂಡಿದೆ ಎಂದು ತಿಳಿದು ಬಂದಿದೆ.

### 'ಬಸವಶ್ರೀ ಪ್ರಶಸ್ತಿ' ಘೋಷಣೆ



* ಪ್ರಸ್ತುತ 2020ನೇ ಸಾಲಿನ ಬಸವ ಪ್ರಶಸ್ತಿಯ ಬಗ್ಗೆ ಡಾ. ಶಿವಮೂರ್ತಿ ಮುರುಘಾ ಶರಣರು ಬಸವಶ್ರೀ ಪ್ರಶಸ್ತಿ ಪುರಸ್ಕೃತರ ಬಗೆಗಿನ ಮಾಹಿತಿಯನ್ನು ಘೋಷಣೆ ಮಾಡಿದ್ದಾರೆ.

* 2020ನೇ ಸಾಲಿನ ಬಸವ ಪ್ರಶಸ್ತಿಗೆ ಇಸ್ರೋ ಮಾಜಿ ಅಧ್ಯಕ್ಷ ವಿಜ್ಞಾನಿ ಕಸ್ತೂರಿ ರಂಗನ್'ಅವರನ್ನು ಆಯ್ಕೆ ಮಾಡಲಾಗಿದೆ.

* 2019ನೇ ಸಾಲಿನ ಬಸವ ಪ್ರಶಸ್ತಿಗೆ ಸರೋದ್ ವಾದಕ ಪಂಡಿತ್ ರಾಜೀವ್ ತಾರಾನಾಥ್ ಅವರನ್ನು ಆಯ್ಕೆ ಮಾಡಲಾಗಿದೆ.

* ಪ್ರಸ್ತುತ ಬಸವ ಜಯಂತಿ ಆಚರಣೆಯ ಸಮಯದಲ್ಲಿ ಡಾ. ಶಿವಮೂರ್ತಿ ಮುರುಘಾ ಶರಣರು ಮಠದ ವತಿಯಿಂದ ನೀಡಲಾಗುತ್ತಿರುವ ಬಸವಶ್ರೀ ಪ್ರಶಸ್ತಿ ಇದಾಗಿದೆ, ಈ ಪ್ರಶಸ್ತಿಯು 5 ಲಕ್ಷ ರೂ. ನಗದು ಒಳಗೊಂಡಿದೆ, ಈ ಪ್ರಶಸ್ತಿಯನ್ನು ಲಾಕ್ಡೌನ್ ತೆರುಗೊಳಿಸಿದ ನಂತರ ಪ್ರಶಸ್ತಿ ಪ್ರಧಾನ ಸಮಾರಂಭ ನಡೆಸಲಾಗುತ್ತದೆ ಎಂದು ಮಠದಿಂದ ಮಾಹಿತಿ ಬಂದಿದೆ.

## ಭಾರತ್ ಬಯೋಟೆಕ್'ನಿಂದ ರಾಜ್ಯಗಳಿಗೆ ಕೋವ್ಯಾಕ್ಸಿನ್ ಕೊರೋನಾ ಲಸಿಕೆ ರವಾನೆ




* ಪ್ರಸ್ತುತ ಭಾರತ್ ಬಯೋಟೆಕ್'ನಿಂದ ಕರ್ನಾಟಕ, ಗುಜರಾತ್, ಅಸ್ಸಾಂ, ತಮಿಳುನಾಡು, ಒಡಿಶಾ ರಾಜ್ಯಗಳಿಗೆ ಕೋವ್ಯಾಕ್ಸಿನ್ ಕೊರೋನಾ ಲಸಿಕೆಗಳನ್ನು ರವಾನೆ ಮಾಡಲಾಗಿದೆ ಎಂದು ಭಾರತ್ ಬಯೋಟೆಕ್ ಮಾಹಿತಿಯನ್ನು ನೀಡಿದೆ.

* ಇತ್ತೀಚಿಗೆ ರಾಜ್ಯಗಳಲ್ಲಿ ಕೋವ್ಯಾಕ್ಸಿನ್ ಲಸಿಕೆ ಸರಬರಾಜು ಆಗುತ್ತಿಲ್ಲ ಎಂದು ಆರೋಪಗಳು ಕೇಳಿಬರುತ್ತಿದ್ದವು ಈ ಕಾರಣದಿಂದಾಗಿ ಭಾರತ್ ಬಯೋಟೆಕ್ ಪ್ರತಿಕ್ರಿಯೆ ನೀಡಿದೆ.

* ಭಾರತ್ ಬಯೋಟೆಕ್ ಸಹ ಸಂಸ್ಥಾಪಕಿ ಹಾಗೂ ಜಂಟಿ ವ್ಯವಸ್ಥಾಪಕ ನಿರ್ದೇಶಕಿ ಸುಚಿತ್ರಾ ಅವರು ಈ ಮೇಲೆ ತಿಳಿಸಿರುವ ಎಲ್ಲ ರಾಜ್ಯಗಳಿಗೆ ಕೋವ್ಯಾಕ್ಸಿನ್ ಕೊರೋನಾ ಲಸಿಕೆಗಳನ್ನು ರವಾನಿಸಲಾಗಿದೆ, ಜೊತೆಗೆ ಇನ್ನುಳಿದ ರಾಜ್ಯಗಳಿಗೆ ರವಾನೆ ಮಾಡಲಾಗುತ್ತಿದೆ ಎಂದು ತಿಳಿಸಿದ್ದಾರೆ.

* ಪ್ರಸ್ತುತ ಭಾರತ್ ಬಯೋಟೆಕ್ ಸಂಸ್ಥೆಯಿಂದ ಮೇ.10 ರಂದು ಒಟ್ಟು 18 ರಾಜ್ಯಗಳಿಗೆ ಕೋವ್ಯಾಕ್ಸಿನ್ ಲಸಿಕೆಯನ್ನು ರವಾನಿಸಲಾಗಿದೆ ಎಂದು ಮಾಹಿತಿಯನ್ನು ನೀಡಿದ್ದಾರೆ.

## ಕೆ.ಪಿ.ಶರ್ಮಾ ಒಲಿ ನೇಪಾಳ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕಾರ



* ಕೆ.ಪಿ.ಶರ್ಮಾ ಒಲಿ ಅವರು ಪ್ರಸ್ತುತ ನೇಪಾಳ ರಾಷ್ಟ್ರದ ಪ್ರಧಾನಿಯಾಗಿ 3ನೇ ಬಾರಿ ಅಧಿಕಾರ ಸ್ವೀಕಾರ ಮಾಡಿದರು.

* ನೇಪಾಳ ರಾಷ್ಟ್ರಪತಿ ಬಿದ್ಯಾದೇವಿ ಭಂಡಾರಿ ಅವರು ಶೀತಲ ನಿವಾಸದಲ್ಲಿ ನೆರವೇರಿದ ಸಮಾರಂಭದಲ್ಲಿ ಪ್ರಧಾನಿ ಕೆಪಿ ಶರ್ಮಾ ಒಲಿ ಅವರಿಗೆ ಪ್ರಮಾಣವಚನ ಬೋಧಿಸಿದರು.

* ಈ ಹಿಂದೆ ನೇಪಾಳದ ಪ್ರತಿ ಪಕ್ಷಗಳು ಪ್ರಧಾನಿ ಕೆಪಿ ಶರ್ಮಾ ಒಲಿ ಅವರಿಗೆ ವಿಶ್ವಾಸ ಮತಯಾಚನೆ ಮಾಡುವಂತೆ ಸೂಚಿಸಿದ್ದವು ಇದರಿಂದಾಗಿ ನೇಪಾಳ ಪ್ರಧಾನಿ ವಿಶ್ವಾಸಮತ ಯಾಚನೆ ಮಾಡಿದರು, ಆದರೆ ಇವರಿಗೆ ಬಹುಮತ ಪಡೆಯಲು ಸಾಧ್ಯವಾಗಲಿಲ್ಲ, ಇದಾದ ನಂತರ ನೇಪಾಳ ಪ್ರತಿ ಪಕ್ಷಗಳು ಕೂಡ ಬಹುಮತ ಪಡೆಯವಲ್ಲಿ ವಿಫಲವಾದವು, ಈ ಕಾರಣದಿಂದಾಗಿ ಶರ್ಮಾ ಒಲಿ ಅವರನ್ನೇ ಪ್ರಧಾನಿಯನ್ನಾಗಿ ಮರು ನೇಮಕ ಮಾಡಲಾಯಿತು ಎಂದು ತಿಳಿಸಿದ್ದಾರೆ.

## ಆಸ್ಟ್ರೇಲಿಯಾದಲ್ಲಿ ಇಲಿ ಮಳೆ!



* ಆಸ್ಟ್ರೇಲಿಯಾದಲ್ಲಿ ಇಲಿಗಳ ಜನಸಂಖ್ಯೆಯು ತೀವ್ರವಾಗಿ ಹೆಚ್ಚಾಗಿದೆ, ಈ ಇಲಿಗಳು ಕೃಷಿ ಮಾಡಲಾಗಿರುವ ಬೆಳೆ ಹಾಗೂ ಸಂಗ್ರಹಿಸಿದ ಆಹಾರ ಧಾನ್ಯಗಳಿಗೆ ವ್ಯಾಪಕ ಹಾನಿಯನ್ನು ಉಂಟು ಮಾಡುತ್ತಿವೆ, ಹೀಗಾಗಿ ಇದನ್ನು ಇಲಿ ಮಳೆ ಎಂದು ಕರೆಯಲಾಗುತ್ತದೆ.

* ರೈತರು ಕೆಲವು ಸ್ಥಳಗಳಲ್ಲಿ ತಮ್ಮ ಸಾಯಿಲ್(ಮಣ್ಣು) ಸ್ವಚ ಗೊಳಿಸುತ್ತಿರುವುದರಿಂದ ಇಲಿಗಳು ಮಳೆಯಂತೆ ಸುರಿಯುತ್ತಿವೆ, ಇತ್ತೀಚೆಗೆ ಸಾಮಾಜಿಕ ಜಾಲತಾಣದಲ್ಲಿ ಬಿಡುಗಡೆಯಾದ ವೀಡಿಯೊಪ್ರಕಾರ ಸಾಯಿಲ್(ಮಣ್ಣು) ಸ್ವಚಗೊಳಿಸುವಾಗ ಇಲಿಗಳು ಯಂತ್ರದಿಂದ ಸುರಿಯುವುದನ್ನು ತೋರಿಸಲಾಗಿದೆ ಇದರಿಂದಾಗಿ ಇದಕ್ಕೆ ಇಲಿ ಮಳೆ ಎಂಬ ಹೆಸರು ಆಚರಣೆಗೆ ಬಂದಿದೆ ಎನ್ನಲಾಗಿದೆ.

* ಪ್ರಸ್ತುತ ಇಲಿಗಳ ಈ ದೊಡ್ಡ ಜನಸಂಖ್ಯೆಯಿಂದಾಗಿ ಸಂಗ್ರಹವಾಗಿರುವ ಅಪಾರ ಪ್ರಮಾಣದ ಆಹಾರ ಧಾನ್ಯಗಳಿಗೆ ಹಾನಿಯಾಗುತ್ತಿದೆ.

* ಪ್ಲೇಗ್ ಎಂಬುದು ಯೆರ್ಸೀನಿಯಾ ಪೆಸ್ಟಿಸ್ ಎಂಬ ರಾಡ್ ಆಕಾರದ ಬ್ಯಾಕ್ಟೀರಿಯಾದಿಂದ ಉಂಟಾಗುವ ಮಾರಣಾಂತಿಕ ಸಾಂಕ್ರಾಮಿಕ ಕಾಯಿಲೆಯಾಗಿದೆ, ಮತ್ತು ಇದು ದಂಶಕಗಳಂತಹ ಪ್ರಾಣಿಗಳಲ್ಲಿ ಕಂಡುಬರುತ್ತದೆ, ಇಲಿಗಳ ಜನಸಂಖ್ಯೆಯು ಹೆಚ್ಚಾಗುತ್ತಿದೆ ಜೊತೆಗೆ ಪ್ಲೇಗ್ ಹೆಚ್ಚುತ್ತಿದೆ.

* ಪ್ಲೇಗ್ ರೋಗವು 13ನೇ ಶತಮಾನದಲ್ಲಿ ಯುರೋಪಿನ ಲಕ್ಷಾಂತರ ಜೀವಗಳನ್ನು ಬಲಿ ತೆಗೆದುಕೊಂಡಿತ್ತು, ಇದೆ ಕಾರಣದಿಂದ ಇದಕ್ಕೆ ಬ್ಲ್ಯಾಕ್ ಡೆತ್ ಎಂಬ ಹೆಸರು ಕೂಡ ಬಂದಿದೆ.

* ಪ್ಲೇಗ್ ಇದು ಪೂರ್ವ ಆಸ್ಟ್ರೇಲಿಯಾದ ರಾಜ್ಯಗಳಲ್ಲಿ ಮಾರ್ಚ್ ಮಧ್ಯದಲ್ಲಿ ಆರಂಭವಾಯಿತು.

* ಆಸ್ಟ್ರೇಲಿಯಾ ರೈತರು, ನಿವಾಸಿಗಳ ಮೇಲೆ ಪರಿಣಾಮ ಬೀರುವ ಮೌಸ್ ಪ್ಲೇಗ್'ನ್ನು ಎದುರಿಸಲು ನ್ಯೂ ಸೌತ್ ವೇಲ್ಸ್ ಸರ್ಕಾರವು 50 ಮಿಲಿಯನ್ USDಬೆಂಬಲ ಪ್ಯಾಕೇಜ್ ರೈತರಿಗೆ ನೀಡಿತ್ತು, ಮತ್ತು ದೇಶದಲ್ಲಿನ ಇಲಿ ಮಳೆ ನಿಯಂತ್ರಣಕ್ಕೆ ತರಲು ಸರ್ಕಾರವು ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ತಿಳಿದು ಬಂದಿದೆ.

# 17-05-2021

## ಇಟಾಲಿಯನ್ ಓಪನ್ ಮಹಿಳಾ ಸಿಂಗಲ್ಸ್



* ಪೋಲೆಂಡಿನ ಟೀನೇಜರ್ ಆಟಗಾರ್ತಿ ಐಗಾ ಸ್ವಿಯಾಟೆಕ್ ಅವರು ಫ್ರೆಂಚ್ ಓಪನ್ ಚಾಂಪಿಯನ್ ಇಟಾಲಿಯನ್ ಓಪನ್ ಫೈನಲ್‌ನಲ್ಲಿ ಟ್ರೋಫಿಯನ್ನು ಗೆದ್ದು ಸಂಭ್ರಮಿಸಿದ್ದಾರೆ.

* ಇಟಾಲಿಯನ್ ಓಪನ್ ಫೈನಲ್‌ನಲ್ಲಿ 19 ವರ್ಷದ ಸ್ವಿಯಾಟೆಕ್ ಅವರು 2019ರ ಚಾಂಪಿಯನ್'ನ ಜೆಕ್ ಆಟಗಾರ್ತಿ ಕ್ಯಾರೋಲಿನಾ ಪ್ಲಿಸ್ಕೋವಾ ವಿರುದ್ಧ ಜಯ ಸಾಧಿಸಿ ಟ್ರೋಫಿಯನ್ನು ಪಡೆದುಕೊಂಡಿದ್ದಾರೆ.

## ಇಟಾಲಿಯನ್ ಓಪನ್ ಫೈನಲ್ ಪಂದ್ಯದಲ್ಲಿ ರಫೇಲ್ ನಡಾಲ್'ಗೆ ಜಯ



* ಇಟಾಲಿಯನ್ ಓಪನ್ ಟೆನಿಸ್ ಟೂರ್ನಿಯ ಪುರುಷರ ವಿಭಾಗದ ಫೈನಲ್ ಪಂದ್ಯವು ಸ್ಟಾರ್ ಟೆನಿಸ್ ಆಟಗಾರ ಆಗಿರುವ ಸರ್ಬಿಯಾದ ನೋವಾಕ್ ಜೋಕೊವಿಚ್ ಹಾಗೂ ರಫೇಲ್ ನಡಾಲ್ ಅವರು ಮಧ್ಯೆ ನಡೆಯಿತು ಆ ಫೈನಲ್ ಪಂದ್ಯದಲ್ಲಿ ರಫೇಲ್ ನಡಾಲ್ ಅವರು ಪ್ರಶಸ್ತಿ ಗೆದ್ದುಕೊಂಡಿದ್ದಾರೆ.

* 10ನೇ ಇಟಾಲಿಯನ್ ಓಪನ್ ಫೈನಲ್ಸ್ ಪಂದ್ಯದಲ್ಲಿ ನಡಾಲ್ ಜೋಕೊವಿಚ್ ಅವರನ್ನು ಸೋಲಿಸಿದರು, ರಫೇಲ್ ನಡಾಲ್ ಅವರು 14ನೇ ಪ್ರಶಸ್ತಿಯನ್ನು ಗೆದ್ದ ಖುಷಿಯನ್ನು ಹಂಚಿಕೊಂಡರು.

## ರಷ್ಯಾದ ಸ್ಪುಟ್ನಿಕ್ ವಿ 2ನೇ ಹಂತದ ಲಸಿಕೆ ಹೈದರಾಬಾದ್‌ಗೆ




* ರಷ್ಯಾದ ಸ್ಪುಟ್ನಿಕ್ ವಿ 2ನೇ ಹಂತದ ಲಸಿಕೆಯು ಭಾರತದ ಹೈದರಾಬಾದ್‌ಗೆ ಬಂದು ತಲುಪಿದೆ, ಕೊರೋಣ ವೈರಸ್'ನ ವಿರುದ್ಧದ ಹೋರಾಟದಲ್ಲಿ ಸ್ಪುಟ್ನಿಕ್ ವಿ ಲಸಿಕೆ ಅತ್ಯಂತ ಪರಿಣಾಮಕಾರಿ ಆಗಿ ಕಾರ್ಯ ನಿರ್ವಹಿಸಲಿದೆ ಎಂದು ರಷ್ಯಾದ ತಜ್ಞರು ಮಾಹಿತಿಯನ್ನು ನೀಡಿದ್ದಾರೆ.

* ಪ್ರಸ್ತುತ ಹೈದರಾಬಾದ್‌ಗೆ ರಷ್ಯಾದ ಸ್ಪುಟ್ನಿಕ್ ವಿ ಲಸಿಕೆ ಬಂದು ತಲುಪಿದೆ ಎಂದು ಭಾರತದಲ್ಲಿನ ರಷ್ಯಾ ರಾಯಭಾರಿ ಎನ್. ಕುಡಶೇವ್ ಅವರು ತಿಳಿಸಿದ್ದಾರೆ.

* ಭಾರತದಲ್ಲಿ ಸ್ಪುಟ್ನಿಕ್ ವಿ ಲಸಿಕೆಯನ್ನು ಹೈದರಾಬಾದ್‌ನ ರೆಡ್ಡೀಸ್ ಸಂಸ್ಥೆಯು ವಿತರಣೆ ಮಾಡಲಿದೆ ಎಂದು ತಿಳಿದು ಬಂದಿದೆ.

* ರಷ್ಯಾದಿಂದ ಭಾರತಕ್ಕೆ 361 ಮಿಲಿಯನ್ ಡೋಸ್ ಸ್ಪುಟ್ನಿಕ್ ವಿ ಕೊರೊನಾ ಲಸಿಕೆಯು 2022ರ ಅಂತ್ಯದೊಳಗೆ ಬಂದು ತಲುಪಲಿದೆ.

## ಮೇ.16 : ರಾಷ್ಟ್ರೀಯ ಡೆಂಗ್ಯೂ ದಿನ




* ರಾಷ್ಟ್ರೀಯ ಡೆಂಗ್ಯೂ ದಿನವನ್ನು ಪ್ರತಿವರ್ಷ ಮೇ.16 ರಂದು ಆಚರಿಸಲಾಗುತ್ತದೆ, ಡೆಂಗ್ಯೂನ ರೋಗ ಲಕ್ಷಣಗಳು, ಚಿಕಿತ್ಸೆಯ ಬಗ್ಗೆ ಅರಿವು ಮೂಡಿಸಲು ಈ ದಿನ ಆಚರಣೆ ಮಾಡಲಾಗುತ್ತದೆ, ಪ್ರಸ್ತುತ ಡೆಂಗ್ಯೂ ಈಡಿಸ್ ಸೊಳ್ಳೆಯಿಂದ ಹರಡುವ ವೈರಲ್ ಜ್ವರವಾಗಿದೆ.

* ಡೆಂಗ್ಯೂ ಈಡಿಸ್ ಎಂಬ ಸೊಳ್ಳೆಗಳಿಂದ ಹರಡುವ ಸೋಂಕಾಗಿದೆ, ಇದು ಹಾಳಾಗಿರುವ ಅಥವಾ ಬೀಸಾಕಿದ ಟೈರ್, ಹಳೆಯ ಎಣ್ಣೆಯ ಡ್ರಮ್, ನೀರು ಸಂಗ್ರಹಿಸುವ ತೊಟ್ಟಿಗಳಲ್ಲಿ ಸೊಳ್ಳೆಗಳು ಹುಟ್ಟಿಕೊಳ್ಳುತ್ತವೆ ಇದರಿಂದ ಸೋಂಕು ಹರಡುತ್ತದೆ ಮತ್ತು ಇದು ಮಳೆಗಾಲದಲ್ಲಿ ಹೆಚ್ಚಾಗಿ ಹರಡುತ್ತವೆ.

* ಡೆಂಗ್ಯೂ ಜ್ವರವು ಉಷ್ಣವಲಯದ ರೋಗವಾಗಿದೆ ಇದು ಸಾಮಾನ್ಯವಾಗಿ 14ದಿನಗಳಲ್ಲಿ ಲಕ್ಷಣಗಳನ್ನೂ ತೋರಿಸುತ್ತದೆ.
ಡೆಂಗ್ಯೂ ಜ್ವರದ ಲಕ್ಷಣಗಳು:
• ತೀವ್ರ ತಲೆನೋವು • ಕಣ್ಣು ನೋವು • ಜಂಟಿ ಮತ್ತು ಸ್ನಾಯು ನೋವು • ಹಸಿವಾಗದಿರುವುದು, ಉದರದ ಅಸ್ವಸ್ಥತೆ • ತುರಿಕೆ • 103 ಡಿಗ್ರಿಗಿಂತಲೂ ಹೆಚ್ಚಿನ ಜ್ವರ • ಅತಿಯಾದ ಸುಸ್ತು.

## ತೌಕ್ತೆ ಚಂಡಮಾರುತ ಪ್ರತಾಪ 5 ರಾಜ್ಯಗಳಲ್ಲಿ




* ತೌಕ್ತೆ ಚಂಡಮಾರುತದಿಂದಾಗಿ ಹಲವು ರಾಜ್ಯಗಳಲ್ಲಿ ಅನಾಹುತಗಳನ್ನು ಸೃಷ್ಟಿಸಿದೆ, ಅಲ್ಲದೆ ಹಾನಿಯನ್ನು ಕೂಡ ಉಂಟುಮಾಡಿದೆ, ಮತ್ತೆ ಇದು ಉತ್ತರಮುಖಿಯಾಗಿ ಮುಂದುವರೆದಿದೆ ಎಂದು ತಿಳಿದು ಬಂದಿದೆ.

* ಪ್ರಸ್ತುತ ಹವಾಮಾನ ಇಲಾಖೆ ನೀಡಿರುವ ಮಾಹಿತಿಯ ಪ್ರಕಾರ ಈ ತೌಕ್ತೆ ಚಂಡಮಾರುತವು ಮಂಗಳವಾರದ ಸಮಯಕ್ಕೆ ಗುಜರಾತ್‌ನ ಕರಾವಳಿ ಪ್ರದೇಶಕ್ಕೆ ಅಪ್ಪಳಿಸಲಿದೆ ಎಂದು ತಿಳಿಸಿದೆ.

* ಪ್ರಸ್ತುತ ಈ ತೌಕ್ತೆ ಚಂಡಮಾರುತವು ಗುಜರಾತ್, ಮಹಾರಾಷ್ಟ್ರ, ಕರ್ನಾಟಕ, ಕೇರಳ ಮತ್ತು ತಮಿಳುನಾಡು ಕರಾವಳಿ ಪ್ರದೇಶಗಳಲ್ಲಿ ವ್ಯಾಪಕ ಮಳೆ ಮತ್ತು ಭೂಕುಸಿತ ಹಾಗೂ ಹಾನಿಯನ್ನು ಉಂಟುಮಾಡುತ್ತದೆ ಎಂದು ಹವಾಮಾನ ಇಲಾಖೆಯು ಮಾಹಿತಿಯನ್ನು ನೀಡಿತ್ತು.

* ರಾಷ್ಟ್ರೀಯ ವಿಪತ್ತು ಸ್ಪಂದನೆ ಪಡೆಯ (NDRF) 5ರಾಜ್ಯಗಳಲ್ಲಿ ವಿಪತ್ತು ನಿರ್ವಹಣೆಗೆ 50ಕ್ಕೂ ಹೆಚ್ಚು ತಂಡಗಳನ್ನು ರಚಿಸಿದೆ.

## ಸ್ವದೇಶಿ ತಂತ್ರಜ್ಞಾನದ ವೆಂಟಿಲೇಟರ್‌ಗಳು, ಆಮ್ಲಜನಕ ಸಾಂದ್ರಕಗಳನ್ನು ಸಿದ್ಧಪಡಿಸಿದ ಇಸ್ರೋ

* ಭಾರತದ ಹೆಮ್ಮೆಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ, ವಿಕ್ರಮ್ ಸಾರಾಭಾಯಿ ಬಾಹ್ಯಾಕಾಶ ಸಂಶೋಧನ ಕೇಂದ್ರದಲ್ಲಿರುವ ಇಸ್ರೋ ವಿಜ್ಞಾನಿಗಳು ಅತ್ಯಾಧುನಿಕ ಸ್ವದೇಶಿ ತಂತ್ರಜ್ಞಾನದ ವೆಂಟಿಲೇಟರ್‌ಗಳು, ಆಮ್ಲಜನಕ ಸಾಂದ್ರಕಗಳನ್ನು ಸಿದ್ಧಪಡಿಸಿದ್ದಾರೆ, ಮತ್ತು ಈ ಕೋವಿಡ್ 19'ನ ಸಮಯದಲ್ಲಿ ಈ ಸಾಧನಗಳನ್ನು ವಿವಿಧ ಉದ್ಯಮಗಳಿಗೆ ಉಚಿತವಾಗಿ ನೀಡಲು ನಿರ್ಧಾರ ಮಾಡಲಾಗಿದೆ ಎಂದು ವಿಎಸ್‌ಎಸ್‌ಸಿ ನಿರ್ದೇಶಕ ಡಾ.ಎಸ್.ಸೋಮನಾಥ್ ವಿವರಣೆಯನ್ನು ನೀಡಿದ್ದಾರೆ.

* ಪ್ರಸ್ತುತ ಇಸ್ರೋ (ISRO) 3 ರೀತಿಯ ಅಥವಾ ವಿಧದ ಅತ್ಯಾಧುನಿಕ ವೆಂಟಿಲೇಟರ್‌ಗಳನ್ನು ಸಿದ್ಧಪಡಿಸಿದೆ, 1ನೇ ವೆಂಟಿಲೇಟರ್ ದಿನಬಳಕೆಗೆ ಉತ್ತಮವಾದ ಗುಣಮಟ್ಟವನ್ನು ಹೊಂದಿದೆ, 2ನೇ ವೆಂಟಿಲೇಟರ್ ಗಾಳಿ ಕಡಿಮೆ ಪ್ರಮಾಣದಲ್ಲಿ ಇದ್ದರು ಕೂಡ ತನ್ನ ಕಾರ್ಯವನ್ನು ಸುಗಮವಾಗಿ ನಿರ್ವಹಿಸುತ್ತದೆ, 3ನೇ ವೆಂಟಿಲೇಟರ್ ವಿದ್ಯುತ್ ಅಗತ್ಯ ಇಲ್ಲದೆ ತನ್ನ ಕಾರ್ಯವನ್ನು ನಿರ್ವಹಿಸುತ್ತದೆ.

* ಭಾರತೀಯ ಇಸ್ರೋ ಸಿದ್ಧಪಡಿಸಿರುವ ಈ ವೆಂಟಿಲೇಟರ್ ಸಾಧನಗಳು ಗಾಳಿಯಲ್ಲಿರುವ ಸಾರಜನಕವನ್ನು ಹೀರಿಕೊಂಡು ಸರಿ ಸುಮಾರು ಶೇ.95ರಷ್ಟು ಶುದ್ಧ ಆಮ್ಲಜನಕವನ್ನು ಮಾನವನ ಶರೀರಕ್ಕೆ ನೀಡುತ್ತವೆ ಎಂದು ಇಸ್ರೋ ವಿಜ್ಞಾನಿಗಳು ಈ ಬಗೆಯ ಮಾಹಿತಿಯನ್ನು ನೀಡಿದ್ದಾರೆ.

## ಚೀನಾ ದೇಶವು ಮಂಗಳ ಗ್ರಹದ ಮೇಲೆ ಯಶಸ್ವಿಯಾಗಿ ರೋವರ್ ಇಳಿಸಿದೆ



* ಚೀನಾ ದೇಶವು ತನ್ನ ರೋವರ್'ನ್ನು ಮಂಗಳ ಗ್ರಹದ ಮೇಲೆ ಯಶಸ್ವಿಯಾಗಿ ಇಳಿಸಿದೆ, ಹಾಗೂ ಇತಿಹಾಸದಲ್ಲಿ ಕೆಂಪು ಗ್ರಹ ಮಂಗಳನ ಮೇಲೆ ರೋವರ್ ಇಳಿಸಿದ 2ನೇ ದೇಶವಾಗಿದೆ ಎಂದು ಚೀನಾ ರಾಷ್ಟ್ರದ ಸರ್ಕಾರಿ ಸಿನ್ಹುವಾ ಸುದ್ದಿವಾಹಿನಿ ಸಂಸ್ಥೆ ಮಾಹಿತಿಯನ್ನು ನೀಡಿದೆ.


* ಸೌರಶಕ್ತಿ ಚಾಲಿತ ಜುರಾಂಗ್ ರೋವರ್ ಸುಮಾರು 240 ಕೀ. ಗ್ರಾಂಗಳಷ್ಟು ತೂಕವಿದೆ ಮತ್ತು ಈ ರೋವರ್ 6 ವೈಜ್ಞಾನಿಕ ಸಾಧನಗಳನ್ನು ಒಳಗೊಂಡಿದೆ.

* ಚೀನಾ ದೇಶದ ಈ ರೋವರ್ ಮಂಗಳ ಗ್ರಹದ ಮೇಲ್ಮೈಯಲ್ಲಿರುವ ಜೀವಿಗಳನ್ನು ಹುಡುಕಲು, ಮೂರು ತಿಂಗಳ ಕಾರ್ಯಾಚರಣೆಗೆ ಲ್ಯಾಂಡರ್‌ನಿಂದ ನಿಯೋಜನೆ ಮಾಡಲಾಗಿದೆ ಎಂದು ತಿಳಿದು ಬಂದಿದೆ.

* ಹೈನಾನ್‌ನ ವೆನ್‌ಚಾಂಗ್ ಬಾಹ್ಯಾಕಾಶ ಉಡಾವಣಾ ಕೇಂದ್ರದಿಂದ ಈ ಹಿಂದಿನ ವರ್ಷ ಜುಲೈ 23ರಂದು ಲಿಯಾನ್ ಮಾರ್ಚ್ 5ರ ರಾಕೆಟ್ ಮೂಲಕ ಟಿಯಾನ್ವೆನ್ 1 ಮಾರ್ಸ್ ಆರ್ಬಿಟರ್‌ನ್ನು ಉಡಾವಣೆ ಮಾಡಲಾಯಿತು, ಇದು ತನ್ನ ಕಾರ್ಯಾಚರಣೆಯ ವೇಳೆಯಲ್ಲಿ ರೋವರ್‌ಗೆ ಅಗತ್ಯವಾದ ಸಂಕೇತವನ್ನು ನೀಡುತ್ತದೆ ಮತ್ತು ಒಂದು ಮಂಗಳದ ವರ್ಷಕ್ಕೆ ಗ್ರಹದ ಜಾಗತಿಕ ಸಮೀಕ್ಷೆಯನ್ನು ಕೂಡ ಮಾಡಲಿದೆ ಎಂದು ತಿಳಿದು ಬಂದಿದೆ.

# 18-05-2021

## 2 ಡಿಜಿ ಕೊರೊನಾ ಔಷಧಿಯ ಮೊದಲ ಬ್ಯಾಚ್ ಬಿಡುಗಡೆ




* ಕೇಂದ್ರ ರಕ್ಷಣಾ ಸಚಿವ ರಾಜನಾಥ್‌ಸಿಂಗ್ ಮತ್ತು ಕೇಂದ್ರ ಆರೋಗ್ಯ ಸಚಿವ ಹರ್ಷವರ್ಧನ್ ಅವರು DRDO ಅಭಿವೃದ್ಧಿಪಡಿಸಿರುವ 2 ಡಿಜಿ ಕೊರೊನಾ ಔಷಧಿಯ ಮೊದಲ ಬ್ಯಾಚ್'ನ್ನು ಬಿಡುಗಡೆಗೊಳಿಸಿದರು, ಕೊರೊನಾ ಸೋಂಕಿತರಿಗೆ ತುರ್ತು ಚಿಕಿತ್ಸೆ ಸಮಯದಲ್ಲಿ ಭಾರತೀಯ DRDO ಸಿದ್ಧಪಡಿಸಿರುವ 2 ಡಿಯಾಕ್ಸಿ ಡಿ ಗ್ಲೂಕೋಸ್(2 ಡಿಜಿ) ಔಷಧಿ ಬಳಕೆಗೆ ಡಿಜಿಸಿಐ ಅನುಮೋದನೆ ಸಿಕ್ಕಿದೆ ತದನಂತರ 2 ಡಿಜಿ ಔಷಧಿಯ ಮೊದಲ ಕಂತಿನ ಔಷಧಿ ಬಿಡುಗಡೆ ಮಾಡಲಾಗಿದೆ.

* DRDO ಅಭಿವೃದ್ಧಿ ಪಡಿಸಿರುವ 2 ಡಿಜಿ ಔಷಧಿ ಕೊರೊನಾ ಸೋಂಕು ತಗುಲಿರುವ ವ್ಯಕ್ತಿಗಳ ಆರೋಗ್ಯ ಸುಧಾರಿಸಲು ಈ ಔಷಧಿ ಉತ್ತಮವಾಗಿ ಕಾರ್ಯ ನಿರ್ವಹಿಸಲಿದೆ ಎಂದು ರಕ್ಷಣಾ ಸಚಿವ ರಾಜನಾಥ್‌ಸಿಂಗ್ ಹೇಳಿಕೆ ನೀಡಿದರು.

* DRDO ಅಭಿವೃದ್ಧಿ ಪಡಿಸಿರುವ 2 ಡಿಜಿ ಔಷಧಿಯು ಪೌಡರ್ ರೂಪದಲ್ಲಿ ಸಿಗಲಿದೆ ಕೋರೋಣ ಸೋಕಿತ ವ್ಯಕ್ತಿಗೆ ಆಮ್ಲಜನಕ ಕಡಿಮೆಯಾಗಿದೆ ಅನ್ನುವ ಸಂಧರ್ಭದಲ್ಲಿ ಈ ಔಷಧಿಯನ್ನು ನೀರಿನಲ್ಲಿ ಮಿಶ್ರಣ ಮಾಡಿ ಸೇವನೆ ಮಾಡುವದರಿಂದ ಅಮ್ಲಜನಕ ಸಮಸ್ಯೆಯನ್ನು ನಿಯಂತ್ರಿಸಲು ಸಹಾಯಕಾರಿಯಾಗಲಿದೆ, ಪ್ರಸ್ತುತ ಈ ಔಷಧಿಯನ್ನು DRDO ಮತ್ತು ಡಾ.ರೆಡ್ಡಿ ಲ್ಯಾಬ್ ಸಹಭಾಗಿತ್ವದಲ್ಲಿ ತಯಾರಿಸಲಾಗಿದೆ.

## ಶೀಘ್ರದಲ್ಲೇ 14 ಪ್ರಾದೇಶಿಕ ಭಾಷೆಗಳಲ್ಲಿ ಕೋವಿನ್ ಪೋರ್ಟಲ್ ಲಭ್ಯ




* ಕೇಂದ್ರ ಆರೋಗ್ಯ ಸಚಿವಾಲಯ ಮತ್ತು ಆರೋಗ್ಯ ಸಚಿವ ಹರ್ಷವರ್ಧನ್ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ನೀಡಿರುವ ಮಾಹಿತಿ ಪ್ರಕಾರ ಕೋವಿನ್ ಜಾಲತಾಣವು (ವೆಬ್ ಪೋರ್ಟಲ್) ಶೀಘ್ರದಲ್ಲೇ ಹಿಂದಿ ಹಾಗೂ 14 ಪ್ರಾದೇಶಿಕ ಭಾಷೆಗಳಲ್ಲಿ ಲಭ್ಯವಾಗಲಿದೆ ಎಂದು ತಿಳಿದು ಬಂದಿದೆ, ಕೊರೋಣ ವೈರಸ್'ನ ರೂಪಾಂತರಗಳ ಬಗ್ಗೆ ಮೇಲ್ವಿಚಾರಣೆ ಮಾಡುವ ಸಲುವಾಗಿ ಅದರ ಜೊತೆಗೆ 17 ಪ್ರಯೋಗಾಲಯಗಳನ್ನು ಐಎನ್‌ಎಸ್‌ಎಸಿಒಜಿ ನೆಟ್‌ವರ್ಕ್‌ಗೆ ಸೇರಿಸಲಾಗುವುದು ಎಂದು ಕೇಂದ್ರ ಆರೋಗ್ಯ ಸಚಿವಾಲಯ ಮಾಹಿತಿ ನೀಡಿದೆ.

* ಈ ಕೋವಿನ್ ಜಾಲತಾಣವು ವೆಬ್ ಮನೆಯಲ್ಲಿ ಪ್ರತ್ಯೇಕವಾಗಿ ಇರುವ ಬಗೆಗಿನ ಪಾಲನೆಗಳನ್ನು ಮತ್ತು ICUಗೆ ಪ್ರವೇಶ, ರೆಮ್ ಡಿಸಿವಿರ್ ಮಾಹಿತಿ ತೋರುವ ಚಿಹ್ನೆಗಳನ್ನೂ ಈ ಜಾಲತಾಣದಲ್ಲಿ ಅಳವಡಿಸಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಮಾಹಿತಿಯನ್ನು ನೀಡಿದೆ.

## ರಾಜ್ಯಗಳಿಗೆ 20 ಕೋಟಿ ಲಸಿಕೆ ಪೂರೈಕೆ ಮಾಡಿದ ಕೇಂದ್ರ ಸರ್ಕಾರ




* ಕೇಂದ್ರ ಸರ್ಕಾರ ಇಲ್ಲಿಯವರೆಗೆ ಒಟ್ಟು ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ 20 ಕೋಟಿ ಲಸಿಕೆಗಳನ್ನು ಪೂರೈಕೆ ಮಾಡಿದೆ, ಅದರಲ್ಲಿ 2 ಕೋಟಿ ಲಸಿಕೆ ಬಳಕೆಯಾಗದೆ ಇನ್ನು ಉಳಿದಿದೆ ಎಂದು ಮಾಹಿತಿ ನೀಡಿದೆ, ಮುಂಬರುವ 3 ದಿನಗಳಲ್ಲಿ ಇನ್ನೂ 3 ಲಕ್ಷ ಲಸಿಕೆಗಳನ್ನೂ ನೀಡುವದಾಗಿ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮಾಹಿತಿಯನ್ನು ಬಹಿರಂಗ ಪಡಿಸಿದೆ.

* ಕೇಂದ್ರ ಸರ್ಕಾರವು ಇಲ್ಲಿಯವರೆಗೆ ಕರ್ನಾಟಕಕ್ಕೆ 1.18 ಕೋಟಿ ಲಸಿಕೆ, ಮಹಾರಾಷ್ಟ್ರ 2 ಕೋಟಿ ಲಸಿಕೆ, ಉತ್ತರ ಪ್ರದೇಶ 1.74 ಕೋಟಿ, ಗುಜರಾತ್ 1.62 ಕೋಟಿ, ರಾಜಸ್ಥಾನ 1.60 ಕೋಟಿ, ಪಶ್ಚಿಮ ಬಂಗಾಳ 1.34 ಕೋಟಿ ಲಸಿಕೆ ಇನ್ನೂ ಹೀಗೆ ಹಲವು ರಾಜ್ಯಗಳಿಗೆ ಲಸಿಕೆಗಳನ್ನು ಪೂರೈಕೆ ಮಾಡಲಾಗಿದೆ ಎಂದು ಕೇಂದ್ರ ಸರ್ಕಾರ ಮಾಹಿತಿ ನೀಡಿದೆ.

* ಕೇಂದ್ರ ಸರ್ಕಾರವು ಎಲ್ಲ ರಾಜ್ಯ ಹಾಗೂ ಕೇಂದ್ರಾಡಳಿತದ ಮಹಾನಗರಗಳು ಸೇರಿದಂತೆ ಒಟ್ಟಾರೆ 42 ವಲಯಗಳಿಗೆ ಪ್ರತಿ ದಿನಕ್ಕೆ 3 ಲಕ್ಷದಷ್ಟು ಲಸಿಕೆಗಳನ್ನು ಪೂರೈಕೆ ಮಾಡುತ್ತಿದೆ ಎಂದು ತಿಳಿಸಿದೆ.

## ತೌಕ್ತೆ ಚಂಡಮಾರುತದಿಂದಾಗಿ ಸಮುದ್ರ ತೀರದಲ್ಲಿ ಸಿಲುಕಿದ್ದ 9 ಜನರ ರಕ್ಷಣೆ ಕಾರ್ಯ ನೌಕಾಪಡೆ ಸಿಬ್ಬಂದಿಗಳಿಂದ ಯಶಸ್ವಿ



* ಇತ್ತೀಚಿಗೆ ಅರಬ್ಬೀ ಸಮುದ್ರದಲ್ಲಿನ ವಾಯುಭಾರ ಕುಸಿತದಿಂದಾಗಿ ತೌಕ್ತೆ ಚಂಡಮಾರುತ ಬಿಸಲು ಆರಂಭಿಸಿತ್ತು ಇದರಿಂದಾಗಿ ಕರ್ನಾಟಕದ ಮಂಗಳೂರು ಕಡಲ ತೀರದ ಕಲ್ಲುಬಂಡೆಯ ಸಮೀಪ ದೋಣಿಯಲ್ಲಿ ಸಿಲುಕಿ ಕೊಂಡಿತ್ತು, ಅದರಲ್ಲಿ 9 ಜನರು ಸಿಲುಕಿಕೊಂಡಿದ್ದರು, ಪ್ರಸ್ತುತ ಭಾರತೀಯ ನೌಕಾಪಡೆ ಸಿಬ್ಬಂದಿಯು ಶೌರ್ಯ ಕಾರ್ಯದಿಂದಾಗಿ ಅವರನ್ನು ಯಶಸ್ವಿಯಾಗಿ ರಕ್ಷಣೆ ಮಾಡಿದರು.

* ಭಾರತೀಯ ನೌಕಾಪಡೆಯ ಹೆಲಿಕಾಪ್ಟರ್ ಮತ್ತು ಹಡಗಿನ ಸಹಾಯದಿಂದ ದೋಣಿಯಲ್ಲಿ ಸಿಲುಕಿ ಕೊಂಡಿರುವವರನ್ನು ಒಂದು ದಿನಪೂರ್ತಿ ಕಾರ್ಯಾಚರಣೆ ನಡೆಸಿ ರಕ್ಷಣೆ ಮಾಡಿದ್ದಾರೆ ಎಂದು ಕರ್ನಾಟಕ ಕರಾವಳಿ ಪಡೆಯ ಡಿಐಜಿ ಎಸ್. ಬಿ. ವೆಂಕಟೇಶ್ ಅವರು ಮಾಹಿತಿಯನ್ನು ನೀಡಿದ್ದಾರೆ.

* ರಾಜ್ಯದ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪನವರು ಅರಬ್ಬೀ ಸಮುದ್ರದಲ್ಲಿನ ಟಗ್'ನಲ್ಲಿ ಸಿಲುಕಿ ಕೊಂಡಿದ್ದ 9 ಜನ ಕಾರ್ಮಿಕರನ್ನು ರಕ್ಷಣೆ ಮಾಡಿರುವ, ಕೋಸ್ಟ್ ಗಾರ್ಡ್ ಮತ್ತು ನೌಕಾಪಡೆಗೆ ಅಭಿನಂದನೆಗಳನ್ನು ತಿಳಿಸಿದರು.

## ಒಟ್ಟು 6000 ನಿಲ್ದಾಣಗಳಿಗೆ ವೈ ಫೈ ಸೌಲಭ್ಯ ಕಲ್ಪಿಸಿದ ಭಾರತೀಯ ರೈಲ್ವೆ




* ಭಾರತೀಯ ರೈಲ್ವೆಯ ಇಲಾಖೆಯು ತನ್ನ ಪ್ರಯಾಣಿಕರು ಮತ್ತು ಸಾರ್ವಜನಿಕರನ್ನು ಸಂಪರ್ಕಿಸಲು ದೂರದ ನಿಲ್ದಾಣಗಳಲ್ಲಿ ವೈ ಫೈ ಸೌಲಭ್ಯವನ್ನು ಕಲ್ಪಿಸುತ್ತಿದೆ, ಪ್ರಸ್ತುತ ಭಾರತೀಯ ರೈಲ್ವೆ ತನ್ನ 6,000ನೇ ರೈಲ್ವೆ ನಿಲ್ದಾಣದಲ್ಲಿ ವೈ ಫೈ ಸೌಲಭ್ಯ ಕಲ್ಪಿಸಿದೆ.

* ಪ್ರಸ್ತುತ ಭಾರತೀಯ ರೈಲ್ವೆ ಇಲಾಖೆಯು 2016ರ ಜನವರಿಯಲ್ಲಿ ಮುಂಬೈ ರೈಲ್ವೆ ನಿಲ್ದಾಣದಲ್ಲಿ ಮೊದಲನೇ ವೈ ಫೈ ಸೌಲಭ್ಯ ಕಲ್ಪಿಸಿತ್ತು ಅಲ್ಲಿಂದ ಭಾರತೀಯ ರೈಲ್ವೆ ತನ್ನ ನಿಲ್ದಾಣಗಳಿಗೆ ವೈ ಫೈ ಸೌಲಭ್ಯ ನೀಡುವ ಕಾರ್ಯ ಪ್ರಾರಂಭಿಸಿತ್ತು.

* ಈ ಹಿಂದೆ ಭಾರತೀಯ ರೈಲ್ವೆ ಇಲಾಖೆಯು ಪೂರ್ವ ಬಂಗಾಳದ ಮಿಡ್ನಾಪುರದ ರೈಲ್ವೆ ನಿಲ್ದಾಣಕ್ಕೆ ವೈ ಫೈ ನೀಡಿತ್ತು, ಇದು 5000ನೇ ರೈಲ್ವೆ ನಿಲ್ದಾಣವಾಗಿತ್ತು, ಇದೀಗ ರೈಲ್ವೆ ಇಲಾಖೆಯು ಜಾರ್ಖಂಡ್‌ನ ಪೂರ್ವ ಕೇಂದ್ರೀಯ ರೈಲ್ವೆಯ ಧನ್ ಬಾದ್ ವಿಭಾಗದ ಹಝೂರಿಬಾದ್'ನಲ್ಲಿ ರೈಲ್ವೆ ನಿಲ್ದಾಣಕ್ಕೆ ವೈ ಫೈ ಸೌಲಭ್ಯ ಕಲ್ಪಿಸಿದೆ ಇದು 6000ನೇ ರೈಲ್ವೆ ನಿಲ್ದಾಣವಾಗಿದೆ.

* ಭಾರತ ಸರ್ಕಾರವು ರೈಲ್ವೆ ನಿಲ್ದಾಣಗಳಲ್ಲಿ ವೈ ಫೈ ಸೌಲಭ್ಯ ನೀಡುವದರ ಮೂಲಕ ಡಿಜಿಟಲ್ ಇಂಡಿಯಾದ ನಿರೀಕ್ಷೆಗಳಿಗೆ ಪೂರಕವಾಗುತ್ತಿದೆ, ಇದರ ಜೊತೆಗೆ ಗ್ರಾಮೀಣ ಮತ್ತು ನಗರದ ಜನಗಳ ಮಧ್ಯ ಇರುವ ನಡುವೆ ಡಿಜಿಟಲ್ ಅಂತರವನ್ನು ಕಡಿಮೆಗೊಳಿಸಲು ಮತ್ತು ಗ್ರಾಮೀಣ ಪ್ರದೇಶಗಳನ್ನು ಡಿಜಿಟಲೀಕರಣ ಮಾಡುವ ಉದ್ದೇಶವನ್ನು ಹೊಂದಿದೆ.

* ಪ್ರಸ್ತುತ ರೈಲ್ವೆ ನಿಲ್ದಾಣಗಳಲ್ಲಿ ವೈ ಫೈ ಸೌಲಭ್ಯ ನೀಡುವದರಿಂದ ರೈಲ್ವೆ ಇಲಾಖೆಗೆ ಯಾವುದೇ ತರಹದ ನಷ್ಟ ಉಂಟಾಗುವದಿಲ್ಲ, ಈ ವೈ ಫೈ ಸೌಲಭ್ಯವನ್ನು ರೈಲ್ವೆ ಸಚಿವಾಲಯದ ಸಾರ್ವಜನಿಕ ಸ್ವಾಮ್ಯದ ಉದ್ದಿಮೆ ರೈಲ್ ಟೆಲ್'ನ ಮತ್ತು ಗೂಗಲ್, ಡಿಒಟಿ, ಪಿ.ಜಿ.ಸಿ.ಐ.ಎಲ್ ಮತ್ತು ಟಾಟಾ ಟ್ರಸ್ಟ್'ನ ಸಹಯೋಗದೊಂದಿಗೆ ಈ ಸೇವೆ ನೀಡಲಾಗುತ್ತಿದೆ ಎಂದು ರೈಲ್ವೆ ಇಲಾಖೆ ವಿವರಣೆಯನ್ನು ನೀಡಿದೆ.

## 2020ರ ವಿಶ್ವಸುಂದರಿ ಪಟ್ಟ ಮೆಕ್ಸಿಕೋದ ಆಯಂಡ್ರಿಯಾ ಮೆಝಾ



* 2020ರ ವಿಶ್ವ ಸುಂದರಿಯಾಗಿ ಮೆಕ್ಸಿಕೋದ ಆಯಂಡ್ರಿಯಾ ಮೆಝಾ ಅವರು ಮೊದಲನೇ ಸ್ಥಾನ ಪಡೆದುಕೊಂಡಿದ್ದಾರೆ, ಎರಡನೇ ಸ್ಥಾನಕ್ಕೆ ಬ್ರೆಜಿಲ್‌ನ ಜ್ಯೂಲಿಯಾ ಗಾಮ ಅವರು ಮತ್ತು ಮೂರನೇ ಸ್ಥಾನಕ್ಕೆ ಪೆರು ದೇಶದ ಜೆನಿಕ್ ಮೆಸಿಟಾ ಅವರು ಆಯ್ಕೆಯಾಗಿದ್ದಾರೆ.

* ಮಿಸ್ ಯೂನಿವರ್ಸ್ 2020 ಮಿಸ್ ಯೂನಿವರ್ಸ್ ಸ್ಪರ್ಧೆಯ 69 ನೇ ಆವೃತ್ತಿಯಾಗಿದೆ, ಈ ಸ್ಪರ್ಧೆಯನ್ನು 2021ರ ಮೇ.16ರಂದು ಯುನೈಟೆಡ್ ಸ್ಟೇಟ್ಸ್‌ನ ಫ್ಲೋರಿಡಾದ ಹಾಲಿವುಡ್ನ ಸೆಮಿನೋಲ್ ಹಾರ್ಡ್ ರಾಕ್ ಹೋಟೆಲ್ ಮತ್ತು ಕ್ಯಾಸಿನೊದಲ್ಲಿ ನಡೆಸಲಾಯಿತು.

* ಪ್ರಸ್ತುತ 69ನೇ ವಿಶ್ವಸುಂದರಿ ಸ್ಪರ್ಧೆಯಲ್ಲಿ ಒಟ್ಟಾರೆ 74 ದೇಶಗಳ ಸುಂದರಿಯರು ಭಾಗವಹಿಸಿದ್ದರು.

* ಪ್ರಸ್ತುತ ವಿಶ್ವಸುಂದರಿ ಕಿರೀಟವನ್ನು ಆಯಂಡ್ರಿಯಾ ಮೆಝಾ ಅವರಿಗೆ 2019ರ ವಿಶ್ವಸುಂದರಿಯಾಗಿದ್ದ ದಕ್ಷಿಣ ಆಫ್ರಿಕಾದ ಜೋಜಿಬಿನಿ ಟುನ್ಸಿ ಅವರು ತೊಡಿಸಿದರು.

* ಪ್ರಸ್ತುತ ಉಡುಪಿಯ ಉದ್ಯಾವರ ಮೂಲದ ಅಡ್ಲೆನ್ ಕ್ಯಾಸ್ಟೆಲಿನೊ ಅವರು 4ನೇ ಸ್ಥಾನ ಪಡೆದುಕೊಂಡಿದ್ದಾರೆ, ಇವರು ಭಾರತದ ಪರವಾಗಿ ಸ್ಪರ್ಧಿಸಿರುವ ಮಿಸ್ ಇಂಡಿಯಾ ಆಗಿದ್ದಾರೆ.

## ಕೋವಿಡ್ ಸಮಿತಿ ಅಧ್ಯಕ್ಷತೆಗೆ ರಾಜೀನಾಮೆ ನೀಡಿದ ವೈರಾಲಜಿಸ್ಟ್ ಶಾಹಿದ್ ಜಮೀಲ್



* ಕೊರೊನಾ ವೈರಸ್‌ನ ರೂಪಾಂತರ ತಳಿಗಳ ಬಗೆಗಿನ ಅಧ್ಯಯನ ಮಾಡಲು ಕೇಂದ್ರ ಸರ್ಕಾರ ರಚಿಸಿರುವ ವೈಜ್ಞಾನಿಕ ಸಲಹೆಗಾರರ ಸಮಿತಿಗೆ ಖ್ಯಾತ ವೈರಾಣು ತಜ್ಞ ಶಾಹಿದ್ ಜಮೀಲ್ ಅವರು ಇತ್ತೀಚಿಗೆ ರಾಜೀನಾಮೆ ನೀಡಿದ್ದಾರೆ, ಆದರೆ ರಾಜೀನಾಮೆಗೆ ನೀಡಿದ್ದಕ್ಕೆ ಯಾವುದೇ ನಿಖರವಾದ ಕಾರಣ ಅವರು ನೀಡಿಲ್ಲ ಎಂದು ತಿಳಿದು ಬಂದಿದೆ.

# 19-05-2021

## ದೇಶದ ಪ್ರತಿ ಜಿಲ್ಲೆಯಲ್ಲಿ ಆಕ್ಸಿಜನ್ ಪ್ಲಾಂಟ್, ಪಿಎಂ ಕೇರ್ಸ್ ಫಂಡ್ ನಿಂದ ಸ್ಥಾಪನೆ



* ದೇಶದ ಪ್ರತಿ ಜಿಲ್ಲೆಯಲ್ಲೂ ಆಕ್ಸಿಜನ್ ಪ್ಲಾಂಟ್ ಪಿಎಂ ಕೇರ್ಸ್ ಫಂಡ್ ನಿಂದ ಸ್ಥಾಪನೆ ಮಾಡಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿಯವರು ಇತ್ತೀಚಿಗೆ ತಿಳಿಸಿದ್ದಾರೆ.

* ಪ್ರಧಾನಿ ನರೇಂದ್ರ ಮೋದಿ ಅವರು ಜಿಲ್ಲೆಗಳ ಜಿಲ್ಲಾಧಿಕಾರಿಗಳ ಜೊತೆ ಮಾತನಾಡಿದರು, ಹಾಗೂ ನೀವುಗಳು ನಿಮ್ಮ ಜಿಲ್ಲೆಗಳು ಕೊರೊನಾ ಮುಕ್ತ ಮಾಡಿದರೆ ದೇಶ ಗೆದ್ದಂತೆ ಎಂದು ಕಿವಿ ಮಾತು ಹೇಳಿದರು ಅದರ ಜೊತೆಗೆ ಕೃಷಿ ಭೂಮಿಯಲ್ಲಿ ಭೌತಿಕ ಅಂತರ ಕಾಪಾಡಿಕೊಂಡು ಕೆಲಸಗಳನ್ನೂ ಮಾಡಿ ಎಂದು ಹೇಳಿದರು, ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಕೊರೊನಾ ವೈರಸ್ ವಿರುದ್ಧ ಫೀಲ್ಡ್ ಕಮಾಂಡರ್'ಗಳಾಗಿ ಕೆಲಸವನ್ನು ನಿರ್ವಹಿಸಬೇಕು ಎಂದು ತಿಳಿಸಿದ್ದಾರೆ.

## ಶೇಕಡಾ 100 ರಷ್ಟು ವ್ಯಾಕ್ಸಿನೇಷನ್ ಸಾಧಿಸುವ ಗ್ರಾಮಗಳಿಗೆ 10 ಲಕ್ಷ ರೂ. ಘೋಷಣೆ : ಪಂಜಾಬ್



* ಪಂಜಾಬ್'ನ ಮುಖ್ಯಮಂತ್ರಿ ಅಮರೀಂದರ್ ಸಿಂಗ್ ಅವರು ಯಾವ ಗ್ರಾಮಗಳು ಶೇಕಡ 100ರಷ್ಟು ಲಸಿಕೆ ಗುರಿ ಸಾಧಿಸುತ್ತವೆ ಅಂತಹ ಗ್ರಾಮಗಳಿಗೆ 10 ಲಕ್ಷ ರೂಪಾಯಿ ಅನುದಾನ ನೀಡಲಾಗುತ್ತದೆ ಎಂದು ಘೋಷಣೆ ಮಾಡಿದ್ದಾರೆ.

* ವ್ಯಾಕ್ಸಿನೇಷನ್ ಡ್ರೈವ್ ಮುನ್ನಡೆಸುವಂತೆ ಮುಖ್ಯಮಂತ್ರಿ ಅಮರೀಂದರ್ ಸಿಂಗ್ ಅವರು 4 ಸಾವಿರಕ್ಕೂ ಅಧಿಕ ಸ್ಥಳಗಳಲ್ಲಿ ವರ್ಚುಯಲ್ ಮೂಲಕ ಹಳ್ಳಿಗಳ ಸದಸ್ಯರೊಂದಿಗೆ ಸಂವಾದ ನಡೆಸಿ ಅವರಿಗೆ ಸಲಹೆಗಳನ್ನು ಕೊಟ್ಟಿದ್ದಾರೆ.

* ಪ್ರಸ್ತುತ ಗ್ರಾಮಗಳಲ್ಲಿನ ಜನರು ಕೊರೊನಾ ವೈರಸ್'ನಿಂದ ಬಳಲುತ್ತಿರುವವರಿಗೆ ಚಿಕಿತ್ಸೆ ನೀಡಲು ಪಂಚಾಯಿತಿ ನಿಧಿಯಿಂದ ಪ್ರತಿ ದಿನಕ್ಕೆ 5000 ರೂ. ಉಪಯೋಗಿಸಲು ಅವಕಾಶವನ್ನು ನೀಡಿದ್ದಾರೆ, ಮತ್ತು ಜನರಲ್ಲಿ ಕೊರೋನಾ ವೈರಸ್ ಬಗ್ಗೆ ಜಾಗೃತಿ ಮೂಡಿಸಲು ಕೋರಿದ್ದಾರೆ.

## ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರಿಂದ ಕೊರೋನಾ ವಿಶೇಷ ಪ್ಯಾಕೇಜ್ ಘೋಷಣೆ



* ಇತ್ತೀಚಿಗೆ ದೇಶ್ಯಾದ್ಯಂತ ಕೋವಿಡ್ 19 2ನೇ ಅಲೇ ಅತೀ ಹೆಚ್ಚಾಗಿ ಹರಡಿದೆ ಇದರ ಮಧ್ಯೆ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರಿಂದ ಕೊರೋನಾ ವಿಶೇಷ ಪ್ಯಾಕೇಜ್ ಘೋಷಣೆ ಮಾಡಿದ್ದಾರೆ, ಈ ಪ್ಯಾಕೇಜ್'ನಲ್ಲಿ ದೆಹಲಿಯ ಎಲ್ಲ ಜನರಿಗೆ 10 ಕೆಜಿ ಅಕ್ಕಿ, ಮತ್ತು ಕೋವಿಡ್'ನಿಂದ ಮೃತರಾದ ಕುಟುಂಬಕ್ಕೆ 50 ಸಾವಿರ ರೂ. ನೀಡುವದಾಗಿ ಘೋಷಣೆ ಮಾಡಿದ್ದಾರೆ.

* ಕೋವಿಡ್'ನಿಂದ ಮೃತರ ಕುಟುಂಬದ ಮಕ್ಕಳಿಗೆ ಪ್ರತಿ ತಿಂಗಳಿಗೆ 2500 ರೂಪಾಯಿ ಪಿಂಚಣಿ ಸೌಲಭ್ಯ ನೀಡುತ್ತದೆ ಮತ್ತು ತಂದೆ, ತಾಯಿಯನ್ನು ಮತ್ತು ಪೋಷಕರನ್ನು ಕಳೆದುಕೊಂಡ ಮಕ್ಕಳಿಗೆ 25 ವರ್ಷದವರೆಗೆ ಪಿಂಚಣಿ ಸೌಲಭ್ಯ ನೀಡಲಾಗುತ್ತದೆ ಎಂದು ಈ ಮಹತ್ವದ ಘೋಷಣೆಯನ್ನು ಮಾಡಿದ್ದಾರೆ.

* ಈ ಕೋರೋಣ ಸಂಕಷ್ಟದ ಪರಿಸ್ಥಿತಿಯಲ್ಲಿ ಪಡಿತರ ಚೀಟಿ ಇಲ್ಲದೆ ಇರುವ ಬಡ ಜನರಿಗೂ ದೆಹಲಿ ಸರ್ಕಾರವು ಪಡಿತರವನ್ನು ನೀಡುತ್ತದೆ ಎಂದು ತಿಳಿಸಿದ್ದಾರೆ, ಅವರು ಯಾವುದೇ ರೀತಿಯ ಧಾಖಲೆಗಳನ್ನೂ ನೀಡುವ ಅವಶ್ಯಕತೆ ಇಲ್ಲ ಎಂದು ತಿಳಿಸಿದ್ದಾರೆ.

## ಶಿವಸುಂದರ್ ದಾಸ್ ಭಾರತ ಮಹಿಳಾ ಕ್ರಿಕೆಟ್ ತಂಡಕ್ಕೆ ಬ್ಯಾಟಿಂಗ್ ಕೋಚ್ ಆಗಿ ಆಯ್ಕೆ



* ಶಿವಸುಂದರ್ ದಾಸ್ ಅವರು ಭಾರತದ ಕ್ರಿಕೆಟ್ ತಂಡದ ಮಾಜಿ ಆರಂಭಿಕ ಆಟಗಾರರಾಗಿದ್ದರು, ಪ್ರಸ್ತುತ ಇವರು ಭಾರತ ಮಹಿಳಾ ಕ್ರಿಕೆಟ್ ತಂಡದ ಬ್ಯಾಟಿಂಗ್ ಕೋಚ್ ಆಗಿ ನೇಮಕಗೊಂಡಿದ್ದಾರೆ, ಇವರು ಈ ಮುಂದೆ ಬರುವ ಇಂಗ್ಲೆಂಡ್ ಸರಣಿಗೆ ಆಯ್ಕೆಯಾಗಿದ್ದಾರೆ.

* ಭಾರತದ ಪರವಾಗಿ ಶಿವಸುಂದರ್ ದಾಸ್ ಅವರು 23 ಟೆಸ್ಟ್ ಪಂದ್ಯಗಳಲ್ಲಿ ಆಟವಾಡಿದ್ದಾರೆ ಮತ್ತು ಟೆಸ್ಟ್ ಮಾದರಿಯಲ್ಲಿ ಎರಡು ಶತಕ ಮತ್ತು ಒಂಬತ್ತು ಅರ್ಧಶತಕಗಳನ್ನು ಬಾರಿಸಿ ಉತ್ತಮ ಸಾಧನೆಯನ್ನು ಮಾಡಿದ್ದಾರೆ.

* ಈ ಹಿಂದೆ ಭಾರತ ಮಹಿಳಾ ತಂಡಕ್ಕೆ ವಿವಿ ರಾಮನ್ ಅವರು ಕೋಚ್ ಆಗಿದ್ದರು, ಇವರು ಕೋಚ್ ಆಗಿರುವ ಸಂಧರ್ಭದಲ್ಲಿ ಭಾರತೀಯ ಮಹಿಳಾ ತಂಡವು ದಕ್ಷಿಣ ಆಫ್ರಿಕಾ ವಿರುದ್ಧ ಹೀನಾಯವಾಗಿ ಸೋತ ಕಾರಣದಿಂದಾಗಿ ಇವರನ್ನು ಈ ಹುದ್ದೆಯಿಂದ ತಗೆದಿದ್ದಾರೆ, ಇದೀಗ ಮಹಿಳಾ ತಂಡಕ್ಕೆ ರಮೇಶ್ ಪೊವಾರ್ ಅವರನ್ನು ಮುಖ್ಯ ಕೋಚ್'ಆಗಿ ನೇಮಕ ಮಾಡಲಾಗಿದೆ.

* ಭಾರತ ಮಹಿಳಾ ತಂಡ ಇಂಗ್ಲೆಂಡ್ ನಲ್ಲಿ ಒಂದು ಟೆಸ್ಟ್ ಪಂದ್ಯ ಮತ್ತು ಮೂರು ಏಕದಿನ ಮತ್ತು ಟಿ 20 ಪಂದ್ಯಗಳನ್ನು ಆಡಲಿದ್ದಾರೆ.

## ತಮಿಳಿನ ಖ್ಯಾತ ಬರಹಗಾರ ಕಿ.ರಾಜನಾರಾಯಣ್ ವಿಧಿವಶ



* ತಮಿಳಿನ ಖ್ಯಾತ ಬರಹಗಾರ ಮತ್ತು ಕಾದಂಬರಿಕಾರ, ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕೆ. ರಾಜನಾರಾಯಣ್ ಅವರು ತಮ್ಮ 98ನೇ ವಯಸ್ಸಿನಲ್ಲಿ ವಿಧಿವಶರಾದರು.

* ಕಿ. ರಾಜನಾರಾಯಣನ್ ಅವರು ಕಿ ಎಂದು ತಮಿಳು ಮೊದಲಕ್ಷರಗಳಿಂದ ಜನಪ್ರಿಯವಾಗಿದ್ದರು, ಇವರು ತಮಿಳು ಜಾನಪದ ಮತ್ತು ಭಾರತದ ತೂತುಕುಡಿಯ ಮೆಚ್ಚುಗೆ ಪಡೆದ ಬರಹಗಾರರಾಗಿದ್ದರು, 1923ರ ಸೆಪ್ಟೆಂಬರ್. 16ರಂದು ಜನಿಸಿದರು.

* ಕಿ. ರಾಜನಾರಾಯಣನ್'ವರಿಗೆ 1991ರಲ್ಲಿ ಗೋಪಲ್ಲಪುರತು ಮಕ್ಕಳ್' ಕಾದಂಬರಿಗಾಗಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ, ಇವರು ಸಣ್ಣ ಕಥೆಗಳು, ಕಾದಂಬರಿಗಳು, ಜಾನಪದ ಮತ್ತು ಪ್ರಬಂಧಗಳಿಗೆ ಪ್ರಖ್ಯಾತಿಯನ್ನು ಪಡೆದಿದ್ದರು.

* ಕಿ. ರಾಜನಾರಾಯಣನ್ ಅವರು 1980ರ ದಶಕದಲ್ಲಿ ಪುದುಚೇರಿ ವಿಶ್ವವಿದ್ಯಾಲಯದ ಜಾನಪದ ವಿಭಾಗದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ.

## ಸ್ಪುಟ್ನಿಕ್ ವಿ ಲಸಿಕೆ ಧಾರವಾಡದ ಶಿಲ್ಪಾ ಮೆಡಿಕೇರ್‌ನಲ್ಲಿ ಉತ್ಪಾದನೆ

Shilpa Medicare Limited

* ಕೊರೊನಾ ವೈರಸ್ ವಿರುದ್ಧ ಹೋರಾಡುವ ಸ್ಪುಟ್ನಿಕ್ ವಿ ಲಸಿಕೆಯನ್ನು ಕರ್ನಾಟಕ ರಾಜ್ಯದ ಧಾರವಾಡದಲ್ಲಿ ತಯಾರಿಸಲು ಡಾ.ರೆಡ್ಡಿ ಲ್ಯಾಬೊರೇಟರೀಸ್ ಸಹಯೋಗದೊಂದಿಗೆ ರಾಯಚೂರು ಮೂಲದ ಶಿಲ್ಪಾ ಮೆಡಿಕೇರ್ ಪರಸ್ಪರ ಒಪ್ಪಿ 3ವರ್ಷಗಳ ಒಪ್ಪಂದಕ್ಕೆ ಸಹಿ ಹಾಕಿವೆ.

* ಶಿಲ್ಪಾ ಮೆಡಿಕೇರ್‌ನ ಅಂಗಸಂಸ್ಥೆಯಾಗಿರುವ ಶಿಲ್ಪಾ ಬಯೋಲಾಜಿಕಲ್ಸ್ ಪ್ರೈವೇಟ್ ಲಿಮಿಟೆಡ್ ಪ್ರಸ್ತುತ ಧಾರವಾಡದಲ್ಲಿನ ಸಮಗ್ರ ಜೈವಿಕ ವಿಜ್ಞಾನ ಆರ್ & ಡಿ (Research & Development) ಕಮ್ ಉತ್ಪಾದನಾ ಕೇಂದ್ರದಿಂದ ಲಸಿಕೆಯನ್ನು ಉತ್ಪಾದನೆ ಮಾಡಲು ಡಾ.ರೆಡ್ಡಿ ಲ್ಯಾಬೊರೇಟರೀಸ್ ಜೊತೆಗೆ ಒಪ್ಪಂದ ಮಾಡಿಕೊಂಡಿದೆ, ಪ್ರಸ್ತುತ ಈ ಸಂಸ್ಥೆಯು ಮೊದಲ 12 ತಿಂಗಳಲ್ಲಿ 50 ಮಿಲಿಯನ್ ಡೋಸ್ ಗಳನ್ನು ಉತ್ಪಾದಿಸುವ ಗುರಿಯನ್ನು ಹೊಂದಿದೆ ಎಂದು ಶಿಲ್ಪಾ ಮೆಡಿಕೇರ್ ಪ್ರಕಟಣೆಯಲ್ಲಿ ಮಾಹಿತಿಯನ್ನು ನೀಡಿದೆ, ಮತ್ತು ಲಸಿಕೆಯನ್ನು ಮಾರುಕಟ್ಟೆ ಪ್ರದೇಶಗಳಲ್ಲಿ ವಿತರಣೆ ಹಾಗೂ ಮಾರಾಟ ಮಾಡುವ ಜವಾಬ್ದಾರಿಯನ್ನು ಹೊಂದಿದೆ

* ಶಿಲ್ಪಾ ಮೆಡಿಕೇರ್ ರಷ್ಯಾದೊಂದಿಗೆ ನೇರ ಹೂಡಿಕೆ ಮಾಡಿಕೊಂಡಿದೆ ಮತ್ತು ಲಸಿಕೆ ತಯಾರಿಸಲು ಭಾರತೀಯ 5 ಔಷಧಿ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಂಡಿದೆ, ಈಗಾಗಲೇ ರಷ್ಯಾದಿಂದ ಆಮದು ಮಾಡಿಕೊಂಡಿರುವ ಕೋವಿಡ್ 19 ಲಸಿಕೆ ಸ್ಪುಟ್ನಿಕ್ ವಿ ಲಸಿಕೆಯ ಬೆಲೆ ಪ್ರತಿ ಡೋಸ್‌ಗೆ 995ರೂ. (GSTಯೊಂದಿಗೆ) ಗಳಂತೆ ಪ್ರಸ್ತುತ 60,000 ಡೋಸ್ ಲಸಿಕೆಗಳು ಹೈದರಾಬಾದ್‌ಗೆ ಬಂದು ತಲುಪಿವೆ ಎಂದು ತಳಿದು ಬಂದಿದೆ.

## ಅಮೇರಿಕದ ಅಧ್ಯಕ್ಷ ಮತ್ತು ಉಪಾಧ್ಯಕ್ಷೆ ಅವರಿಂದ ಐಟಿ ರಿಟರ್ನ್ಸ್ ವಿವರ ಬಿಡುಗಡೆ



* ಪ್ರಸ್ತುತ ಅಮೆರಿಕ ಅಧ್ಯಕ್ಷ ಜೋ ಬೈಡನ್ ಹಾಗೂ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರು ಸಾರ್ವಜನಿಕರ ಮಾಹಿತಿಗಾಗಿ ತಾವು ಸಲ್ಲಿಸಿರುವ ಆದಾಯ ತೆರಿಗೆ ರಿಟರ್ನ್ಸ್'ನ ವಿವರಗಳ ಮಾಹಿತಿಯನ್ನು ಬಿಡುಗಡೆ ಮಾಡಿದ್ದಾರೆ.

* ಪ್ರಸ್ತುತ 2020ರಲ್ಲಿ ಅಮೇರಿಕದ ಉಪಾಧ್ಯಕ್ಷೆಯಾಗಿರುವ ಕಮಲಾ ಹ್ಯಾರಿಸ್ ಅವರ ಆದಾಯ ₹ 7.30 ಕೋಟಿಗಿಂತ ಹೆಚ್ಚು ಇದೆ, ಮತ್ತು ಅಧ್ಯಕ್ಷ ಜೋ ಬೈಡನ್ ಅವರ ಆದಾಯ ₹ 4.43 ಕೋಟಿ ಇದೆ ಎಂದು ದಾಖಲೆಗಳು ನೀಡಿರುವ ಮಾಹಿತಿ ಪ್ರಕಾರ ತಿಳಿದು ಬಂದಿದೆ, ಪ್ರಸ್ತುತ ಅಧ್ಯಕ್ಷ ಜೋ ಬೈಡನ್ ಅವರ ಆದಾಯಕ್ಕಿಂತ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರು ಆದಾಯ ಹೆಚ್ಚಿದೆ ಎಂದು ಶ್ವೇತಭವನವು ಮಾಹಿತಿ ನೀಡಿದೆ.

# 20-05-2021

## ಪ್ರಧಾನಿ ಮೋದಿ ಗುಜರಾತ್ ರಾಜ್ಯಕ್ಕೆ 1000 ಕೋಟಿ ರೂ, ನೆರವು ಘೋಷಣೆ



* ಇತ್ತೀಚಿಗೆ ತೌಕ್ತೆ ಚಂಡಮಾರುತ ಬಿಸಿರುವದರಿಂದ ಗುಜರಾತ್ ರಾಜ್ಯದಲ್ಲಿ ಅಪಾರ ಪ್ರಮಾಣದ ಹಾನಿ ಉಂಟಾಗಿದೆ, ಮೋದಿ ಅವರು ಗುಜರಾತ್'ನ ಹಾನಿ ಉಂಟಾಗಿದ ಪ್ರದೇಶಗಳಲ್ಲಿ ಭೇಟಿ ನೀಡಿ ವೈಮಾನಿಕ ಸಮೀಕ್ಷೆಯನ್ನು ನಡೆಸಿದರು, ರಾಜ್ಯಕ್ಕೆ ಉಂಟಾದ ಹಾನಿಯನ್ನು ಅರಿತ ಪ್ರಧಾನಿ ಅವರು ಗುಜರಾತ್ ರಾಜ್ಯಕ್ಕೆ 1000 ಕೋಟಿ ರೂ.ನೆರವನ್ನು ಘೋಷಿಸಿದ್ದಾರೆ.

* ಇದೆ ಸಂಧರ್ಭದಲ್ಲಿ ಪ್ರಧಾನಿ ಮೋದಿ ಅವರು ಎಲ್ಲಾ ರಾಜ್ಯಗಳಲ್ಲಿ ತೌಕ್ತೆ ಚಂಡಮಾರುತದಿಂದ ಪ್ರಾಣವನ್ನು ಕಳೆದುಕೊಂಡವರ ಕುಟುಂಬಗಳಿಗೆ 2 ಲಕ್ಷ ರೂ. ಮತ್ತು ಗಾಯಗೊಂಡವರಿಗೆ 50,000 ರೂ. ಪರಿಹಾರ ನೀಡಲಾಗುತ್ತದೆ ಎಂದು ತಿಳಿಸಿದ್ದಾರೆ.

* ತೌಕ್ತೆ ಚಂಡಮಾರುತದಿಂದ ಹಾನಿಯಾಗಿರುವ ಪ್ರದೇಶಗಳಿಗೆ ಮೂಲಭೂತ ಸೌಕರ್ಯಗಳು ಮತ್ತು ಪುನರ್‌ನಿರ್ಮಾಣಕ್ಕೆ ಸಾಧ್ಯವಿರುವ ಎಲ್ಲ ಅಗತ್ಯ ಸಹಕಾರವನ್ನು ಕೇಂದ್ರದಿಂದ ನೀಡಲಾಗುತ್ತದೆ ಎಂದು ಪ್ರಧಾನಿ ಮೋದಿ ತಿಳಿಸಿದರು.

## ಏಷ್ಯಾ ಕಪ್ 2021 ರದ್ದು




* ಪ್ರಸ್ತುತ ವಿಶ್ವವ್ಯಾಪಿಯಾಗಿ ಹರಡಿರುವ ಕೊರೊನಾ ಸೋಂಕಿನ ಕಾರಣದಿಂದಾಗಿ ಇದೆ ಜೂನ್ ತಿಂಗಳಲ್ಲಿ ಶ್ರೀಲಂಕಾದಲ್ಲಿ ನಡೆಯಬೇಕಿದ್ದ ಏಷ್ಯಾ ಕಪ್ ರದ್ದುಗೊಂಡಿದೆ ಎಂದು ಸಂಘಟಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ, ಈ ಹಿಂದಿನ ವರ್ಷ ಪಾಕಿಸ್ತಾನದಲ್ಲಿ ನಡೆಯಬೇಕಿದ್ದ ಏಷ್ಯಾ ಕಪ್ ಪಂದ್ಯಾವಳಿವು ಕೂಡ ಕೋರೋಣ ಸೋಕಿನ ಕಾರಣ ಮುಂದೂಡಲಾಗಿತ್ತು.

* ಪ್ರಸ್ತುತ ಈ ವರ್ಷದ ಏಷ್ಯಾ ಕಪ್'ನ್ನು ಕೋರೋಣ

ಸಾಂಕ್ರಾಮಿಕ ರೋಗದ ಕಾರಣದಿಂದಾಗಿ ಆಯೋಜಿಸಲು ಸಾಧ್ಯವಿಲ್ಲ ಎಂದು ಶ್ರೀಲಂಕಾ ಕ್ರಿಕೆಟ್ ಮಂಡಳಿಯ ಮುಖ್ಯ ಕಾರ್ಯನಿರ್ವಾಹಕ ಆಶ್ಲೇ ಡಿ ಸಿಲ್ವಾ ಅವರು ತಿಳಿಸಿದ್ದಾರೆ, ಜೊತೆಗೆ ಮುಂಬರುವ 2 ವರ್ಷಗಳವರೆಗೆ ಪಂದ್ಯಾವಳಿಗಳನ್ನ ಆಯೋಜಿಸಲಾಗುವದಿಲ್ಲ ಎಂದು ತಿಳಿಸಿದ್ದಾರೆ, ಸದ್ಯದಲ್ಲಿ ಏಷ್ಯಾ ಕ್ರಿಕೆಟ್ ಅಸೋಸಿಯೇಷನ್ ಪ್ರಕಟಣೆಯನ್ನು ತಿಳಿಸಲಿದೆ ಎಂದು ಡಿ'ಸಿಲ್ವಾ ಅವರು ಹೇಳಿದರು.

## ಇಂಫಾಲ್'ನಲ್ಲಿ ಧ್ವನಿವರ್ಧಕ ಬಳಕೆಗೆ ಬೆಳಿಗ್ಗೆ 8 ರಿಂದ ಸಂಜೆ 6 ರವರೆಗೆ ಮಾತ್ರ ಅವಕಾಶ



* ಪ್ರಸ್ತುತ ಮಣಿಪುರದ ರಾಜಧಾನಿ ಇಂಫಾಲ್'ನಲ್ಲಿ ಲಿಖಿತ ರೂಪದ ಅನುಮತಿ ಇಲ್ಲದ ಧ್ವನಿವರ್ಧಕಗಳನ್ನ ಬೆಳಿಗ್ಗೆ 8 ರಿಂದ ಸಂಜೆ 6 ರವರೆಗೆ ಬಳಸಲು ಅನುಮತಿ ನೀಡಲಾಗುವದು ಎಂದು ಇಂಫಾಲ್ ವೆಸ್ಟ್ ಜಿಲ್ಲಾ ಮ್ಯಾಜಿಸ್ಟ್ರೇಟ್ ಮಾಹಿತಿಯನ್ನು ನೀಡಿದೆ.

* ಮಣಿಪುರದ ರಾಜಧಾನಿ ಇಂಫಾಲ್'ನ ಜಿಲ್ಲಾ ಮ್ಯಾಜಿಸ್ಟ್ರೇಟ್ ಇದೇ ಮೇ. 18ರಂದು ಆದೇಶವನ್ನು ಹೊರಡಿಸಿದೆ, ಈ ಹಿಂದೆ ಇಂಫಾಲ್ ಪಶ್ಚಿಮ ಜಿಲ್ಲೆಗಳಲ್ಲಿ ಧ್ವನಿವರ್ಧಕಗಳನ್ನು ಅನಗತ್ಯವಾಗಿ ಬಳಕೆ ಮಾಡುತಿರುವದರಿಂದ ಜನರ ಸಮಸ್ಯೆ ಉಂಟುಆಗುತ್ತಿದೆ ಎಂದು ಪರಿಗಣಿಸಿ ಆದೇಶವನ್ನು ನೀಡಿದೆ.

## ಶಂಕರ್ ಬಾಲಸುಬ್ರಮಣಿಯನ್ ಮತ್ತು ಡೇವಿಡ್ ಕ್ಲೆನರ್ಮನ್ ವಿಜ್ಞಾನಿಗಳಿಗೆ ಮಿಲೇನಿಯಮ್ ಟೆಕ್ನಾಲಜಿ ಬಹುಮಾನ




* 2020 ಮಿಲೇನಿಯಮ್ ಟೆಕ್ನಾಲಜಿ ಬಹುಮಾನ ವಿಜೇತರನ್ನಾಗಿ ಕೇಂಬ್ರಿಡ್ಜ್ ಯೂನಿವರ್ಸಿಟಿಯ ರಸಾಯನಶಾಸ್ತ್ರಜ್ಞ ಶಂಕರ್ ಬಾಲಸುಬ್ರಮಣಿಯನ್ ಮತ್ತು ಡೇವಿಡ್ ಕ್ಲೆನರ್ಮನ್ ಅವರನ್ನು ಘೋಷಿಸಲಾಗಿದೆ, ಇದು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಪ್ರತಿಷ್ಠಿತ ಜಾಗತಿಕ ಬಹುಮಾನ ಇದಾಗಿದೆ, ಈ ವಿಜ್ಞಾನಿಗಳು ಜಂಟಿಯಾಗಿ ಅಭಿವೃದ್ಧಿಪಡಿಸಿರುವ ಕ್ರಾಂತಿಕಾರಿ ಡಿಎನ್ಎ ಸೀಕ್ವೆನ್ಸಿಂಗ್ ಟೆಕ್ನೀಕ್'ಎನ್‌ಜಿಎಸ್'ಗೆ ಈ 2020 ಮಿಲೇನಿಯಮ್ ಟೆಕ್ನಾಲಜಿ ಬಹುಮಾನವನ್ನು ನೀಡಲಾಗಿದೆ.

* ಈ ಕ್ರಾಂತಿಕಾರಿ ಡಿಎನ್ಎ ಸೀಕ್ವೆನ್ಸಿಂಗ್ ಟೆಕ್ನೀಕ್ ಕರೊನಾ ವೈರಸ್ ತರಹದ ಮಾರಕ ರೋಗಗಳನ್ನು ಹರಡುವ ಜೀವಿಗಳ ಪತ್ತೆ ಹಚ್ಚುವಲ್ಲಿ ಹಾಗೂ ತಡೆಯಲ್ಲಿ ಈ ತಂತ್ರಜ್ಞಾನವು ಬಹಳ ಅನುಕೂಲಕರವಾಗಿದೆ ಎಂದು ತಿಳಿದು ಬಂದಿದೆ.

* ಈ ತಂತ್ರಜ್ಞಾನವು ಕಡಿಮೆ ವೆಚ್ಚದ ಮತ್ತು ದೊಡ್ಡ ಪ್ರಮಾಣದ ಜೀನೋಮ್ ಸೀಕ್ವೆನ್ಸಿಂಗ್ ಮಾಡಲು ಸಹಾಯಕಾರಿಯಾಗಿದೆ, ಹಾಗೂ ಇದುನ್ನು ಪ್ರಸ್ತುತ ಕರೊನಾ ವೈರಸ್‌ನ ರೂಪಾಂತರಗಳನ್ನು ಪತ್ತೆ ಹಚ್ಚಲು ಬಳಸುತ್ತಿದ್ದಾರೆ.

* ಇತ್ತೀಚಿಗೆ ನಡೆದ ವರ್ಚುವಲ್ ಕಾರ್ಯಕ್ರಮದಲ್ಲಿ ಫಿನ್‌ಲ್ಯಾಂಡ್ ರಿಪಬ್ಲಿಕ್‌ನ ಅಧ್ಯಕ್ಷ ಸೌಲಿ ನೀನಿಸ್ಟೊ ಅವರು ಈ ಬಹುಮಾನವನ್ನು ನೀಡಿದರು, ಪ್ರಸ್ತುತ ಈ ಮಿಲೇನಿಯಮ್ ಟೆಕ್ನಾಲಜಿ ಬಹುಮಾನವನ್ನು ಟೆಕ್ನಾಲಜಿ ಅಕಾಡೆಮಿ ಫಿನ್‌ಲ್ಯಾಂಡ್ 2004 ರಿಂದ ನೀಡುತ್ತಿದೆ ಮತ್ತು ಇದನ್ನು ಸಮಾಜ ಸೇವೆಗೆ ನೀಡಿರುವ ಉತ್ತಮವಾದ ಕೊಡುಗೆ ನೀಡುವ ಕ್ರಾಂತಿಕಾರಿ ಅನ್ವೇಷಣೆಗಳಿಗಾಗಿ ಪ್ರತಿ 2 ವರ್ಷಕ್ಕೊಮ್ಮೆ ನೀಡಲಾಗುತ್ತದೆ, ಈ ಬಹುಮಾನವು ಸುಮಾರು 1 ಮಿಲಿಯನ್ ಯೂರೋಗಳ ಮೌಲ್ಯ ಹೊಂದಿದೆ.

## ರಾಜಸ್ಥಾನದ ಮಾಜಿ ಸಿಎಂ ಜಗನ್ನಾಥ ಪಹಾಡಿಯಾ ನಿಧನ



* ಇಡೀ ದೇಶದಲ್ಲಿ ಕೊರೊನಾ ಸಾಂಕ್ರಾಮಿಕ ರೋಗವು ಎಲ್ಲೆಡೇ ವ್ಯಾಪಕವಾಗಿ ಹರಡುತ್ತಿದೆ, ಇದೇ ಕೋರೋಣ ಸೋಂಕಿನ ಕಾರಣದಿಂದಾಗಿ ರಾಜಸ್ಥಾನದ ಮಾಜಿ ಮುಖ್ಯಮಂತ್ರಿ ಜಗನ್ನಾಥ ಪಹಾಡಿಯಾ ಅವರು ತಮ್ಮ 88ನೇ ವಯಸ್ಸಿನಲ್ಲಿ ವಿಧಿವಶರಾದರು.

* ಜಗನ್ನಾಥ್ ಪಹಡಿಯಾ ಅವರು 1932ರ ಜನವರಿ.15ರಂದು ಜನಿಸಿದರು, ಇವರು ಭಾರತೀಯ ರಾಜಕಾರಣಿ ಮತ್ತು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ನಾಯಕರಾಗಿದ್ದರು, ಇವರು ಹರಿಯಾಣ ಮತ್ತು ಬಿಹಾರ ರಾಜ್ಯಗಳ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ್ದಾರೆ.

* ಜಗನ್ನಾಥ್ ಪಹಡಿಯಾ ಅವರು ತಮ್ಮ ಸ್ವಂತ ರಾಜ್ಯ ರಾಜಸ್ಥಾನದ ಮುಖ್ಯಮಂತ್ರಿಯಾಗಿ 1980 ರಿಂದ 1981ವರೆಗೆ ರಾಜ್ಯಕ್ಕೆ ಸೇವೆ ಸಲ್ಲಿಸಿದ್ದಾರೆ, ಈಗಿನ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಸಂತಾಪ ಸೂಚಿಸಿದ್ದಾರೆ.

## ಕೊರೊನಾ ಸೋಂಕಿನಿಂದ NSG ಮುಖ್ಯಸ್ಥರಾಗಿದ್ದ ಜೆಕೆ ದತ್ ನಿಧನ



* ಈ ಹಿಂದೆ 2008ರ ಮುಂಬೈನಲ್ಲಿ ನಡೆದ ಉಗ್ರರು ದಾಳಿ ಸಂದರ್ಭದಲ್ಲಿ NSG ಕಮಾಂಡೋ ಪಡೆಯ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸಿದ ರಾಷ್ಟ್ರೀಯ ಭದ್ರತಾ ಪಡೆ ಸಿಬ್ಬಂದಿ ಮಾಜಿ

ಮಹಾನಿರ್ದೇಶಕ ಜೆಕೆ ದತ್ ಅವರು ತಮ್ಮ 72ನೇ ವಯಸ್ಸಿನಲ್ಲಿ ಕೊರೊನಾ ಸಾಂಕ್ರಾಮಿಕ ರೋಗದಿಂದಾಗಿ ವಿಧಿವಶರಾಗಿದ್ದಾರೆ.

* NSG ಮುಖ್ಯಸ್ಥರಾಗಿದ್ದ ಜೆಕೆ ದತ್ ಅವರು ಪಾಕಿಸ್ತಾನ ಮೂಲದ ಲಷ್ಕರ್ ತಯ್ಬಾ ಸಂಘಟನೆಯ 10 ಉಗ್ರರು ಮುಂಬೈನ ಹಲವು ಪ್ರದೇಶಗಳ ಕಡೆ ಸರಣಿ ದಾಳಿ ನಡೆಸುವ ಮೂಲಕ ಒಟ್ಟು 166 ಜನರ ಸಂಹಾರವನ್ನು ಮಾಡಿದ್ದರು.

* ಉಗ್ರರು 2008ರಲ್ಲಿ ಮುಂಬೈನ ತಾಜ್ ಹೋಟೆಲ್ ಮತ್ತು ಶಿವಾಜಿ ಟರ್ಮಿನಲ್ ಹೀಗೆ ಹಲವು ಸ್ಥಳಗಳ ಮೇಲೆ ದಾಳಿ ನಡೆಸಿದ್ದರು, ಈ ದಾಳಿಯಲ್ಲಿ ಒಟ್ಟಾರೆ 174 ಜನ ಮರಣ ಹೊಂದಿದರು, ಹಾಗೂ ಈ ಉಗ್ರರ ವಿರುದ್ಧ ಹೋರಾಟದಲ್ಲಿ 17 ಜನ ಭಾರತೀಯ ಭದ್ರತಾ ಸಿಬ್ಬಂದಿಗಳು ಮರಣ ಹೊಂದಿದರು.

# 21-05-2021

## ಭಾರತೀಯ ವಾಯುಪಡೆಯ ಮಿಗ್ 21 ಯುದ್ಧ ವಿಮಾನ ಅಪಘಾತ



* ಭಾರತೀಯ ವಾಯುಪಡೆಯ ಮಿಗ್ 21 ಯುದ್ಧ ವಿಮಾನವು ಪಂಜಾಬ್'ನ ಮೊಗಾ ಎಂಬ ಪ್ರದೇಶದಲ್ಲಿ ಅಪಘಾತಕ್ಕೀಡಾಗಿದೆ, ಈ ಯುದ್ಧ ವಿಮಾನವು ಪ್ರತಿದಿನದ ತರಬೇತಿಯನ್ನು ನಡೆಸುತ್ತಿರುವ ಸಂದರ್ಭದಲ್ಲಿ ಈ ಘಟನೆ ನಡೆದಿದೆ ಎಂದು ಭಾರತೀಯ ವಾಯುಪಡೆಯ ಅಧಿಕಾರಿಗಳು ಮಾಹಿತಿಯನ್ನು ನೀಡಿದ್ದಾರೆ.

* ಭಾರತೀಯ ವಾಯುಪಡೆಯ ಈ ಬಿಸನ್ ಯುದ್ಧ ವಿಮಾನವನ್ನು ಮುನ್ನಡೆಸುತ್ತಿರುವ ಸಂದರ್ಭದಲ್ಲಿ ಪೈಲಟ್ ಸ್ಕ್ವಾಡ್ರನ್ ಲೀಡರ್ ಅಭಿನವ್ ಚೌಧರಿ ಅವರು ಸಾವನ್ನಪಿದ್ದಾರೆ ಎಂದು ಹಿರಿಯ ಅಧಿಕಾರಿಗಳು ಮಾಹಿತಿಯನ್ನು ನೀಡಿದ್ದಾರೆ ಮತ್ತು ಭಾರತೀಯ ವಾಯುಪಡೆ ಈ ಅಪಘಾತದ ಕಾರಣ ತಿಳಿಯಲು ನ್ಯಾಯಾಂಗ ತನಿಖೆಗೆ ಆದೇಶವನ್ನು ನೀಡಿದೆ ಎನ್ನಲಾಗಿದೆ.

## ಭಾರತೀಯ ನೌಕಾಪಡೆಯ ಐಎನ್ಎಸ್ ರಜಪೂತ್ ಇತಿಹಾಸದ ಪುಟಕ್ಕೆ



* ಪ್ರಸ್ತುತ ಭಾರತೀಯ ನೌಕಾಪಡೆಯಲ್ಲಿ ಸರಿ ಸುಮಾರು 41 ವರ್ಷಗಳ ಕಾಲ ಸುದೀರ್ಘ ಸೇವೆಯನ್ನು ಸಲ್ಲಿಸಿದ ಐಎನ್ಎಸ್ ರಜಪೂತ್ ಇದೀಗ ಇತಿಹಾಸದ ಪುಟಕ್ಕೆ ಸೇರುತ್ತಿದೆ, ಇದು ಅಧಿಕೃತವಾಗ ತನ್ನ ಸೇವೆಯನ್ನು ವೈಜಾಗ್‌ನಲ್ಲಿ ಕೊನೆಗೊಳಿಸಿತ್ತು, ಈ ನೌಕಾಪಡೆಯ ಐಎನ್ಎಸ್ ರಜಪೂತ್'ನ ಬೀಳ್ಕೊಡುಗೆ ಸಮಾರಂಭವು ಕರೊನಾ ಕಾರಣದಿಂದಾಗಿ ಸರಳವಾಗಿ ನೆರವೇರಿದ್ದು, ಈ ಸರಳ ಸಮಾರಂಭದಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿದ್ದರು.

* ಈ ಐಎನ್ಎಸ್ ರಜಪೂತ್ 1980ರ ಮೇ. 4ರಂದು ತನ್ನ ಕಾರ್ಯವನ್ನು ಆರಂಭಿಸಿತ್ತು, ಈ ರಜಪೂತ್ ಹಡಗನ್ನು ನಿಕೋಲೇವ್ ಶಿಪ್‌ಯಾರ್ಡ್ನಲ್ಲಿ ನಿರ್ಮಾಣಮಾಡಲಾಗಿತ್ತು ಇದರ ಮೂಲ ಹೆಸರು ನದೇಝುನಿ, ಇದು ಕ್ಷಿಪಣಿ ಧ್ವಂಸಕ್ಕೆ ಪ್ರಮುಖವಾದ ಹಡಗೆಂದು ಸುಮಾರು 4 ದಶಕಗಳಿಂದ ಪ್ರಖ್ಯಾತಿಯನ್ನು ಪಡೆದಿತ್ತು.

* ಗುಲಾಬ್ ಮೋಹನ್‌ಲಾಲ್ ಹಿರಂದಾನಿ ಅವರು ಈ ರಜಪೂತ್'ನ ಮೊದಲ ಕಮಾಂಡಿಂಗ್ ಆಫೀಸರ ಆಗಿದ್ದರು.

* ಈ ರಜಪೂತ್ ಹಡಗಿನಿಂದ 2005ರಲ್ಲಿ ಧನುಷ್ ಕ್ಷಿಪಣಿಯನ್ನು ಉಡಾವಣೆ ಮಾಡಲಾಯಿತು, ಮತ್ತೇ 2007ರ ಮಾರ್ಚ್ ತಿಂಗಳಿನಲ್ಲಿ ರಜಪೂತ್ ಹಡಗಿಮೂಲಕ ಪೃಥ್ವಿ 3 ಕ್ಷಿಪಣಿಯನ್ನು ಉಡಾವಣೆ ಮಾಡಲಾಗಿದೆ ಎಂದು ತಿಳಿದು ಬಂದಿದೆ. ಭಾರತೀಯ ನೌಕಾಪಡೆಯ ಐಎನ್ಎಸ್ ರಜಪೂತ್'ನ ಪ್ರಮುಖ ಆಪರೇಷನ್'ಗಳು ಇಂತಿವೆ:

* ಈ ಐಎನ್ಎಸ್ ರಜಪೂತ್ ಶ್ರೀಲಂಕಾದ ಆಪರೇಷನ್ ಅಮನ್, ಆಪರೇಷನ್ ಪವಾನ್, ಮಾಲ್ಡೀವ್ಸ್‌ನಲ್ಲಿ ಒತ್ತೆಯಾಳುಗಳನ್ನು ಬಿಡುಗಡೆಗೊಳಿಸಲು ನಡೆಸಲಾದ ಆಪರೇಷನ್ ಕಾಕ್ಟಸ್, ಲಕ್ಷದ್ವೀಪದಲ್ಲಿ ನಡೆಸಿದ ಆಪರೇಷನ್ ಕ್ರೌನ್ ನೆಸ್ಟ್‌ನಲ್ಲಿ ರಜಪೂತ್ ಹಡಗು ತನ್ನ ಅಪಾರವಾದ ಸೇವೆ ಸಲ್ಲಿಸಿದೆ ಇದರ ಕಾರ್ಯವನ್ನು ಭಾರತವು ಎಂದು ಮರೆಯುವದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಝೂಂಗ್ ಯಿಮಿಂಗ್ ಅವರು ಬೈಟ್‌ಡಾನ್ಸ್ ಸಿಇಒ ಹುದ್ದೆಯಿಂದ ನಿರ್ಗಮನ




* ಚೀನಾ ದೇಶದ ಬೈಟ್‌ಡಾನ್ಸ್ ಕಂಪನಿಯ ಸಹಸಂಸ್ಥಾಪಕ ಝೂಂಗ್ ಯಿಮಿಂಗ್ ಅವರು CEO ಸ್ಥಾನದಿಂದ ಕೆಳಗಿಳಿಯವ ತೀರ್ಮಾನವನ್ನು ಪ್ರಕಟಿಸಿದ್ದಾರೆ, ಇದು ಚೀನಾದ ತಂತ್ರಜ್ಞಾನ ಕ್ಷೇತ್ರದ ಕಂಪನಿಯಾಗಿದೆ.

* ಝೂಂಗ್ ಯಿಮಿಂಗ್ ಅವರು ಪ್ರಸ್ತುತ ಚೀನಾ ದೇಶದ ಅತ್ಯಂತ ಶ್ರೀಮಂತ ಉದ್ಯಮಿಯಾಗಿದ್ದಾರೆ, ಈ ಬೈಟ್‌ಡಾನ್ಸ್ ಕಂಪನಿಗೆ ವಿಶ್ವದ ಅತಿದೊಡ್ಡ ಯೂನಿಕಾರ್ನ್ ಎಂಬ ಹೆಗ್ಗಳಿಕೆ ಪಾತ್ರವಾಗಿದೆ, ಈ ಕಂಪನಿಯು ಕಿರು (ಸಣ್ಣ) ವಿಡಿಯೊಗಳನ್ನು ಹಂಚಿಕೊಳ್ಳುವ ಜನಪ್ರಿಯತೆ ಪಡೆದಿದ್ದ ಟಿಕ್‌ಟಾಕ್ ಆಪ್'ನ್ನು ಅಭಿವೃದ್ಧಿ ಪಡಿಸಿದೆ, ಈ ಟಿಕ್‌ಟಾಕ್ ಆಪ್'ನ್ನು ಭಾರತದಲ್ಲಿನ ಬಳಕೆಗೆ ನಿಷೇಧ ಹೇರಲಾಗಿದೆ.

* ಈ ಹಿಂದಿನ ವರ್ಷವೇ ಚೀನಾದ ಅಲಿಬಾಬಾ ಕಂಪನಿಯ ಸಂಸ್ಥಾಪಕ ಜಾಕ್ ಮಾ ಅವರು ಕಂಪನಿಯ ಉನ್ನತ ಹುದ್ದೆಯನ್ನು ತೊರೆದಿದ್ದರು.

* ಲಿಯಾಂಗ್ ರುಬೊ ಅವರು ಬೈಟ್‌ಡಾನ್ಸ್ ಕಂಪನಿಯ ಸಿಇಒ

ಸ್ಥಾನಕ್ಕೆ ಏರಲಿದ್ದಾರೆ.

## ತಮಿಳುನಾಡು ರಾಜ್ಯದಿಂದ ಕಪ್ಪು ಶಿಲೀಂಧ್ರ ಸಾಂಕ್ರಾಮಿಕ ರೋಗ ಎಂದು ಘೋಷಣೆ



* ತಮಿಳುನಾಡು ರಾಜ್ಯವು ಕಪ್ಪು ಶಿಲೀಂಧ್ರ ಸೋಂಕು ಎಂದೂ ಕರೆಯುತ್ತಿರುವ ಮ್ಯೂಕಾರ್ಮೈಕೋಸಿಸ್'ನ್ನು ಅಧಿಸೂಚಿತ ಸಾಂಕ್ರಾಮಿಕ ರೋಗ ಎಂದು ಘೋಷಣೆ ಮಾಡಿದೆ.

* ಕೇಂದ್ರ ಆರೋಗ್ಯ ಸಚಿವಾಲಯವು ಸಾಂಕ್ರಾಮಿಕ ಅಡಿಯಲ್ಲಿ ಕಪ್ಪು ಶಿಲೀಂಧ್ರ ಸೋಂಕನ್ನು ಅಧಿಸೂಚಿತ ಸಾಂಕ್ರಾಮಿಕ ರೋಗ ಎಂದು ಘೋಷಣೆ ಮಾಡುವಂತೆ ಎಲ್ಲಾ ರಾಜ್ಯಗಳಿಗೆ ಸೂಚಿಸಿ ಪ್ರಕಟಣೆ ನೀಡಿದೆ.

* ಆರೋಗ್ಯ ಇಲಾಖೆಯಿಂದ ವೈದ್ಯಕೀಯ ಶಿಕ್ಷಣ ನಿರ್ದೇಶಕ ಡಾ. ಆರ್.ನಾರಾಯಣ ಬಾಬು ಅವರ ನೇತೃತ್ವದಲ್ಲಿ ಕಪ್ಪು ಶಿಲೀಂಧ್ರ ಪ್ರಕರಣಗಳ ತನಿಖೆಗಾಗಿ ಸಮಿತಿಯನ್ನು ರಚಿಸಿದ್ದಾರೆ ಎಂದು ಆರೋಗ್ಯ ಕಾರ್ಯದರ್ಶಿ ಮಾಹಿತಿಯನ್ನು ನೀಡಿದ್ದಾರೆ.

## ಕೇರಳ ರಾಜ್ಯದ ಮುಖ್ಯಮಂತ್ರಿಯಾಗಿ ಪಿಣರಾಯಿ ವಿಜಯನ್ ಪ್ರಮಾಣವಚನ ಸ್ವೀಕಾರ



* ಇತ್ತೀಚಿಗೆ ಕೇರಳ ರಾಜ್ಯದ ವಿಧಾನಸಭೆಗೆ 140 ಸದಸ್ಯರನ್ನು ಆಯ್ಕೆ ಮಾಡಲು 2021ರ ಕೇರಳ ವಿಧಾನಸಭಾ ಚುನಾವಣೆಯನ್ನು ಏಪ್ರಿಲ್ 6, 2021 ರಂದು ಕೇರಳದಲ್ಲಿ ನಡೆಸಲಾಯಿತು.

* ಕೇರಳ ರಾಜ್ಯದ 2021ನೇ ವಿಧಾನಸಭೆಯ ಚುನಾವಣೆಯಲ್ಲಿ LDF ಪಕ್ಷವು 99 ಸ್ಥಾನಗಳಲ್ಲಿ ಗೆದ್ದು ಅಧಿಕಾರವನ್ನು ಪಡೆದಿದೆ.

* ಪಿಣರಾಯಿ ವಿಜಯನ್ ಅವರು ಕೇರಳ ರಾಜ್ಯದ ತಿರುವನಂತಪುರಂನ ಸೆಂಟ್ರಲ್ ಸ್ಟೇಡಿಯಂ ಪ್ರದೇಶದಲ್ಲಿ ಕೋವಿಡ್ 19 ಮಾರ್ಗಸೂಚಿಗಳ ಪ್ರಕಾರ ಪ್ರಮಾಣವಚನ ಸ್ವೀಕಾರ ಸಮಾರಂಭವನ್ನು ನಡೆಸಿದರು.

* ಪ್ರಸ್ತುತ ಕೇರಳ ರಾಜ್ಯದ LDF ಪಕ್ಷದ ಮುಖ್ಯಸ್ಥರಾಗಿರುವ ಪಿಣರಾಯಿ ವಿಜಯನ್ ಅವರು 2ನೇ ಬಾರಿಗೆ ಕೇರಳ ರಾಜ್ಯದ ಮುಖ್ಯ ಮಂತ್ರಿಯಾಗಿ ಅಧಿಕಾರವನ್ನು ಸ್ವೀಕಾರ ಮಾಡಿದರು.

* ಕೇರಳ ರಾಜ್ಯದ ರಾಜ್ಯಪಾಲರಾಗಿರುವ ಆರಿಫ್ ಮೊಹಮ್ಮದ್ ಖಾನ್'ಅವರು LDF ಪಕ್ಷದ ಪಿಣರಾಯಿ ವಿಜಯನ್' ಅವರಿಗೆ ಪ್ರಮಾಣ ವಚನವನ್ನು ಭೋಧಿಸಿದರು.

## ಭಾರತಕ್ಕೆ ಕೋವಿಡ್ ಪರಿಹಾರವಾಗಿ ಈವರೆಗೆ ₹3,656 ಕೋಟಿ ಸಾಮಗ್ರಿ ಪೂರೈಕೆ ಮಾಡಿದ ಅಮೆರಿಕ



* ಅಮೇರಿಕಾ ದೇಶವು ಭಾರತದೇಶಕ್ಕೆ ಕೋವಿಡ್ 19 ಸಾಂಕ್ರಾಮಿಕ ರೋಗದ ವಿರುದ್ಧ ಹೋರಾಡಲು ಇಲ್ಲಿಯವರೆಗೆ ₹ 3,656 ಕೋಟಿಗಿಂತಲೂ (500 ದಶಲಕ್ಷ ಡಾಲರ್) ಹೆಚ್ಚಿನ ಸಾಮಗ್ರಿಗಳನ್ನು ನೀಡಲಾಗಿದೆ ಎಂದು ಶ್ವೇತಭವನವು ತಿಳಿಸಿದೆ.

* ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಜೆನ್ ಸಾಕಿ ಅವರು ವರ್ಚುವಲ್ ಸುದ್ದಿವಾಹಿನಿಯ ಮೂಲಕ ನೀಡಿರುವ ಮಾಹಿತಿ ಪ್ರಕಾರ ಅಮೆರಿಕದ ಒಕ್ಕೂಟ ಸರ್ಕಾರಗಳು ಹಾಗೂ ವಿವಿಧ ರಾಜ್ಯ ಸರ್ಕಾರಗಳು ಕೂಡ ಪರಿಹಾರ ನೀಡಿವೆ, ಜೊತೆಗೆ ಕಂಪನಿಗಳು ಮತ್ತು ಸಂಘಟನೆಗಳು ಕೂಡ ಭಾರತಕ್ಕೆ ನೆರವಿನ ಹಸ್ತ ನೀಡಿವೆ.

* ಪ್ರಸ್ತುತ ಕೋವಿಡ್ 19 ಸಾಂಕ್ರಾಮಿಕ ರೋಗದಿಂದ ಅನೇಕ ದೇಶಗಳು ಕಷ್ಟ ಪಡುತ್ತಿವೆ, ಸದ್ಯ ಅಮೇರಿಕ ರಾಷ್ಟ್ರವು ಭಾರತ ಅಷ್ಟೇ ಅಲ್ಲದೆ ವಿಶ್ವದ ಅನೇಕ ರಾಷ್ಟ್ರಗಳು ಸಹಾಯಸ್ತ ನೀಡಿದೆ ಎಂದು ಅಧ್ಯಕ್ಷ ಜೋ ಬೈಡನ್ ಅವರು ತಿಳಿಸಿದ್ದಾರೆ.

## ಖಾಸಗಿ ಕಂಪನಿಗಳಿಗೆ ಖಾದಿ ಹೆಸರು ಬಳಸಲು ಅನುಮತಿ ಇಲ್ಲ



* ಖಾಸಗಿ ಕಂಪನಿಗಳಿಗೆ ಖಾದಿ ಹೆಸರು ಬಳಸಲು ಅನುಮತಿ ಇಲ್ಲ ಪ್ರಸ್ತುತ ಖಾದಿ ಮತ್ತು ಗುಡಿ ಕೈಗಾರಿಕೆಗಳ ಆಯೋಗವು ಖಾದಿ ಮೇಲಿನ ಮಾಲಿಕತ್ವ ಹೊಂದಿದೆ ಎಂದು ನ್ಯಾಯಮಂಡಳಿಯು ಅಧಿಕೃತ ತೀರ್ಪು ನೀಡಿದೆ.

* ಪ್ರಸ್ತುತ ದೆಹಲಿ ಮೂಲದ ಜಿತೇಂದ್ರ ಜೈನ್ ಮತ್ತು ಅವರ ಅಸೋಸಿಯೆಟ್ಸ್‌ನವರು ಖಾದಿಡಾಟ್ಇನ್ ವೆಬ್‌ಸೈಟ್'ನ್ನು ಆರಂಭಿಸಿದ್ದರು, ಈ ಸಂಧರ್ಭದಲ್ಲಿ ಖಾದಿ ಪದವನ್ನು ಖಾಸಗಿ ಸಂಸ್ಥೆಗಳು ಬಳಕೆ ಮಾಡಿಕೊಳ್ಳಲು ಅನುಮತಿ ನೀಡಬಾರದು ಎಂದು ಖಾದಿ ಆಯೋಗವು ಈ ವೆಬ್ಸೈಟ್'ನ್ನು ಪ್ರಶ್ನೆ ಮಾಡಿ ನ್ಯಾಯಮಂಡಳಿ ಮೊರೆ ಹೋಗಲಾಗಿತ್ತು, ಅರ್ಜಿ ವಿಚಾರಣೆ ಮಾಡಿದ ಐಎನ್‌ಡಿಆರ್‌ಪಿ ನ್ಯಾಯಮಂಡಳಿಯು ಮಹತ್ವದ ತೀರ್ಪು ನೀಡಿದೆ.

* ಅದುವೇ ಯಾವುದೇ ಖಾಸಗಿ ಸಂಸ್ಥೆಗಳು ಖಾದಿ ಹೆಸರಿನ ಮೇಲೆ ಮಾಲಿಕತ್ವ(ಅಧಿಕಾರ) ಚಲಿಸಲು ಅವಕಾಶ ಇರುವದಿಲ್ಲ, ಅದು ಸಂಪೂರ್ಣ ಖಾದಿ ಇಂಡಿಯಾದ ಮೇಲೆ ಖಾದಿ ಆಯೋಗ ಸಂಪೂರ್ಣ ಮಾಲಿಕತ್ವ(ಅಧಿಕಾರ) ಹೊಂದಿದೆ ಎಂದು ನ್ಯಾಯಮಂಡಳಿಯು ಮಹತ್ವದ ತೀರ್ಪು ನೀಡಿದೆ.

# 22-05-2021

## ಬಾಕ್ಸಿಂಗ್ ಕೋಚ್ ಭಾರದ್ವಾಜ್ ನಿಧನ



* ಮೊದಲ ಬಾರಿ ಬಾಕ್ಸಿಂಗ್ ಕ್ರೀಡೆಯಲ್ಲಿ ದ್ರೋಣಾಚಾರ್ಯ ಪ್ರಶಸ್ತಿಯನ್ನು ಪಡೆದ ಕೋಚ್ ಓ.ಪಿ. ಭಾರದ್ವಾಜ್ ಅವರು ತಮ್ಮ 82ನೇ ವಯಸ್ಸಿನಲ್ಲಿ ಅನಾರೋಗ್ಯದಿಂದ ವಿಧಿವಶರಾಗಿದ್ದಾರೆ.

* ಭಾರದ್ವಾಜ್ ಅವರಿಗೆ 1985ರಲ್ಲಿ ಮೊದಲ ಬಾರಿ ದ್ರೋಣಾಚಾರ್ಯ ಪ್ರಶಸ್ತಿಯನ್ನು ನೀಡಿತ್ತು, ಇದೆ ಸಂದರ್ಭದಲ್ಲಿ ಬಾಲಚಂದ್ರ ಭಾಸ್ಕರ್ ಭಾಗವತ್ ಅವರಿಗೆ ಕುಸ್ತಿಯಲ್ಲಿ, ಮತ್ತು ಓ.ಎಂ.ನಂಬಿಯಾರ್ ಅವರಿಗೆ ಅಥ್ಲೆಟಿಕ್ಸ್ ವಿಭಾಗದಲ್ಲಿ ಈ ಪುರಸ್ಕಾರ ಲಭಿಸಿದೆ.

* ಭಾರದ್ವಾಜ್ ಅವರು 1968 ರಿಂದ 1989ರ ವರೆಗೆ ರಾಷ್ಟ್ರೀಯ ತಂಡಕ್ಕೆ ಕೋಚ್ ಆಗಿದ್ದರು, ಪ್ರಸ್ತುತ ಇವರ ಮಾರ್ಗದರ್ಶನದಲ್ಲಿ ಬಾಕ್ಸರ್‌ಗಳು ಏಷ್ಯನ್, ಕಾಮನ್‌ವೆಲ್ತ್ ಮತ್ತು ದಕ್ಷಿಣ ಏಷ್ಯಾ ಕ್ರೀಡಾಕೂಟಗಳಲ್ಲಿ ಪದಕಗಳನ್ನು ಗೆದ್ದು ಕೀರ್ತಿ ಪಾತ್ರರಾಗಿದ್ದಾರೆ.

* ಪ್ರಸ್ತುತ ಭಾರದ್ವಾಜ್ ಅವರು ಪಟಿಯಾಲದ ನ್ಯಾಷನಲ್ ಸ್ಪೋರ್ಟ್ಸ್ ಇನ್‌ಸ್ಟಿಟ್ಯೂಷನ್'ನಲ್ಲಿ ಬಾಕ್ಸಿಂಗ್ ಡಿಪ್ಲೊಮಾ ಕೋಚಿಂಗ್ ಕೋರ್ಸ್ ನಡೆಸಿದ್ದರು, ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರಿಗೆ 2008ರಲ್ಲಿ 2 ತಿಂಗಳ ಅವಧಿಗೆ ಬಾಕ್ಸಿಂಗ್'ನ ಕೆಲ ತಂತ್ರಗಳನ್ನು ಕಳಿಸಿದ್ದರು.

## ರಾಜಸ್ಥಾನದಲ್ಲಿ 50 ಹಾಸಿಗೆಗಳ ಕೋವಿಡ್ 19 ಆಸ್ಪತ್ರೆ ಲೋಕಾರ್ಪಣೆ ಮಾಡಿದ ಸೇನೆ



* ಭಾರತೀಯ ಸೇನೆಯು 50 ಹಾಸಿಗೆಗಳ ಕೋವಿಡ್ 19 ಆಸ್ಪತ್ರೆಯನ್ನು ರಾಜಸ್ಥಾನದ ಶ್ರೀ ಗಂಗಾನಗರ ಜಿಲ್ಲೆಯಲ್ಲಿ ಲೋಕಾರ್ಪಣೆ ಮಾಡಿದೆ, ಪ್ರಸ್ತುತ ಸೇನೆಯ ಸುದರ್ಶನ ಚಕ್ರ ವಿಭಾಗವು ಈ ಆಸ್ಪತ್ರೆಯನ್ನು ತಯಾರಿಸಿದೆ.

* ಈ ಆಸ್ಪತ್ರೆಯನ್ನು ನಿರ್ಮಿಸಲು ಭಾರತೀಯ ಸೇನಾ ವೈದ್ಯರು, ಅರೆವೈದ್ಯಕೀಯ ಸಿಬ್ಬಂದಿಯು ಜಿಲ್ಲಾಡಳಿತ ಮತ್ತು ಅಲ್ಲಿನ ಜನಗಳು ಆಸ್ಪತ್ರೆಯ ಸೌಲಭ್ಯವನ್ನು ಸ್ಥಾಪಿಸಿದ್ದರು ಎಂದು ತಿಳಿದು ಬಂದಿದೆ.

* ರಾಜಸ್ಥಾನದ ಗಂಗಾನಗರ ಜಿಲ್ಲೆಯ ಜಿಲ್ಲಾಧಿಕಾರಿ ಜಾಕಿರ್ ಹುಸೇನ್ ಅವರು ಈ ಕೋವಿಡ್ 19 ಆಸ್ಪತ್ರೆಯನ್ನು



ಉದ್ಘಾಟಿಸಿದರು, ಇದೆ ಸಂಧರ್ಭದಲ್ಲಿ ರಾಜ್ಯಕ್ಕೆ ಕೋರೋಣ ಸೋಂಕಿನ ವಿರುದ್ಧ ಹೋರಾಡಲು ನೆರವು ನೀಡಲಾಗುತ್ತದೆ ಭಾರತೀಯ ಸೇನೆಯು ಭರವಸೆಯನ್ನು ನೀಡಿದೆ.

## ಚಿಪ್ಕೊ ಚಳವಳಿ ನಾಯಕ ಸುಂದರ್‌ಲಾಲ್ ಬಹುಗುಣ ವಿಧಿವಶ

* ಸುಂದರ್‌ಲಾಲ್ ಬಹುಗುಣ ಅವರು ಭಾರತೀಯ ಖ್ಯಾತ ಗರ್ವಾಲಿ ಪರಿಸರವಾದಿ ಮತ್ತು ಚಿಪ್ಕೊ ಚಳವಳಿಯ ನಾಯಕರಾಗಿದ್ದರು, ಪದ್ಮವಿಭೂಷಣ ಸುಂದರ್‌ಲಾಲ್ ಬಹುಗುಣ ಅವರು ತಮ್ಮ 94ನೇ ವಯಸ್ಸಿನಲ್ಲಿ ನಿಧನರಾದರು.

* ಸುಂದರ್‌ಲಾಲ್ ಬಹುಗುಣ ಅವರು ಜನನ: 1927ರ ಜನವರಿ 9 ರಂದು ಉತ್ತರಖಂಡ ರಾಜ್ಯದ ತೇಹ್ರಿ ಸಮಿಪದ ಮರೋಡಾದಲ್ಲಿ ಜನಿಸಿದರು.

* ಸುಂದರ್ ಲಾಲ್ ಬಹುಗುಣ ಅವರು ಅಪ್ಪಟ ಪರಿಸರವಾದಿಯಾಗಿದ್ದರು ಇವರು ಹಿಮಾಲಯದಲ್ಲಿ ಕಾಡುಗಳ ಸಂರಕ್ಷಣೆಗಾಗಿ ಹೋರಾಟ ನಡೆಸುತ್ತಿದ್ದರು, ಪರಿಸರ ಸಂರಕ್ಷಣೆಗಾಗಿ 1973ರಲ್ಲಿ ನಡೆದ ಚಿಪ್ಕೋ ಚಳವಳಿಯ ಮುಂದಾಳತ್ವವನ್ನು ವಹಿಸಿಕೊಂಡಿದ್ದರು.

* ಪರಿಸರವಾದಿ ಬಹುಗುಣ ಅವರು ಸುಮಾರು 4,700 ಕಿ.ಮೀ. ಗಳಷ್ಟು ದೂರ ಪಾದಯಾತ್ರೆ ಮಾಡಿ ಜನರಲ್ಲಿ ಜಾಗೃತಿ ಮೂಡಿಸಿ ಹೋರಾಟ ನಡೆಸಿದರು, ಮತ್ತು ಮಂಡಲ್ ಎಂಬ ಹಳ್ಳಿಯಲ್ಲಿ 1973ರಲ್ಲಿ ಚಿಪ್ಕೋ ಚಳವಳಿಗೆ ನಾಂದಿ ಹಾಡಿದರು.

* ಮಂಡಲ್ ಎಂಬ ಹಳ್ಳಿ ಜನರಿಗೆ ಕೃಷಿ ಸಲಕರಣೆಗಳ ತಯಾರಿಗಾಗಿ ಅಲ್ಲಿನ ಮುರಿದು ಬಿದ್ದ ಮರಗಳನ್ನು ಬಳಸಲು ಸರ್ಕಾರ ನಿರ್ಬಂಧ ಹೇರಿತ್ತು, ನಂತರ ಸರ್ಕಾರವು ಇದೇ ಪ್ರದೇಶದಲ್ಲಿ ಮರಗಳನ್ನು ಕಡಿಯಲು ಕ್ರೀಡಾ ಉಪಕರಣಗಳ ಕಂಪನಿಯೊಂದಕ್ಕೆ ಅನುಮತಿ ನೀಡಿತು.

* ಆದರೆ ಅಲ್ಲಿನ ಸ್ಥಳೀಯ ಮಹಿಳೆಯರು ಮರಗಳ ವೃತ್ತಾಕಾರದಲ್ಲಿ ಸುತ್ತುವರೆದು ಮರಗಳನ್ನೂ ಕಡಿಯಲು ಅವಕಾಶ ನೀಡಲಿಲ್ಲ, ಆಗಿನ ಪ್ರಧಾನಿ ಇಂದಿರಾ ಗಾಂಧಿ ಅವರಿಗೆ ಮರ ಕಡಿಯುವವರ ವಿರುದ್ಧ ಕ್ರಮ ಕೈಗೊಳ್ಳಲು ಸತತ ಹೋರಾಟ ನಡೆಸಿದರು, ಇದರ ಪರಿಣಾಮವಾಗಿ ಚಳವಳಿ ಬೇರೆ ಬೇರೆ ಪ್ರದೇಶಗಳಿಗೂ ಹರಡಿತು, ಅಲ್ಲಿನ ಜನರು ಕೂಡ ಜಾಗೃತರಾಗಿ ಹೋರಾಟ ನಡೆಸಲು ಸಿದ್ಧರಾದರು, ಇದರ ಪರಿಣಾಮದಿಂದಾಗಿ ಸರ್ಕಾರವು 1981ರಲ್ಲಿ ಈ ಪ್ರದೇಶದಲ್ಲಿ 15 ವರ್ಷ ಯಾವುದೇ ಮರ ಕಡಿಯದಂತೆ ಕಾನೂನು ಹೊರ ಹಾಕಿತು.

* ನಂತರ ಬಹುಗುಣರಿಗೆ ಪದ್ಮಶ್ರೀ ಪ್ರಶಸ್ತಿಯನ್ನು ಸರ್ಕಾರ ಘೋಷಣೆ ಮಾಡಿತು, ಸುಂದರ್'ಲಾಲ್ ಬಹುಗುಣ ಪ್ರಶಸ್ತಿಯನ್ನು ತಿರಸ್ಕರಿಸಿದರು, ನಂತರ 2009ರಲ್ಲಿ ಭಾರತ ಸರ್ಕಾರವು ಬಹುಗುಣ ಅವರಿಗೆ ಪದ್ಮವಿಭೂಷಣ ಪ್ರಶಸ್ತಿಯನ್ನು ನೀಡಿ ಗೌರವಿಸಿತು, ಮತ್ತು ಚಿಪ್ಕೋ ಚಳವಳಿಗಾಗಿ "ರೈಟ್ ಲೈವ್ಲಿ ಹುಡ್ ಅವಾರ್ಡ್" ಹಾಗೂ ಜಮ್ನಾಲಾಲ್ ಬಜಾಜ್ ಪ್ರಶಸ್ತಿ ಇವರಿಗೆ ಲಭಿಸಿದವು, ನಂತರ ಐಐಟಿ ರೂರ್ಕಿ ಅವರು 1989ರಲ್ಲಿ ಡಾಕ್ಟರ್ ಆಫ್ ಸೋಷಿಯಲ್ ಸೈನ್ಸಸ್ ಗೌರವ ಪದವಿಯನ್ನು ಸುಂದರ್'ಲಾಲ್ ಬಹುಗುಣ ಅವರಿಗೆ ನೀಡಿದರು.

## ಮಾಜಿ ಡಿಎಸ್ಪಿ(DSP)ದೇವಿಂದರ್ ಸಿಂಗ್ ಸೇವೆಯಿಂದ ವಜಾ



* ಕಾಶ್ಮೀರದ ಮಾಜಿ ಡಿಎಸ್ಪಿ ದೇವಿಂದರ್ ಸಿಂಗ್ ಅವರು ಜಮ್ಮು ಮತ್ತು ಕಾಶ್ಮೀರದಲ್ಲಿ ಉಗ್ರರಿಗೆ ನೆರವಾದ ಆರೋಪದ ಹಿನ್ನಲೆಯಿಂದಾಗಿ ಇವರನ್ನು ಸೇವೆಯನ್ನು ವಜಾಗೊಳಿಸಲಾಗಿದೆ ಎಂದು ಜಮ್ಮು ಮತ್ತು ಕಾಶ್ಮೀರದ ಆಡಳಿತ ಅಧಿಕೃತವಾಗಿ ಪ್ರಕಟಣೆಯನ್ನು ಹೊರಡಿಸಿದೆ.

* ಲೆಫ್ಟಿನಂಟ್ ಗವರ್ನರ್ ಮನೋಜ್ ಸಿನ್ಹಾ ಅವರು ಸಂವಿಧಾನದ ಆರ್ಟಿಕಲ್ 311 ಅನ್ವಯದ ಅಡಿಯಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ಮಾಜಿ ಡಿಎಸ್ಪಿ ದೇವಿಂದರ್ ಸಿಂಗ್ ಅವರನ್ನು ಸೇವೆಯಿಂದ ವಜಾಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ.

* DSP ದೇವಿಂದರ್ ಸಿಂಗ್ ಅವರು ಇಬ್ಬರು ಹಿಜ್ಬುಲ್ ಮುಜಾಹಿದ್ದೀನ್ ಭಯೋತ್ಪಾದಕರ ಜೊತೆ ಸಿಕ್ಕಿ ಬಿದ್ದ ಕಾರಣದಿಂದಾಗಿ ಜಮ್ಮು ಮತ್ತು ಕಾಶ್ಮೀರ ಪೊಲೀಸರು ಪ್ರಕರಣ ದಾಖಲಿಸಿ FIR ಹಾಕಿದ್ದಾರೆ.

## ಏಷ್ಯಾದ ಅತ್ಯಂತ ಶ್ರೀಮಂತರ ಪಟ್ಟಿ ಪ್ರಕಟ ಪ್ರಥಮ ಸ್ಥಾನದಲ್ಲಿ ಅಂಬಾನಿ, ಎರಡನೇ ಸ್ಥಾನ ಗೌತಮ್ ಅದಾನಿ



* ಬ್ಲೂಂಬರ್ಗ್ ಬಿಲಿಯನೇರ್ಸ್ ಇಂಡೆಕ್ಸ್ ವರದಿಯ ಪ್ರಕಾರ ಏಷ್ಯಾದ ಅತ್ಯಂತ ಶ್ರೀಮಂತರ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿ ಅತ್ಯಂತ ಶ್ರೀಮಂತ ವ್ಯಕ್ತಿಯಾಗಿ ರಿಲಯನ್ಸ್ ಇಂಡಸ್ಟ್ರೀಸ್ ಮುಖ್ಯಸ್ಥ ಮುಕೇಶ್ ಅಂಬಾನಿ, ಮತ್ತು ಎರಡನೇ ಸ್ಥಾನದಲ್ಲಿ ಅದಾನಿ ಗ್ರೂಪ್ ಮುಖ್ಯಸ್ಥ ಗೌತಮ್ ಅದಾನಿ ಶ್ರೀಮಂತ ವ್ಯಕ್ತಿಯಾಗಿದ್ದಾರೆ.

* ಪ್ರಸ್ತುತ ಚೀನಾದ ತಂಪು ಪಾನೀಯ ಮತ್ತು ಫಾರ್ಮಾ ಉದ್ಯಮಿ ಝೊಂಗ್ ಶನ್ಸನ್ ಅವರನ್ನು ಹಿಂದಿಕ್ಕಿ ಗೌತಮ್ ಅದಾನಿ ಅವರು ಏಷ್ಯಾದ ಎರಡನೇ ಅತ್ಯಂತ ಶ್ರೀಮಂತ ವ್ಯಕ್ತಿಯಾಗಿ ಹೊರ ಹೊಮ್ಮಿದ್ದಾರೆ.

* ಅತ್ಯಂತ ಶ್ರೀಮಂತರ ಪಟ್ಟಿಯಲ್ಲಿ ಜಾಗತಿಕವಾಗಿ ಅತ್ಯಂತ ಶ್ರೀಮಂತ ವ್ಯಕ್ತಿಯಾಗಿ ಮುಕೇಶ್ ಅಂಬಾನಿ 13ನೇ ಸ್ಥಾನ ಮತ್ತು ಗೌತಮ್ ಅದಾನಿ 14ನೇ ಸ್ಥಾನದಲ್ಲಿದ್ದಾರೆ.

* ಪ್ರಸ್ತುತ ಅಂಬಾನಿಯ ಒಟ್ಟು ಸಂಪತ್ತು 76.5 ಬಿಲಿಯನ್ ಡಾಲರ್ ಮತ್ತು ಗೌತಮ್ ಅದಾನಿಯ ಒಟ್ಟು ಸಂಪತ್ತು 66.5 ಬಿಲಿಯನ್ ಡಾಲರ್ ಆಗಿದೆ ಎಂದು ಬ್ಲೂಂಬರ್ಗ್ ಬಿಲಿಯನೇರ್ಸ್ ಇಂಡೆಕ್ಸ್ ವರದಿಯನ್ನು ನೀಡಿದೆ.

## ಭಾರತಕ್ಕಿಂತ ಹೆಚ್ಚಿದ ಬಾಂಗ್ಲಾದೇಶದ ತಲಾ ಆದಾಯ



* ಪ್ರಸ್ತುತ ತಲಾ ಆದಾಯದ ವಿಚಾರಗಳಲ್ಲಿ ಭಾರತ ದೇಶಕ್ಕಿಂತ ನೆರೆಯನ್ ರಾಷ್ಟ್ರ ಬಾಂಗ್ಲಾದೇಶದ ತಲಾ ಆದಾಯ ಹೆಚ್ಚಿದೆ, ಬಾಂಗ್ಲಾದೇಶದ 2020 21ನೇ ಆರ್ಥಿಕ ವರ್ಷದ ತಲಾ ಆದಾಯ 2,227 ಡಾಲರ್ ಆಗಿದೆ, ಪ್ರಸ್ತುತ ಈ ತಲಾ ಆದಾಯವು ಕಳೆದ ಆರ್ಥಿಕ ವರ್ಷಕ್ಕಿಂತ (2,064 ಡಾಲರ್) ಶೇ9ರಷ್ಟು ಪ್ರಗತಿಯಾಗಿದೆ ಎಂದು ಬಾಂಗ್ಲಾದೇಶದ ಕ್ಯಾಬಿನೆಟ್ ಕಾರ್ಯದರ್ಶಿ ತಿಳಿಸಿದ್ದಾರೆ.

* ಭಾರತ ದೇಶದಲ್ಲಿನ ಕೋವಿಡ್ ಸೋಂಕಿನ ಕಾರಣದಿಂದಾಗಿ ಆರ್ಥಿಕವು ನಿಧಾನಗತಿಯಾಗಿದೆ ಪ್ರಸ್ತುತ ಭಾರತದ ತಲಾ ಆದಾಯ 1947.417 ಡಾಲರ್ ಆಗಿದೆ.

* ಬಾಂಗ್ಲಾದೇಶದ ಪ್ರಧಾನಿ ಶೇಖ್ ಹಸೀನಾ ಮತ್ತು ಯೋಜನಾ ಸಚಿವ ಎಂ ಎ ಮನ್ನಾನ್ ಅವರು ತಮ್ಮ ದೇಶದ ಅಂಕಿಅಂಶಗಳನ್ನು ವರ್ಚುವಲ್ ಸಭೆಯಲ್ಲಿ ಪ್ರಕಟಿಸಿದರು.

## DRDOದಿಂದ ಕೋವಿಡ್ ಪ್ರತಿಕಾಯ ಪತ್ತೆ ಕಿಟ್ ಅಭಿವೃದ್ಧಿ




* ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯು (DRDO) ಕೋವಿಡ್ 19 ಪ್ರತಿಕಾಯಗಳನ್ನು (ಆಯಂಟಿಬಾಡಿ) ಪತ್ತೆ ಹಚ್ಚುವ ಕಿಟ್ ಅನ್ನು ಅಭಿವೃದ್ಧಿ ಪಡಿಸಿದೆ, ಈ ಕೋವಿಡ್ 19 ಪ್ರತಿಕಾಯಗಳ ಕಿಟ್ ಕೇವಲ 75 ನಿಮಿಷಗಳಲ್ಲಿ ಫಲಿತಾಂಶ ನೀಡಲಿದೆ ಎಂದು ಕೇಂದ್ರ ರಕ್ಷಣಾ ಸಚಿವಾಲಯವು ಮಾಹಿತಿಯನ್ನು

ನೀಡಿದೆ.

* ಪ್ರಸ್ತುತ DRDO ಅಭಿವೃದ್ಧಿಪಡಿಸಿದ ಈ ಕಿಟ್'ಗೆ ಡಿಪ್ ಕೋವ್ಯಾನ್ ಎಂದು ಹೆಸರಿಸಲಾಗಿದೆ, ಈ ಕಿಟ್'ನ್ನು ನವದೆಹಲಿ ಮೂಲದ ವ್ಯಾನ್‌ಗಾರ್ಡ್ ಡಯಾಗ್ನೋಸ್ಟಿಕ್ಸ್ ಪ್ರೈ ಲಿ. ಸಹಯೋಗದೊಂದಿಗೆ ಅಭಿವೃದ್ಧಿ ಪಡಿಸಿದ್ದಾರೆ.

* ಈ ಕಿಟ್‌ನ ಜೀವಿತಾ ಅವಧಿ (ಶೆಲ್ಫ್ ಲೈಫ್) 18 ತಿಂಗಳವರೆಗೆ ಇರಲಿದೆ, ಈ ಕಿಟ್'ನಿಂದ ನ್ಯೂಕ್ಲಿಯೊಕ್ಯಾಪ್ಸಿಡ್ ಸಾರ್ಸ್ ಕೋವಿನ್ 2 ಪ್ರೊಟೀನ್‌ಗಳನ್ನು ಪತ್ತೆ ಮಾಡಲು ಸಹಾಯಕಾರಿಯಾಗಲಿದೆ, ಈ ಕಿಟ್'ನ್ನು ಜೂನ್ ತಿಂಗಳಿನ ಮೊದಲ ವಾರದಲ್ಲಿ ಮಾರುಕಟ್ಟೆಗೆ ಲಭ್ಯವಾಗಲಿದೆ ಎಂದು ಕೇಂದ್ರ ರಕ್ಷಣಾ ಸಚಿವಾಲಯವು ಪ್ರಕಟಿಸಿದೆ.

# 24-05-2021

## ಸಾಹಿತಿ ಪ್ರೊ.ಬಿ.ಎಂ. ಇಚ್ಲಂಗೋಡು ವಿಧಿವಶ



* ಹಿರಿಯ ಸಾಹಿತಿ, ಬ್ಯಾರಿ ಸಂಶೋಧಕ ಪ್ರೊ. ಬಿ.ಎಂ. ಇಚ್ಲಗೊಂಡ ಅವರು ತಮ್ಮ 84ನೇ ವಯಸ್ಸಿನಲ್ಲಿ ವಿಧಿವಶರಾಗಿದ್ದಾರೆ.

* ಪ್ರೊ. ಬಿ.ಎಂ. ಇಚ್ಲಗೊಂಡ ಅವರು ಬ್ಯಾರಿ ಭಾಷೆ, ಸಾಹಿತ್ಯ, ಸಂಸ್ಕೃತಿಯ ನಡೆಸಿದ ಅಧ್ಯಯನಕ್ಕೆ 2011ರಲ್ಲಿ ಉಡುಪಿಯಲ್ಲಿ ನಡೆದ 3ನೇ ಬ್ಯಾರಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು, ಮತ್ತು ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿಯ ಪ್ರಥಮ ಅವಧಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು.

* ಪ್ರೊ. ಬಿ.ಎಂ. ಇಚ್ಲಗೊಂಡ ಅವರಿಗೆ 1975ರಲ್ಲಿ ದಿವ್ಯದರ್ಶನ ಕವ್ಯಾನುವಾದಕ್ಕೆ ರಾಷ್ಟ್ರಪ್ರಶಸ್ತಿ, ಸಾಹಿತ್ಯ ಸೇವಾ ಸನ್ಮಾನವು ಮೂಡುಬಿದಿರೆಯ ರೋಟರಿ ಕ್ಲಬ್'ನ ವತಿಯಿಂದ ನೆರವೇರಿತು, ಹಾಗೂ ಪ್ರಥಮ ಬ್ಯಾರಿ ಸಾಹಿತ್ಯ ಸಮ್ಮೇಳನದದಲ್ಲಿ ಬ್ಯಾರಿ ಸಾಹಿತ್ಯ ಸನ್ಮಾನವು ಇವರಿಗೆ ಲಭಿಸಿತ್ತು.

## ಸನ್ ಅಂತಾರಾಷ್ಟ್ರೀಯ ಚಿತ್ರೋತ್ಸವಕ್ಕೆ ಆಯ್ಕೆಯಾದ ಅಮೃತಮತಿ ಚಿತ್ರ




* ಹಿರಿಯ ಸಾಹಿತಿಯಾಗಿರುವ ಡಾ. ಬರಗೂರು ರಾಮಚಂದ್ರಪ್ಪ ನಿರ್ದೇಶನದ 'ಅಮೃತಮತಿ' ಚಿತ್ರವು ಈ ಹಿಂದೆ ಲಾಸ್ ಏಂಜಲೀಸ್ ಇಂಡಿಪೆಂಡೆಂಟ್ ಚಿತ್ರೋತ್ಸವಕ್ಕೆ ಆಯ್ಕೆಯಾಗಿತ್ತು, ಸದ್ಯ ಇದೀಗ ಲಾಸ್ ಏಂಜಲೀಸ್‌ನಲ್ಲೇ ನಡೆಯುತ್ತಿರುವ ಸನ್ ಅಂತಾರಾಷ್ಟ್ರೀಯ ಚಿತ್ರೋತ್ಸವಕ್ಕೆ ಆಯ್ಕೆಯಾಗಿದೆ.

* ಡಾ. ಬರಗೂರು ರಾಮಚಂದ್ರಪ್ಪ ನಿರ್ದೇಶನದ ಅಮೃತಮತಿ ಚಿತ್ರವು ಇಲ್ಲಿಯವರೆಗೆ ಒಟ್ಟು 10 ಅಂತಾರಾಷ್ಟ್ರೀಯ ಚಿತ್ರೋತ್ಸವಗಳಿಗೆ ಆಯ್ಕೆಯಾಗಿದೆ, ಈ ಚಿತ್ರದ ನಟಿ ಹರಿಪ್ರಿಯಾ ಅವರಿಗೆ 2 ಬಾರಿ ಅತ್ಯುತ್ತಮ ನಟಿ ಪ್ರಶಸ್ತಿ ಲಭಿಸಿದೆ.

* ಈ ಅಮೃತಮತಿ ಚಿತ್ರಕ್ಕೆ ಅಟ್ಲಾಂಟ ಅಂತಾರಾಷ್ಟ್ರೀಯ ಚಿತ್ರೋತ್ಸವದಲ್ಲಿ ಅತ್ಯುತ್ತಮ ವಿದೇಶಿ ಭಾಷಾ ಚಿತ್ರ ಎಂಬ ಪ್ರಶಸ್ತಿ ಲಭಿಸಿದೆ, ಮತ್ತು 11ನೇ ದಾದಾ ಸಾಹೇಬ್ ಫಾಲ್ಕೆ ಚಿತ್ರೋತ್ಸವದಲ್ಲಿ ವಿಶೇಷ ಚಿತ್ರ ಎಂಬ ಮೆಚ್ಚುಗೆಗೆ ಪಾತ್ರವಾಗಿದೆ.

* ಈ ಅಮೃತಮತಿ ಚಿತ್ರವು 13ನೇ ಶತಮಾನದ ಕನ್ನಡ ಕವಿ ಜನ್ನನ ಯಶೋಧರ ಚರಿತೆಯನ್ನು ಆಧರಿಸಿದ ಕಾವ್ಯವಾಗಿದೆ, ಈ ಚಿತ್ರದಲ್ಲಿ ನಟಿ ಹರಿಪ್ರಿಯಾ, ನಟ ಕಿಶೋರ್, ಸುಂದರ್‌ರಾಜ್, ವತ್ಸಲಾ ಮೋಹನ್ ಮುಂತಾದ ವ್ಯಕ್ತಿಗಳು ಈ ಚಿತ್ರದಲ್ಲಿ ಬಣ್ಣ ಹಚ್ಚಿದ್ದಾರೆ.

## ಜಿನೇವಾ ಓಪನ್ ಟೆನಿಸ್ ಪ್ರಶಸ್ತಿ



* ಜಿನೇವಾ ಓಪನ್ ಟೆನಿಸ್ ಪ್ರಶಸ್ತಿಯಲ್ಲಿ ನಾರ್ವೆಯ ಕ್ಯಾಸ್ಪರ್ ರೂಡ್ ಅವರು ಕೆನಡಾದ ಡೆನ್ನಿಸ್ ಶಪೊವಲೋವ್ ಅವರನ್ನು ಸೋಲಿಸಿ ಜಿನೇವಾ ಓಪನ್ ಟೆನಿಸ್' ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ, ನಾರ್ವೆಯ ಕ್ಯಾಸ್ಪರ್ ರೂಡ್ ಗೆದ್ದಿರುವ ದ್ವಿತೀಯ ಎಟಿಪಿ ಟೆನಿಸ್ ಪ್ರಶಸ್ತಿ ಇದಾಗಿದೆ, ಈ ಹಿಂದಿನ ವರ್ಷ ಅರ್ಜೆಂಟೀನಾ ಓಪನ್ ಚಾಂಪಿಯನ್ ಆಗಿ ಹೊರ ಹೊಮ್ಮಿದ್ದರು.

* ಪ್ರಸ್ತುತ ಕ್ಯಾಸ್ಪರ್ ರೂಡ್ ಅವರು ಓಪನ್ ಟೆನಿಸ್ ವಿಜೇತರ ಪಟ್ಟಿಯಲ್ಲಿ 16ನೇ ಸ್ಥಾನ ಪಡೆದಿದ್ದಾರೆ.

## ಪರಮಾಣು ಶಕ್ತಿ ಆಯೋಗದ ಮಾಜಿ ಅಧ್ಯಕ್ಷ ಶ್ರೀಕುಮಾರ್ ಬ್ಯಾನರ್ಜಿ ಇನ್ನಿಲ್ಲ





* ಪರಮಾಣು ಶಕ್ತಿ ಆಯೋಗದ ಮಾಜಿ ಅಧ್ಯಕ್ಷರಾಗಿರುವ ಶ್ರೀಕುಮಾರ್ ಬ್ಯಾನರ್ಜಿ ಅವರು ತಮ್ಮ 70ನೇ ವಯಸ್ಸಿನಲ್ಲಿ ಹೃದಯಕ್ಕೆ ಸಂಬಂಧಿಸಿದ ಕಾಯಿಲೆಯಿಂದ ವಿಧಿವಶರಾಗಿದ್ದಾರೆ.

* ಪರಮಾಣು ಶಕ್ತಿ ಆಯೋಗದ ಅಧ್ಯಕ್ಷ ಸ್ಥಾನ ಹಾಗೂ ಪರಮಾಣು ಶಕ್ತಿ

ಇಲಾಖೆಯ ಕಾರ್ಯದರ್ಶಿ ಹುದ್ದೆಯಿಂದ ಶ್ರೀಕುಮಾರ್ ಬ್ಯಾನರ್ಜಿ ಅವರು 2012ರಲ್ಲಿ ನಿವೃತ್ತಿ ಹೊಂದಿದ್ದರು.

* ಶ್ರೀಕುಮಾರ್ ಬ್ಯಾನರ್ಜಿ ಇವರಿಗೆ ಪದ್ಮಶ್ರೀ ಪುರಸ್ಕಾರವು 2005ರಲ್ಲಿ ಮತ್ತು ಶಾಂತಿ ಸ್ವರೂಪ್ ಭಟ್ನಾಗರ್ ಪ್ರಶಸ್ತಿಯು 1989ರಲ್ಲಿ ಲಭಿಸಿತ್ತು, ಇವರು 2010ರ ತನಕ ಸುಮಾರು 6ವರ್ಷಗಳ ವರೆಗೆ ಭಾಭಾ ಪರಮಾಣು ಸಂಶೋಧನಾ ಕೇಂದ್ರದ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ.

## 10ನೇ ತರಗತಿಯ ಪರೀಕ್ಷೆಗಳು ರದ್ದು ಗೋವಾ ಸರ್ಕಾರದ ಪ್ರಕಟಣೆ



* ಪ್ರಸ್ತುತ ಗೋವಾ ಸರ್ಕಾರವು ಕೋವಿಡ್ 19 ಸಾಂಕ್ರಾಮಿಕ ರೋಗದ ಪರಿಸ್ಥಿತಿಯಿಂದಾಗಿ ರಾಜ್ಯದಲ್ಲಿ 10ನೇ ತರಗತಿ ಪರೀಕ್ಷೆಯನ್ನು ರದ್ದುಗೊಳಿಸಿ ಆದೇಶ ಹೊರಡಿಸಿದೆ, ಮತ್ತು ಇನ್ನೆರಡು ದಿನಗಳಲ್ಲಿ 12ನೇ ತರಗತಿಯ ಪರೀಕ್ಷೆಯ ನಿರ್ಧಾರವನ್ನು ಪ್ರಕಟಿಸಲಾಗುತ್ತದೆ ಎಂದು ಗೋವಾ ಸರ್ಕಾರವು ಮಾಹಿತಿಯನ್ನು ನೀಡಿದೆ.

* ಪ್ರಸ್ತುತ ಗೋವಾ ಮುಖ್ಯಮಂತ್ರಿ ಪ್ರಮೋದ ಸಾವಂತ್ ಅವರು ಕೋವಿಡ್ 19 ಸೋಂಕಿನ ಪರಿಸ್ಥಿತಿಯಿಂದಾಗಿ ಈ ವರ್ಷದ 10ನೇ ತರಗತಿ ಪರೀಕ್ಷೆಯನ್ನು ರದ್ದುಮಾಡಲು ಸರ್ಕಾರವು ನಿರ್ಧಾರ ತೆಗೆದುಕೊಳ್ಳಲಾಗಿದೆ, ಮತ್ತು ಗೋವಾ ಬೋರ್ಡ್ ಆಫ್ ಸೆಕೆಂಡರಿ ಮತ್ತು ಹೈಯರ್ ಸೆಕೆಂಡರಿ ಶಾಲಾ ಶಿಕ್ಷಣ ಮಂಡಳಿ, ರಾಜ್ಯ ಶಿಕ್ಷಣ ಇಲಾಖೆ, ಶೈಕ್ಷಣಿಕ ಕ್ಷೇತ್ರದ ತಜ್ಞರು ಒಳಗೊಂಡ ಸಮಿತಿಯ ಶಿಫಾರಸ್ಸನ್ನು ಅನುಸರಿಸಿ ಈ ನಿರ್ಧಾರ ತೆಗೆದುಕೊಂಡಿದ್ದಾರೆ ಎಂದು ಪಣಜಿಯಲ್ಲಿ ನಡೆದ ಸುದ್ದಿಘೋಷ್ಠಿಯಲ್ಲಿ ಮಾಹಿತಿಯನ್ನು ನೀಡಿದ್ದಾರೆ.

* ಈಗಿನ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಅವರ ಆಂತರಿಕ ಪರೀಕ್ಷೆಯ ಮೌಲ್ಯಮಾಪನದ ಆಧಾರದ ಮೇಲೆ ಪರೀಕ್ಷಾ ಫಲಿತಾಂಶಗಳನ್ನು ನಿಡಲಾಗುತ್ತದೆ, ಮುಂಬರುವ ಪಿಯುಸಿಯಲ್ಲಿ ವಿಜ್ಞಾನ ವಿಷಯ ಮತ್ತು ಡಿಪ್ಲೊಮ ಕೋರ್ಸ್'ಗಳಿಗೆ ಪ್ರವೇಶ ಪಡೆಯುಲು ಇಚ್ಛಿಸುವ ವಿದ್ಯಾರ್ಥಿಗಳಿಗೆ ಒಂದು ದಿನದ ಪರೀಕ್ಷೆಗೆ ಒಳಪಡಬೇಕಾಗುತ್ತದೆ ಎಂಬ ಸೂಚನೆಯನ್ನು ನೀಡಿದ್ದಾರೆ.

## ರೈಲ್ವೆ ಇಲಾಖೆಯಿಂದ ರಾಜ್ಯಗಳಿಗೆ 14,500 ಟನ್ ಲಿಕ್ವಿಡ್ ಆಕ್ಸಿಜನ್ ಪೂರೈಕೆ



* ಭಾರತ ದೇಶದ ತುಂಬೆಲ್ಲ ಕೊರೋನಾ ವೈರಸ್ ಸೋಂಕು ಹೆಚ್ಚಿದ ಸಮಯದಲ್ಲಿ ಕೋವಿಡ್ 19 ರೋಗಿಗಳಿಗೆ ಆಕ್ಸಿಜನ್ ಪೂರೈಕೆ ಮಾಡುವಲ್ಲಿ ಭಾರತೀಯ ರೈಲ್ವೆ ಇಲಾಖೆಯು ಪ್ರಮುಖ ಪಾತ್ರವನ್ನು ವಹಿಸಿದೆ.

* ಪ್ರಸ್ತುತ ಭಾರತೀಯ ರೈಲ್ವೆ ಇಲಾಖೆಯು ಬೇರೆ ಬೇರೆ ರಾಜ್ಯಗಳಿಗೆ ಸುಮಾರು 884 ಟ್ಯಾಂಕರ್ಗಳ ಮೂಲಕ 14,500 ಟನ್ ಲಿಕ್ವಿಡ್ ವೈದ್ಯಕೀಯ ಆಕ್ಸಿಜನ್ ಪೂರೈಕೆ ಮಾಡಲಾಗಿದೆ ಎಂದು ಭಾರತೀಯ ರೈಲ್ವೆ ತಿಳಿಸಿದೆ, ಇಲ್ಲಿಯವರೆಗೆ 224 ಆಕ್ಸಿಜನ್ ಎಕ್ಸ್ ಪ್ರೆಸ್ ರೈಲುಗಳು ತಮ್ಮ ಸಂಚಾರವನ್ನು ಪೂರ್ಣಗೊಳಿಸಿವೆ ಮತ್ತು 563 ಟನ್ ಲಿಕ್ವಿಡ್ ವೈದ್ಯಕೀಯ ಆಕ್ಸಿಜನ್ ಹೊತ್ತ 8 ರೈಲುಗಳು ತಮ್ಮ ಸಂಚಾರದ ಹಾದಿಯಲ್ಲಿ ಸಾಗುತ್ತಿವೆ ಎಂದು ತಿಳಿಸಿದೆ.

* ಪ್ರತಿದಿನವು ಭಾರತೀಯ ರೈಲ್ವೆ ಇಲಾಖೆಯು ಬೇರೆ ಬೇರೆ ರಾಜ್ಯಗಳಿಗೆ 800 ಟನ್ ಲಿಕ್ವಿಡ್ ವೈದ್ಯಕೀಯ ಆಕ್ಸಿಜನ್ ನ್ನು ಪೂರೈಕೆ ಮಾಡಲಾಗಿದೆ ಎಂದು ರೈಲ್ವೆ ಇಲಾಖೆಯು ಮಾಹಿತಿಯನ್ನು ನೀಡಿದೆ.

## ಭಾರತದ ಮೊದಲ ಮಹಿಳಾ ಫ್ಲೈಟ್ ಟೆಸ್ಟ್ ಇಂಜಿನಿಯರ್ ಆಶ್ರಿತಾ



* ಭಾರತದ ಮೊದಲ ಮಹಿಳಾ ಫ್ಲೈಟ್ ಟೆಸ್ಟ್ ಇಂಜಿನಿಯರ್ ಆಗಿ ಕರ್ನಾಟಕ ರಾಜ್ಯದ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲದ ಯುವತಿ ಆಶ್ರಿತಾ ಅವರು ಆಯ್ಕೆಯಾಗಿದ್ದಾರೆ.

* ಆಶ್ರಿತಾ ಅವರು ಭಾರತದ ಏರ್‌ಫೋರ್ಸ್ ಟೆಸ್ಟ್ ಪೈಲಟ್ ಸ್ಕೂಲ್‌ನಿಂದ ಪದವಿ ಪಡೆದುಕೊಂಡಿದ್ದಾರೆ, ಹಾಗೂ ಇವರು ಭಾರತೀಯ ವಾಯುಸೇನೆಯ ಮೊದಲ ಮಹಿಳಾ ಫ್ಲೈಟ್ ಟೆಸ್ಟ್ ಇಂಜಿನಿಯರ್ ಆಗಿದ್ದಾರೆ, ಇವರು ವಾಯುಪಡೆಯ ಟೆಕ್ನಿಕಲ್ ವಿಭಾಗಕ್ಕೆ 2014ರಲ್ಲಿ ಆಯ್ಕೆಯಾಗಿದ್ದರು.

* ವಿಶ್ವದಲ್ಲಿ 7ವಿಶ್ವವಿದ್ಯಾಲಯಗಳಲ್ಲಿ ಏರ್‌ಫೋರ್ಸ್ ಟೆಸ್ಟ್ ಪೈಲಟ್ ಸ್ಕೂಲ್ ಇವೆ, ಇವುಗಳಲ್ಲಿ ಭಾರತ ಕೂಡ ಒಂದಾಗಿದೆ, 1976ರಲ್ಲಿ ಭಾರತದ ಏರ್‌ಫೋರ್ಸ್ ಟೆಸ್ಟ್ ಪೈಲಟ್ ಸ್ಕೂಲ್ ಸ್ಥಾಪನೆಯಾಗಿದೆ, ಈ ಸ್ಕೂಲ್'ನಿಂದ ಇಲ್ಲಿಯವರೆಗೆ 275 ಮಂದಿ ಮಾತ್ರ ಪದವಿಯನ್ನು ಪಡೆದುಕೊಂಡಿದ್ದಾರೆ.

## ಮ್ಯಾನ್ಮಾರ್'ನ ಸೇನಾ ದಂಗೆ ವಿರೋಧಿಸಿದ್ದಕ್ಕಾಗಿ ಶಾಲಾ ಶಿಕ್ಷಕರ ಅಮಾನತು



* ಈ ಹಿಂದೆ ಮ್ಯಾನ್ಮಾರ್ ದೇಶದಲ್ಲಿ ಫೆಬ್ರುವರಿ ತಿಂಗಳಿನಲ್ಲಿ ನಡೆದ ಸೇನಾ ದಂಗೆಯನ್ನು ವಿರೋಧಿಸಲು ನಾಗರಿಕ ಅಸಹಕಾರ ಚಳವಳಿಗೆ ಶಾಲಾ ಶಿಕ್ಷಕರನ್ನು ಸೇರ್ಪಡೆಗೊಂಡಿದ್ದರು ಈ ಕಾರಣದಿಂದಾಗಿ ಮ್ಯಾನ್ಮಾರ್ ದೇಶದಲ್ಲಿನ 1,25,900 ಶಾಲಾ ಶಿಕ್ಷಕರನ್ನು ಸೇವೆಯಿಂದ ವಜಾ (ಅಮಾನತು) ಮಾಡಲಾಗಿದೆ ಎಂದು ಸೇನಾಧಿಕಾರಿಗಳು ಶಿಕ್ಷಕರ ಒಕ್ಕೂಟದ ಅಧಿಕಾರಿಗೆ ಮಾಹಿತಿಯನ್ನು ನೀಡಿದ್ದಾರೆ.

* ಒಂದು ದಶಕದಿಂದ ಮ್ಯಾನ್ಮರ್ ದೇಶದಲ್ಲಿ ಸರ್ಕಾರ ಮತ್ತು ಸೇನೆಯ ಮಧ್ಯೆ ಸಂಘರ್ಷ ನಡೆಯುತ್ತಿದೆ.

* ಪ್ರಸ್ತುತ ಶಿಕ್ಷಕ ಆಗಿರುವ ಅಧಿಕಾರಿಯು ಸೇನೆಯು ಜನರ ಮೇಲೆ ನಡೆಸುತ್ತಿರುವ ದೌರ್ಜನ್ಯ ನಿಲ್ಲಿಸದಿದ್ದರೆ ಪ್ರಜಾಪ್ರಭುತ್ವ ವ್ಯವಸ್ಥೆ ಹಾಳಾಗುತ್ತದೆ ಎಂದು ಆಕ್ರೋಶ ವ್ಯಕ್ತ ಪಡಿಸಿದ್ದಾರೆ.

## ನೇಪಾಳಕ್ಕೆ ನವೆಂಬರ್ ನಲ್ಲಿ ಮಧ್ಯಂತರ ಚುನಾವಣೆ ಘೋಷಣೆ



* ಇತ್ತೀಚಿಗೆ ನೇಪಾಳ ಪ್ರಧಾನಿ ಕೆ. ಪಿ. ಶರ್ಮಾ ಒಲಿ ಅವರು ಬಹುಮತ ಸಾಬೀತು ಪಡಿಸುವಲ್ಲಿ ವಿಫಲರಾಗಿದ್ದಾರೆ ಮತ್ತು ಅಲ್ಲಿ ಹೊಸ ಸರ್ಕಾರ ರಚನೆ ಮಾಡಲು ಆಡಳಿತ ಮತ್ತು ಪ್ರತಿಪಕ್ಷಗಳು ವಿಫಲವಾಗಿವೆ ಈ ಕಾರಣದಿಂದಾಗಿ, ನೇಪಾಳ ರಾಷ್ಟ್ರಪತಿ ಬಿಧ್ಯಾ ದೇವಿ ಭಂಡಾರಿ ಅವರು ಸಂಸತ್ಅನ್ನು ವಿಸರ್ಜಿಸಿ ನವಂಬರ್ 12 ಮತ್ತು 19 ರಂದು ಮಧ್ಯಂತರ ಚುನಾವಣೆ ನಡೆಯಲಿದೆ ಎಂದು ಘೋಷಣೆ ಮಾಡಿದ್ದಾರೆ.

* ಪ್ರಸ್ತುತ ನೇಪಾಳ ಸರ್ಕಾರವು ಸಮರ್ಪಕವಾಗಿ ಕಾರ್ಯ ನಿರ್ವಹಿಸದ ಕಾರಣದಿಂದಾಗಿ ಕಳೆದ ಡಿಸಂಬರ್'ನಲ್ಲೆ ರಾಷ್ಟ್ರಪತಿಗಳು ಸರ್ಕಾರವನ್ನು ವಿಸರ್ಜಿಸಿದ್ದರು, ಆದರೆ ಇದಕ್ಕೆ ಸುಪ್ರೀಂಕೋರ್ಟ್ ತಡೆ ನೀಡಿತ್ತು, ಇದೀಗ ಮತ್ತೆ ಇಲ್ಲಿನ ಪಕ್ಷಗಳು ಸಂಸತ್'ನಲ್ಲಿ ಬಹುಮತ ಸಾಬೀತುಪಡಿಸುವಲ್ಲಿ ವಿಫಲವಾಗಿವೆ ಈ ಕಾರಣದಿಂದಾಗಿ ನೇಪಾಳ ಸಂಸತ್ 2ನೇ ಬಾರಿ ವಿಸರ್ಜನೆಯಾಗಿದೆ.

# 25-05-2021

## ಜಮ್ಮು ಕಾಶ್ಮೀರ ಸರಕಾರವು ಕಪ್ಪು ಶಿಲೀಂದ್ರ ಸೋಂಕನ್ನು ಸಾಂಕ್ರಾಮಿಕ ರೋಗ ಎಂದು ಘೋಷಿಸಿದೆ



* ಜಮ್ಮು ಹಾಗೂ ಕಾಶ್ಮೀರ ಕೇಂದ್ರಾಡಳಿತ ಪ್ರದೇಶದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರು ಕಪ್ಪು ಶಿಲೀಂಧ್ರ ಸೋಂಕನ್ನು ಸಾಂಕ್ರಾಮಿಕ ರೋಗ ಎಂದು ಘೋಷಣೆ ಮಾಡಿದ್ದಾರೆ.

* ಕೇಂದ್ರ ಸರಕಾರವು ಎಲ್ಲಾ ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸರ್ಕಾರವು 1897ರ ಸಾಂಕ್ರಾಮಿಕ ರೋಗ ಕಾಯ್ದೆ ಅಡಿಯಲ್ಲಿ ಕಪ್ಪು ಶಿಲೀಂಧ್ರ ಸೋಂಕನ್ನು ಗಂಭೀರ ಕಾಯಿಲೆ ಎಂದು ಪರಿಗಣಿಸುವಂತೆ ಸೂಚಿಸಿದ ನಂತರ ಜಮ್ಮು ಹಾಗೂ ಕಾಶ್ಮೀರ ಸರ್ಕಾರವು ಈ ನಿರ್ಧಾರವನ್ನು ಕೈಗೊಂಡಿದೆ.

* ಶ್ರೀನಗರ ಸರಕಾರಿ ದಂತ ವೈದ್ಯಕೀಯ ಕಾಲೇಜಿನ ಓರಲ್ ಆಯಂಡ್ ಮ್ಯಾಕ್ಸಿಲ್ಲೊಫೇಸಿಯಲ್ ಸರ್ಜರಿ ಘಟಕದ ಆರೋಗ್ಯ ಅಧಿಕಾರಿಗಳು ಇಲ್ಲಿನ ಆಸ್ಪತ್ರೆಯಲ್ಲಿ 2020 ನವೆಂಬರ್'ನಲ್ಲಿ ಕಪ್ಪು ಶಿಲೀಂಧ್ರ ಸೋಂಕಿನ ಪ್ರಕರಣವೊಂದರ ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸಲಾಗಿದೆ ಎಂದು ತಿಳಿಸಿದ್ದಾರೆ.

## ಚೀನಾದಿಂದ 6,000 ಆಮ್ಲಜನಕ ಸಿಲಿಂಡರ್'ಗಳನ್ನು ಖರೀದಿಸಿದ ದೆಹಲಿ ಸಿಎಂ ಕೇಜ್ರಿವಾಲ್



* ಪ್ರಸ್ತುತ ದೆಹಲಿಯ ಆಡಳಿತ ಪಕ್ಷವಾಗಿರುವ ಅರವಿಂದ ಕೇಜ್ರಿವಾಲ ಅವರ ಸರ್ಕಾರವು ಚೀನಾ ದೇಶದಿಂದ 6,000 ಆಮ್ಲಜನಕ ಸಿಲಿಂಡರ್ ಗಳನ್ನು ಆಮದು ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ, ಈ ಆಕ್ಸಿಜನ್ ಸಿಲಿಂಡರ್'ಗಳನ್ನೂ ಕೋರೋಣ 3ನೇ ಅಲೆಯ ಸಂಧರ್ಭದಲ್ಲಿ ಬಳಕೆ ಮಾಡಿಕೊಳ್ಳಲಾಗುತ್ತದೆ ಎಂದು ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ತಿಳಿಸಿದ್ದಾರೆ.

* ಚೀನಾ ದೇಶದಿಂದ 6,000 ಆಮ್ಲಜನಕ ಸಿಲಿಂಡರ್'ಗಳನ್ನು ವಿಮಾನದಲ್ಲಿ ಆಮದು ಮಾಡಿಕೊಳ್ಳಗಿದೆ, ಇದೀಗ 4,400 ಸಿಲಿಂಡರ್'ಗಳು ಬಂದು ತಲುಪಿವೆ, ಇನ್ನುಳಿದ 1,600 ಸಿಲಿಂಡರ್'ಗಳು ಇನ್ನೆರಡು ದಿನಗಳಲ್ಲಿ ಬರಲಿವೆ ಎಂದು ತಿಳಿಸಿದ್ದಾರೆ, ಚೀನಾದಿಂದ ಬಂದಿರುವ ಸಿಲಿಂಡರ್'ಗಳನ್ನು ಸಂಗ್ರಹಿಸಲು ಮೂರು ಡಿಪೋಗಳನ್ನು ದೆಹಲಿ ಸರ್ಕಾರವು ನಿರ್ಮಿಸಿದೆ ಎಂದು ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಮಾಹಿತಿಯನ್ನು ನೀಡಿದ್ದಾರೆ.

## ಮುಖ್ಯಮಂತ್ರಿಯ ಖಾಸಗಿ ಕಾರ್ಯದರ್ಶಿಗೆ FIH ಅಧ್ಯಕ್ಷರ ಗೌರವ



* ಒಡಿಶಾದ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರ ಖಾಸಗಿ ಕಾರ್ಯದರ್ಶಿಯಾಗಿರುವ IAS ಅಧಿಕಾರಿ ವಿ. ಕಾರ್ತಿಕೇಯನ್ ಪಾಂಡಿಯನ್'ಅವರಿಗೆ ಇತ್ತೀಚಿಗೆ ನಡೆದ FIH'ನ ಕಾಂಗ್ರೆಸ್ ಸಮಾರಂಭದಲ್ಲಿ ಅಂತಾರಾಷ್ಟ್ರೀಯ ಹಾಕಿ ಫೆಡರೇಷನ್(FIH) ಅಧ್ಯಕ್ಷರ ಗೌರವವನ್ನು ನೀಡಿ ಗೌರವಿಸಿದ್ದಾರೆ.

* ವಿ. ಕಾರ್ತಿಕೇಯನ್ ಪಾಂಡಿಯನ್ ಅವರು ಶಾಲಾ ಮತ್ತು ಕಾಲೇಜು ದಿನಗಳಲ್ಲಿ ಕ್ರೀಡಾಪಟು ಆಗಿದ್ದರು, ಇವರು 800 ಮೀ ಮತ್ತು 1500 ಮೀ ಓಟದಲ್ಲಿ ವಿಶ್ವವಿದ್ಯಾಲಯದ ಚಾಂಪಿಯನ್ ಆಗಿದ್ದರು.

* ದೇಶದ ಏಕೈಕ ರಾಜ್ಯ ಒಡಿಶಾ ಈಜು ಮತ್ತು ಹಾಕಿಯಲ್ಲಿ ಉನ್ನತ ಸಾಧನೆ ಮಾಡಿರುವ ರಾಜ್ಯವಾಗಿದೆ ಎಂದು ತಿಳಿಸಿದ್ದಾರೆ.

## ಕಾಂಗೋ ರಾಷ್ಟ್ರದಲ್ಲಿ ಜ್ವಾಲಾಮುಖಿ



* ಕಾಂಗೋ ರಾಷ್ಟ್ರದ ಈಶಾನ್ಯ ಪ್ರಾಂತ್ಯದಲ್ಲಿ ಜ್ವಾಲಾಮುಖಿ ಸಂಭವಿಸಿದ ಇದರಿಂದಾಗಿ ಹಲವು ಜನರು ಸಾವನ್ನಪಿದ್ದಾರೆ 500ಕ್ಕೂ ಹೆಚ್ಚು ಮನೆಗಳು ನಾಶವಾಗಿವೆ, ಪ್ರಸ್ತುತ ಮೌಂಟ್ ಯಿರಾಗೊಂಗೋದಲ್ಲಿ ಜ್ವಾಲಾಮುಖಿ ಉಂಟಾಗುತ್ತಿದ್ದಂತೆಯೇ 5 ಸಾವಿರಕ್ಕೂ ಅಧಿಕ ಜನರನ್ನು ರ್ವಾಂಡಾದ ಗಡಿ ಪ್ರದೇಶಕ್ಕೆ ಸ್ಥಳಾಂತರ ಮಾಡಿದ್ದಾರೆ.

* ಪ್ರಸ್ತುತ ವಿಶ್ವಸಂಸ್ಥೆಯ ಮಕ್ಕಳ ಏಜೆನ್ಸಿ ನೀಡಿರುವ ಮಾಹಿತಿ ಪ್ರಕಾರ ಈ ಜ್ವಾಲಾಮುಖಿಯಿಂದ 25 ಸಾವಿರಕ್ಕಿಂತಲೂ ಅಧಿಕ ಜನರು ಸಂತ್ರಸ್ಥರಾಗಿದ್ದಾರೆ ಇವರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ತಿಳಿಸಿದ್ದಾರೆ.

* ಈ ಹಿಂದೆ 2002ರಲ್ಲಿಯೂ ಕೂಡ ಗೋಮಾ ಪ್ರಾಂತ್ಯದಲ್ಲಿ ಜ್ವಾಲಾಮುಖಿ ಉಂಟಾಗಿತ್ತು ಅವಾಗಲು ನೂರಾರು ಜನರು ಮೃತಪಟ್ಟಿದ್ದರು, ಅದೇ ಸಮಯದಲ್ಲಿ ಒಂದು ಲಕ್ಷಕ್ಕೂ ಅಧಿಕ ಜನರು ಸಂತ್ರಸ್ಥರಾಗಿದ್ದಾರು.

## ಅಂತಾರಾಷ್ಟ್ರೀಯ ಹಾಕಿ ಫೆಡರೇಶನ್ (FIH) ಅಧ್ಯಕ್ಷರಾಗಿ ನರೀಂದರ್ ಬಾತ್ರಾ ಆಯ್ಕೆ




* ಭಾರತದ ನರೀಂದರ್ ಬಾತ್ರಾ ಅಂತಾರಾಷ್ಟ್ರೀಯ ಹಾಕಿ ಫೆಡರೇಶನ್ (FIH) ಅಧ್ಯಕ್ಷರಾಗಿ ಸತತ 2ನೇ ಅವಧಿಗೆ ಆಯ್ಕೆಯಾಗಿದ್ದಾರೆ.

* ಹಾಕಿ ಫೆಡರೇಶನ್ (FIH) ಅಧ್ಯಕ್ಷ ಸ್ಥಾನಕ್ಕೆ ಈ ವರ್ಚುವಲ್ ಚುನಾವಣೆಯನ್ನು ನಡೆಸಲಾಗಿತ್ತು, ಈ ಚುನಾವಣೆಗೆ ಒಟ್ಟು 124 ಸದಸ್ಯ ರಾಷ್ಟ್ರಗಳು ಆನ್‌ಲೈನ್ ಚುನಾವಣೆಯಲ್ಲಿ ಭಾಗಿಯಾಗಿದ್ದವು, ಈ ಚುನಾವಣೆಯಲ್ಲಿ ಬೆಲ್ಜಿಯಂ ಹಾಕಿ ಫೆಡರೇಶನ್ ಅಧ್ಯಕ್ಷ ಮಾರ್ಕ್ ಕೌಡ್ರನ್ ವಿರುದ್ಧ 2 ಮತಗಳಿಂದ ನರೀಂದರ್ ಬಾತ್ರಾ ಅವರು ಜಯ ಸಾಧಿಸಿದ್ದಾರೆ. ಈ ಚುನಾವಣೆಯಲ್ಲಿ ನರೀಂದರ್ ಬಾತ್ರಾ ಅವರು 63 ಮತಗಳು ಹಾಗೂ ಕೌಡ್ರನ್ ಅವರಿಗೆ 61 ಮತಗಳನ್ನೂ ಪಡೆದಿದ್ದಾರೆ.

* ಪ್ರಸ್ತುತ ನರೀಂದರ್ ಬಾತ್ರಾ ಅವರು ಇಂಡಿಯನ್ ಒಲಿಂಪಿಕ್ ಅಸೋಸಿಯೇಶನ್ ಅಧ್ಯಕ್ಷರು ಆಗಿದ್ದಾರೆ, ಮತ್ತು ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಸದಸ್ಯರು ಆಗಿದ್ದಾರೆ, ಬಾತ್ರಾ ಅವರು 2024ರ ತನಕ ಅಧಿಕಾರದಲ್ಲಿ ಇರಲಿದ್ದಾರೆ.

## ಬಿಹಾರದ ಶಾಹಿ ಲಿಚ್ಚಿಯನ್ನು ಯುಕೆಗೆ ರಫ್ತು



* ಭಾರತವು ಮೇ 24, 2021 ರಂದು ವಿಮಾನ ಮಾರ್ಗದ ಮೂಲಕ GI ಪ್ರಮಾಣೀಕರಿಸಿದ ಶಾಹಿ ಲಿಚ್ಚಿಯ ಮೊದಲ ರವಾನೆಯನ್ನು ಬಿಹಾರದಿಂದ ಯುನೈಟೆಡ್ ಕಿಂಗ್‌ಡಮ್‌ಗೆ ರಫ್ತು ಮಾಡಲಾಗಿದೆ.

* ಭೌಗೋಳಿಕ ಸೂಚನೆ (GI) ಟ್ಯಾಗ್ ಗುಣಮಟ್ಟ ಮತ್ತು ವಿಶಿಷ್ಟತೆಯ ಭರವಸೆಯನ್ನು ನೀಡುತ್ತದೆ, ಹಾಗೂ ಮೂಲಭೂತವಾಗಿ ಅದರ ಮೂಲದ ಸ್ಥಳದೊಂದಿಗೆ ಸಂಪರ್ಕ ಹೊಂದಿದೆ, ಇದೇ ತರಹದ ವಸ್ತುಗಳನ್ನು ಮಾರಾಟ ಮಾಡಲು ಬೇರೆ ಯಾವುದೇ ನಿರ್ಮಾಪಕರು ಈ ಹೆಸರನ್ನು ದುರುಪಯೋಗಪಡಿಸಿಕೊಳ್ಳಲು ಅನುಮತಿಯನ್ನು ನೀಡದ ಕಾರಣ ಇದು ಉತ್ಪನ್ನದ ಪ್ರೀಮಿಯಂ ಬೆಲೆಯನ್ನು ಪಡೆಯಲು ಬೆಳೆಗಾರರಿಗೆ ಸಹಾಯ ನೀಡುತ್ತದೆ.

* ನೋಂದಾಯಿತವಾಗಿರುವ GI'ಗಳು (ಜಿಯಾಗ್ರಫಿಕಲ್ ಇಂಡಿಕೇಷನ್): ಡಾರ್ಜಿಲಿಂಗ್ ಚಹಾ, ಕಾಂಗ್ರಾ ವರ್ಣಚಿತ್ರಗಳು, ತಿರುಪತಿ ಲಡ್ಡು, ನಾಗ್ಪುರ ಕಿತ್ತಳೆ ಮತ್ತು ಕಾಶ್ಮೀರ ಪಾಶ್ಮಿನಾ ಈ ಎಲ್ಲವು ಭಾರತದಲ್ಲಿ ನೋಂದಾಯಿತ GI'ಗಳಾಗಿವೆ.

* 2018ರಲ್ಲಿ GI'ಟ್ಯಾಗ್ ಪಡೆದ ಶಾಹಿ ಲಿಚ್ಚಿ ಬಿಹಾರದ ಕೃಷಿ ಉತ್ಪನ್ನವಾಗಿದೆ, ಪ್ರಸ್ತುತ ಇದು ಬಿಹಾರದಿಂದ GI ಪ್ರಮಾಣೀಕರಣ ಪಡೆದ 4ನೇ ಕೃಷಿ ಬೆಳೆಯಾಗಿದೆ (ಉತ್ಪನ್ನ), ಇನ್ನುಳಿದ ಬಿಹಾರದಿಂದ 3 ಉತ್ಪನ್ನಗಳು ಮಗಹಿ ಪಾನ್, ಜರ್ದಲು ಮಾವು ಮತ್ತು ಕಟರ್ನಿ ಅಕ್ಕಿಗಳಾಗಿವೆ.

* ಪ್ರಸ್ತುತ ಭಾರತದಲ್ಲಿನ ಬಿಹಾರ್ ರಾಜ್ಯವು ಲಿಚಿ ಉತ್ಪಾದನೆಯಲ್ಲಿ ಅಗ್ರಸ್ಥಾನದಲ್ಲಿದೆ, ಬಿಹಾರದ ರಾಜ್ಯದಲ್ಲಿನ ಪ್ರದೇಶವು ಈ ಬೆಳೆಯನ್ನು ಅನುಕೂಲಕರ ವಾತಾವರಣವನ್ನು ಹೊಂದಿದೆ.

* ಪ್ರಸ್ತುತ ಬಿಹಾರದ ವೈಶಿ, ಮುಜಾಫರ್ಪುರ್, ಚಂಪಾರನ್, ಸಮಸ್ತಿಪುರ, ಬೆಗುಸರಾಯ್ ಹಾಗೂ ಇದರ ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಲಿಚ್ಚಿಯನ್ನು ಉತ್ಪಾದಿಸಲಾಗುತ್ತದೆ, ಇದೀಗ ಭಾರತವು 2ನೇ ಸ್ಥಾನದಲ್ಲಿದೆ, ಮತ್ತು ಚೀನಾ ದೇಶವು ಪ್ರಥಮ ಸ್ಥಾನದಲ್ಲಿದೆ.

# 26-05-2021

## CBI ನೂತನ ಮುಖ್ಯಸ್ಥರಾಗಿ ಸುಭೋಷ್ ಕುಮಾರ್ ಜೈಸ್ವಾಲ್ ನೇಮಕ



* ಪ್ರಸ್ತುತ ಮಹಾರಾಷ್ಟ್ರದ ಐಪಿಎಸ್ ಅಧಿಕಾರಿ ಸುಬೋಧ್ ಕುಮಾರ್ ಜೈಸ್ವಾಲ್ ಅವರನ್ನು ಸಿಬಿಐ (CBI) ನಿರ್ದೇಶಕರಾಗಿ ನೇಮಕ ಮಾಡಲಾಗಿದೆ.

* ಈ ಮೊದಲು ಸುಬೋಧ್ ಕುಮಾರ್ ಜೈಸ್ವಾಲ್ ಅವರು ಕೇಂದ್ರ ಕೈಗಾರಿಕಾ ಭದ್ರತಾ ಪಡೆಯ (CISF) ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದರು, ಜೈಸ್ವಾಲ್ ಅವರನ್ನು ಸಿಬಿಐ (CBI) ನಿರ್ದೇಶಕರಾಗಿ ನೇಮಕ ಮಾಡಲು ಪ್ರಧಾನಿ ನರೇಂದ್ರ ಮೋದಿ, ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಎಸ್.ವಿ. ರಮಣ ಅವರ ತಂಡವು ಅನುಮೋದನೆ ನೀಡಿದೆ.

* 2021ರ ಫೆಬ್ರವರಿ. 2 ರಿಂದ ಆರ್.ಕೆ. ಶುಕ್ಲಾ ಅವರು ಸಿಬಿಐ(CBI)ನಿರ್ದೇಶಕ ಹುದ್ದೆಯಿಂದ ನಿವೃತ್ತಿಯಾದ ನಂತರ ಇದೀಗ ಈ ಹುದ್ದೆಗೆ ಸುಬೋಧ್ ಕುಮಾರ್ ಜೈಸ್ವಾಲ್ ಅವರನ್ನು ನೇಮಕ ಮಾಡಲಾಗಿದೆ, ಪ್ರಸ್ತುತ ಈ ಹುದ್ದೆಗೆ 109 ಅಧಿಕಾರಿಗಳ ಹೆಸರನ್ನು ಪರಿಗಣಿಸಲಾಗಿತ್ತು ಅವರಲ್ಲಿ 3 ಅಧಿಕಾರಿಗಳ ಹೆಸರನ್ನು ಸಮಿತಿ ಆಯ್ಕೆ ಮಾಡಿತ್ತು ಅದರಲ್ಲಿ ಅಂತಿಮವಾಗಿ ಸುಬೋಧ್ ಕುಮಾರ್ ಜೈಸ್ವಾಲ್ ಅವರ ಹೆಸರನ್ನು ಮುಂಬರುವ 2 ವರ್ಷಗಳ ಅವಧಿಗೆ ಸಿಬಿಐ ನಿರ್ದೇಶಕ ಹುದ್ದೆಗೆ ಆಯ್ಕೆ ಮಾಡಲಾಗಿದೆ.

## ಸಪ್ನಾ ಬುಕ್ ಹೌಸ್ ಸಂಸ್ಥಾಪಕ ಸುರೇಶ್ ಶಾ ನಿಧನ



* ಪ್ರಸ್ತುತ ಭಾರತದ ಅತಿದೊಡ್ಡ ಪುಸ್ತಕ ಮಳಿಗೆಯಾಗಿರುವ ಸಪ್ನಾ ಬುಕ್ ಹೌಸ್ ಸಂಸ್ಥಾಪಕ ಸುರೇಶ್ ಶಾ ಅವರು ತಮ್ಮ 84ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ.

* 1966ರಲ್ಲಿ ಪ್ರಥಮ ಬಾರಿಗೆ ಬೆಂಗಳೂರಿನಲ್ಲಿ ಸಣ್ಣದಾದ ಸಪ್ನಾ ಬುಕ್ ಹೌಸ್ ಸುರೇಶ್ ಶಾ ಅವರು ಪ್ರಾರಂಭಿಸಿದ್ದರು, ಇದೀಗ ಆ ಪುಸ್ತಕ ಮಳಿಗೆಯು ಭಾರತದ ಅತಿದೊಡ್ಡ ಪುಸ್ತಕ ಮಳಿಗೆ ಎಂದು ಹೆಸರು ವಾಸಿಯಾಗಿದೆ, ಪ್ರಸ್ತುತ ಸಪ್ನಾ ಬುಕ್ ಹೌಸ್ 19 ಶಾಖೆಗಳನ್ನು ಹೊಂದಿದೆ.

## 'ಬುದ್ಧ ಪೂರ್ಣಿಮೆ' ಆಚರಣೆ



* ಕ್ರಿ.ಪೂ. 623ರಲ್ಲಿ ಭಗವಾನ್ ಗೌತಮ ಬುದ್ಧ ಜನಿಸಿದ ಈ ದಿನವನ್ನು ಬುದ್ಧ ಪೂರ್ಣಿಮೆ ಎಂದು ಆಚರಿಸಲಾಗುತ್ತದೆ. ಪ್ರತಿ ವರ್ಷ ಮೇ ನಲ್ಲಿ ಬರುವ ಹುಣ್ಣಿಮೆ ದಿನ ಬುದ್ಧನ ಜನ್ಮದಿನ ಮಾತ್ರವಲ್ಲದೆ ಜ್ಞಾನೋದಯವಾದ ದಿನ ಕೂಡ ಆಗಿದೆ. ಬೌದ್ಧ ಧರ್ಮೀಯರು ಬುದ್ಧ ಪೂರ್ಣಿಮೆಯ ಈ ದಿನವನ್ನು ಪವಿತ್ರ ದಿನವಾಗಿ ಆಚರಿಸುತ್ತಾರೆ. ಜೊತೆಗೆ ವಿಶ್ವ ಸಂಸ್ಥೆ ಈ ದಿನವನ್ನು ಅಂತರರಾಷ್ಟ್ರೀಯ 'ವೆಸಾಕ್' ದಿನವೆಂದು ಘೋಷಿಸಿದೆ.

* ಬುದ್ಧ ಪೂರ್ಣಿಮೆಯ ಆಚರಣೆಯು ಭಾರತ, ಶ್ರೀಲಂಕಾ, ಚೀನಾ ಸೇರಿದಂತೆ ಹಲವಾರು ರಾಷ್ಟ್ರಗಳಲ್ಲಿ ಆಚರಿಸಲಾಗುತ್ತದೆ.

## ಮಾಲಿ ಮಿಲಿಟರಿ ದಂಗೆ ಅಧ್ಯಕ್ಷ, ಪ್ರಧಾನಿಯನ್ನು ಬಂಧಿಸಿದ ಸೇನೆ



* ವಿಶ್ವಸಂಸ್ಥೆ ಮತ್ತು ಆಫ್ರಿಕನ್ ಯೂನಿಯನ್ ನೀಡಿರುವ ಮಾಹಿತಿ ಪ್ರಕಾರ ಪಶ್ಚಿಮ ಆಫ್ರಿಕದ ದೇಶ ಮಾಲಿಯ ಸೈನಿಕರು ಮಧ್ಯಂತರ ಸರಕಾರದ ಅಧ್ಯಕ್ಷ ಮತ್ತು ಪ್ರಧಾನಿಯನ್ನು ಬಂಧಿಸಿರುವುದಾಗಿ ತಿಳಿಸಲಾಗಿದೆ. 9 ತಿಂಗಳ ಹಿಂದೆ ನಡೆದ ದಂಗೆಯಲ್ಲಿ ಅಧಿಕಾರವನ್ನು ವಶಪಡಿಸಿಕೊಂಡಿರುವ ಸೇನೆಯ ಇಬ್ಬರು ಸದಸ್ಯರನ್ನು ಸರ್ಕಾರದ ಪುನರ್‌ರಚನೆಯ ಸಮಯದಲ್ಲಿ ಕೈ ಬಿಡಲಾಗಿತ್ತು ಇದಾದ ಕೆಲವೇ ಗಂಟೆಗಳಲ್ಲಿ ದಂಗೆಕೋರ ಮಿಲಿಟರಿ ಪಡೆಯು ಮಾಲಿಯ ಅಧ್ಯಕ್ಷ

ಹಾಗೂ ಪ್ರಧಾನಿಯನ್ನು ಬಂಧನಕ್ಕೆ ಒಳಪಡಿಸಿದೆ ಎಂದು ತಿಳಿದು ಬಂದಿದೆ.

* ಪ್ರಸ್ತುತ ಬಂಧನಕ್ಕೆ ಒಳಪಡಿಸಿದ ಮಾಲಿ ಅಧ್ಯಕ್ಷ ಬಹ್ ಎನ್ಡಾವ್ ಮತ್ತು ಪ್ರಧಾನಿಯಾಗಿರುವ ಮೊಕ್ಟರ್ ಓವಾನೆ ಅವರನ್ನು ಕಾಟಿಯ ಮಿಲಿಟರಿ ಪ್ರಧಾನ ಕಚೇರಿಗೆ ಕರೆದು ಕೊಂಡುಹೋಗಲಾಗಿದೆ, ಪ್ರಸ್ತುತ ಇದರ ವಿರುದ್ಧ ದಂಗೆ ಎದ್ದಿರುವ ಮಿಲಿಟರಿಯ ಈ ಕ್ರಮವನ್ನು ಖಂಡಿಸಿರುವ ಆಫ್ರಿಕನ್ ಒಕ್ಕೂಟ ಹಾಗೂ ವಿಶ್ವಸಂಸ್ಥೆಯು ಇಬ್ಬರನ್ನು ಬಿಡುಗಡೆ ಮಾಡಬೇಕೆಂದು ತಿಳಿಸಿವೆ.

## ಕರ್ನಾಟಕ ಸೇರಿ ಇತರ 7 ರಾಜ್ಯಗಳಲ್ಲಿ ಒಟ್ಟು 143 ಖೇಲೊ ಇಂಡಿಯಾ ಕೇಂದ್ರಗಳನ್ನು ಸ್ಥಾಪನೆ

* ಕೇಂದ್ರ ಕ್ರೀಡಾ ಇಲಾಖೆಯು ಕರ್ನಾಟಕ ಹಾಗೂ ಇತರೆ 7 ರಾಜ್ಯಗಳಲ್ಲಿ ಒಟ್ಟು 143 ಖೇಲೊ ಇಂಡಿಯಾ ಕೇಂದ್ರಗಳನ್ನು ಸ್ಥಾಪಿಸಲು ನಿರ್ಧಾರ ಮಾಡಿದೆ, ಈ ಕೇಂದ್ರಗಳಿಗಾಗಿ ಸುಮಾರು 14.30 ಕೋಟಿ ವೆಚ್ಚ ತಗುಲಲಿದೆ ಎಂದು ಕೇಂದ್ರ ಕ್ರೀಡಾ ಇಲಾಖೆ ತಿಳಿಸಿದೆ.

* ಕರ್ನಾಟಕ ರಾಜ್ಯದಲ್ಲಿ 31 ಜಿಲ್ಲೆಗಳಲ್ಲೂ ಖೇಲೊ ಇಂಡಿಯಾ ಕೇಂದ್ರಗಳು ಸ್ಥಾಪನೆಯಾಗಲಿವೆ, ಪ್ರಸ್ತುತ ರಾಜ್ಯಗಲ್ಲಿ ಕ್ರೀಡಾ ಸೌಲಭ್ಯಗಳನ್ನು ಹೆಚ್ಚಿಸುವ ಉದ್ದೇಶದಿಂದಾಗಿ ಈ ಕೇಂದ್ರಗಳನ್ನು ಸ್ಥಾಪನೆ ಮಾಡಲಾಗುತ್ತಿದೆ, ಮಹಾರಾಷ್ಟ್ರ, ಮಿಜೋರಾಂ, ಗೋವಾ, ಮಧ್ಯಪ್ರದೇಶ, ಅರುಣಾಚಲಪ್ರದೇಶ ಮತ್ತು ಮಣಿಪುರ ಈ ರಾಜ್ಯಗಳು ಖೇಲೊ ಇಂಡಿಯಾ ಕೇಂದ್ರಗಳುನ್ನು ಸ್ಥಾಪನೆ ಮಾಡಲು ಆಯ್ಕೆಯಾಗಿವೆ, ಈ ಎಲ್ಲ ರಾಜ್ಯಗಳ ಪ್ರತಿ ಕೇಂದ್ರಗಳಲ್ಲಿ ಒಂದು ಕ್ರೀಡೆಯಲ್ಲಿ ವಿಶೇಷವಾಗಿ ತರಬೇತಿ ನೀಡಲು ತೀರ್ಮಾನಿಸಲಾಗಿದೆ ಎಂದು ಕೇಂದ್ರ ಕ್ರೀಡಾ ಇಲಾಖೆಯು ತಿಳಿಸಿದೆ.

* ಈ ಖೇಲೊ ಇಂಡಿಯಾ ಕೇಂದ್ರಗಳುನ್ನು ಸ್ಥಾಪನೆಯಿಂದಾಗಿ 2028ರ ಒಲಿಂಪಿಕ್ಸ್'ನ ಕ್ರಿಡಾ ಕ್ಷೇತ್ರದಲ್ಲಿ ಭಾರತವು ಪ್ರಮುಖವಾಗಿ 10 ರಾಷ್ಟ್ರಗಳ ಪಟ್ಟಿಯಲ್ಲಿ ಇರಬೇಕೆಂಬುವದು ಭಾರತ ಸರ್ಕಾರದ ಉದ್ದೇಶವಾಗಿದೆ, ಎಂದು ಕ್ರೀಡಾ ಸಚಿವ ಕಿರಣ್ ರಿಜಿಜು ಅವರು ತಿಳಿಸಿದ್ದಾರೆ.

* ಈ ಹಿಂದೆ 2020ರ ಜೂನ್‌ನಲ್ಲಿ ಕ್ರೀಡಾ ಇಲಾಖೆಯು ದೇಶದ ಪ್ರತಿ ಜಿಲ್ಲೆಯಲ್ಲಿ ಕನಿಷ್ಠ ಪಕ್ಷ ಒಂದು ಖೇಲೊ ಇಂಡಿಯಾ ಕೇಂದ್ರ ಸ್ಥಾಪನೆ ಮಾಡುವ ಉದ್ದೇಶವಿದೆ ಮುಂದಿನ 4ವರ್ಷಗಳಲ್ಲಿ 1000 ಕೇಂದ್ರಗಳನ್ನು ಸ್ಥಾಪನೆ ಮಾಡಲಾಗುವದು ಎಂದು ತಿಳಿಸಿತ್ತು.

* ಹಲವು ರಾಜ್ಯಗಳಲ್ಲಿ ಇದೀಗ 217 ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ, ಈಶಾನ್ಯ ರಾಜ್ಯಗಳಾಗಿರುವ ಜಮ್ಮು ಮತ್ತು ಕಾಶ್ಮೀರ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪ, ಲಕ್ಷದ್ವೀಪ, ಲಡಾಖ್'ನ ಪ್ರತಿ ಜಿಲ್ಲೆಯಲ್ಲಿ ಎರಡು ಕೇಂದ್ರಗಳ ಸ್ಥಾಪನೆ ಮಾಡಲಾಗಿದೆ ಎಂದು ಕ್ರೀಡಾ ಇಲಾಖೆಯು ತಿಳಿಸಿದೆ.

* ಸ್ಥಾಪನೆಯಾಗುತ್ತಿರುವ ಪ್ರತಿಯೊಂದು ಖೇಲೋ ಇಂಡಿಯಾ ಕೇಂದ್ರಗಳಲ್ಲಿ ಕ್ರೀಡೆಗಳಲ್ಲಿ ಸಾಧನೆ ಮಾಡಿರುವವರನ್ನು ಕೋಚ್ ನೇಮಕ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಖೇಲೊ ಇಂಡಿಯಾ ಯೋಜನೆಯ ಹಿರಿಯ ನಿರ್ದೇಶಕ ಸತ್ಯನಾರಾಯಣ ಮೀನಾ ಅವರು ತಿಳಿಸಿದ್ದಾರೆ.

## ಡೇವಿಡ್ ಬಾರ್ನಿಯಾ ಇಸ್ರೇಲ್'ನ ಮೊಸಾದ್ ಗೂಢಚರ್ಯೆ ಮುಖ್ಯಸ್ಥರಾಗಿ ಆಯ್ಕೆ



* ಪ್ರಸ್ತುತ ಡೇವಿಡ್ ಬಾರ್ನಿಯಾ ಅವರನ್ನು ಇಸ್ರೇಲ್'ನ ಮೊಸಾದ್ ಗೂಢಚರ್ಯೆ ಏಜೆನ್ಸಿಯ ಮುಖ್ಯಸ್ಥರಾಗಿ ಆಯ್ಕೆ ಮಾಡಲಾಗಿದೆ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

* 56 ವರ್ಷ ವಯಸ್ಸಿನ ಡೇವಿಡ್ ಬಾರ್ನಿಯಾ ಅವರು 2 ವರ್ಷಗಳಿಂದ ಇಸ್ರೇಲ್'ನ ಮೊಸಾದ್ ಗೂಢಚರ್ಯೆ ಏಜೆನ್ಸಿಯ ಉಪ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದರು, ಡೇವಿಡ್ ಬಾರ್ನಿಯಾ ಅವರು ಇರಾನ್ ಹಾಗೂ ಲೆಬನಾನ್'ನ ಹಿಜ್ಬೊಲ್ಲಾ ಉಗ್ರಗಾಮಿ ಗುಂಪಿನ ವಿರುದ್ಧ ಕಾರ್ಯ ನಿರ್ವಹಿಸುವ ಏಜೆಂಟರನ್ನು ನೇಮಕ ಮಾಡಿಕೊಳ್ಳುವಲ್ಲಿ ಉತ್ತಮವಾದ ಅನುಭವವನ್ನು ಹೊಂದಿದ್ದಾರೆ ಎಂದು ಇಸ್ರೇಲ್'ನ ಸುದ್ದಿವಾಹಿನಿಗಳು ವರದಿಯನ್ನು ನೀಡಿವೆ.

* ಆದಾಗ್ಯೂ, ಅಟಾರ್ನಿ ಜನರಲ್ ಅವಿಚೈ ಮ್ಯಾಂಡೆಲ್‌ಬ್ಲಿಟ್ ಅವರು ಕೆಲವು ತಿಂಗಳಿನ ಹಿಂದೆ ಇಸ್ರೇಲ್'ನ ಮೊಸಾದ್ ಮುಖ್ಯಸ್ಥರ ನೇಮಕ ಮಾಡುವದನ್ನು ನಿಲ್ಲಿಸಿದ್ದರು.

* ಡೇವಿಡ್ ಬಾರ್ನಿಯಾ ಅವರು 1996ರಲ್ಲಿ ಕೇಸ್ ಆಫೀಸರ್ ಆಗಿ ಸೇವೆ ಸಲ್ಲಿಸಿದ್ದಾರೆ ಇವರು ಮೊಸಾದ್'ಗೆ ಸೇರಿದವರಾಗಿದ್ದರೆ, ಮೊಸಾದ್'ನ ಪ್ರಮುಖ ಗುರಿಗಳಾಗಿರುವ ಇರಾನ್ ಮತ್ತು ಹಿಜ್ಬುಲ್ಲಾ ವಿರುದ್ಧ ಆಪರೇಟಿವ್‌ಗಳನ್ನು ಸೇರ್ಪಡೆಗೊಳಿಸುವ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ ಎಂದು ಇಸ್ರೇಲ್'ನ ಹಾರೆಟ್ಜ್ ಪತ್ರಿಕೆಯು ಮಾಹಿತಿಯನ್ನು ತಿಳಿಸಿದೆ.

## ಕುವೈತ್‌ನಿಂದ ಮಂಗಳೂರು ಬಂದರಿಗೆ 190 MT ಆಕ್ಸಿಜನ್ ಆಗಮನ



* ಪ್ರಸ್ತುತ ಭಾರತದಲ್ಲಿನ ಕೋವಿಡ್ 19 ಪರಿಸ್ಥಿತಿ ಸುಧಾರಿಸಲು ಭಾರತೀಯ ನೌಕಾಸೇನೆಯ ಯುದ್ಧ ನೌಕೆ INS ಶಾರ್ದೂಲ್ ನೌಕೆಯು

ಇದೀಗ ಕುವೈತ್‌ನಿಂದ ಮತ್ತೆ ಆಕ್ಸಿಜನ್ ಹಾಗೂ ವ್ಯದ್ಯಕೀಯ ಉಪಕರಣಗಳನ್ನು ಹೊತ್ತು ನವ ಮಂಗಳೂರು ಬಂದರಿಗೆ ಬಂದು ತಲುಪಿದೆ ಎಂದು ADGP ಪ್ರತಾಪ್ ರೆಡ್ಡಿ ಮತ್ತು ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಡಾ.ಕೆ.ವಿ ರಾಜೇಂದ್ರ, ಮಂಗಳೂರು ನಗರ ಪೊಲೀಸ್ ಕಮೀಷನರ್ ಎನ್.ಶಶಿಕುಮಾರ್ ತಿಳಿಸಿದರು.

* ಭಾರತೀಯ ನೌಕಾ ಸೇನೆಯ INS ಶಾರ್ದೂಲ್ ಸುಮಾರು 190 ಮೆಟ್ರಿಕ್ ಟನ್ (MT) ಆಕ್ಸಿಜನ್ ಹೊತ್ತು ತಂದಿದೆ, ಈ ನೌಕೆಯಲ್ಲಿ 2ಲಿಕ್ವಿಡ್ ಆಕ್ಸಿಜನ್ ಟ್ಯಾಂಕರ್ ಮತ್ತು 2 ಸೆಮಿ ಲಿಕ್ವಿಡ್, 1200 ಆಕ್ಸಿಜನ್ ಸಿಲಿಂಡರ್‌ಗಳು ಇದ್ದವು ಎಂದು ತಿಳಿದು ಬಂದಿದೆ, ಭಾರತಕ್ಕೆ ಕುವೈತ್ ಮತ್ತು ಫುರ್ಖಿ ದೇಶದಿಂದ ಆಕ್ಸಿಜನ್ ನೆರವು ನೀಡಿವೆ.

* ಅರಬ್ ರಾಷ್ಟ್ರಗಳಿಂದ ಸತತವಾಗಿ ಮಂಗಳೂರಿಗೆ ಬಂದಿರುವ 5ನೇ ಭಾರತೀಯ ನೌಕಾ ಸೇನೆಯ ಯುದ್ಧ ನೌಕೆ ಇದಾಗಿದೆ, ಈ ರೀತಿ ಸಂಗ್ರಹಿಸಿರುವ ಆಕ್ಸಿಜನ್ ಸಿಲಿಂಡರ್‌ಗಳನ್ನು ರಾಜ್ಯ ಸರ್ಕಾರದ ಆದೇಶದ ಮೇರೆಗೆ ಅವಶ್ಯಕತೆ ಇರುವ ಜಿಲ್ಲೆಗಳಿಗೆ ನೀಡಲಾಗುತ್ತದೆ ಎಂದು ತಿಳಿಸಲಾಗಿದೆ.

### ಕೋವಿಡ್ 19 ಲಸಿಕೆ ಪಡೆದ ವಿಶ್ವದ ಮೊದಲ ವ್ಯಕ್ತಿ ನಿಧನ



* ಕೋವಿಡ್ 19 ಸಾಂಕ್ರಾಮಿಕ ರೋಗಕ್ಕೆ ಲಸಿಕೆ ಪಡೆದಿರುವ ವಿಶ್ವದ ಮೊದಲ ವ್ಯಕ್ತಿಯಾಗಿರುವ ವಿಲಿಯಂ ಷೇಕ್ಸ್‌ಪಿಯರ್ ಅವರು ತಮ್ಮ 81ನೇ ವಯಸ್ಸಿನಲ್ಲಿ ಆರೋಗ್ಯದ ಕಾರಣಗಳಿಂದ ಸಾವನ್ನಪ್ಪಿದ್ದಾರೆ ಎಂದು ಬ್ರಿಟಿಷ್ ಸುದ್ದಿವಾಹಿನಿಗಳು ಮಾಹಿತಿಯನ್ನು ನೀಡಿವೆ.

* ವಿಲಿಯಂ ಷೇಕ್ಸ್‌ಪಿಯರ್ ಅವರು ಫೈಜರ್ ಬಯೋಟೆಕ್;ನ ಲಸಿಕೆಯನ್ನು ಪಡೆದ ವಿಶ್ವದ ಮೊದಲ ವ್ಯಕ್ತಿ ಇವರಾಗಿದ್ದಾರೆ.

* ಈ ವಿಲಿಯಂ ಷೇಕ್ಸ್‌ಪಿಯರ್ ಅವರು ಕಳೆದ ವರ್ಷದ ಡಿಸೆಂಬರ್. 8ರಂದು ಕೊರೊನಾ ವೈರಸ್ ಸಾಂಕ್ರಾಮಿಕ ರೋಗದ ವಿರುದ್ಧ ಹೋರಾಡಲು ಲಸಿಕೆ ಪಡೆದಿದ್ದರು.

## 27-05-2021

### 20 ಕೋಟಿ ಡೋಸ್ ಲಸಿಕೆ ವಿತರಿಸಿದ 2ನೇ ದೇಶ ಭಾರತ




* ಪ್ರಸ್ತುತ ಕೋವಿಡ್ 19 ಪರಿಸ್ಥಿತಿಯಲ್ಲಿ 20 ಕೋಟಿ ಡೋಸ್ ಲಸಿಕೆ ವಿತರಿಸಿದ 2ನೇ ರಾಷ್ಟ್ರ ಭಾರತವಾಗಿದೆ ಹಾಗೂ ಮೊದಲನೇ ರಾಷ್ಟ್ರ ಅಮೇರಿಕವಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯವು ತಿಳಿಸಿದೆ.

* ಪ್ರಸ್ತುತ ಅಮೇರಿಕ ದೇಶವು 124 ದಿನಗಳಲ್ಲಿ 20 ಕೋಟಿ ಡೋಸ್ ಲಸಿಕೆ ವಿತರಣೆ ಮಾಡಿದೆ ಮತ್ತು ಭಾರತವು 130 ದಿನಗಳಲ್ಲಿ 20 ಕೋಟಿ ಡೋಸ್ ಲಸಿಕೆ ವಿತರಣೆ ಮಾಡಿದೆ ಎಂದು ಆರೋಗ್ಯ ಸಚಿವಾಲಯ ಮಾಹಿತಿ ನೀಡಿದೆ.

* ಇತರೆ ದೇಶಗಳು ಅಂದರೆ ಬ್ರಿಟನ್ 168 ದಿನಗಳಲ್ಲಿ 5.1 ಕೋಟಿ ಡೋಸ್ ಲಸಿಕೆ ನೀಡಿದೆ, ಮತ್ತು ಬ್ರೆಜಿಲ್ ದೇಶವು 128 ದಿನಗಳಲ್ಲಿ 5.9 ಕೋಟಿ ಡೋಸ್ ಹಾಗೂ ಜರ್ಮನಿ 149 ದಿನಗಳಲ್ಲಿ 4.9 ಕೋಟಿ ಡೋಸ್ ಲಸಿಕೆಯನ್ನು ವಿತರಣೆ ಮಾಡಿದೆ.

* ಜನವರಿ. 16ರಂದು ಭಾರತೀಯ ಪ್ರಧಾನಿ ನರೇಂದ್ರ ಮೋದಿ ಅವರು ಭಾರತದಲ್ಲಿ ಲಸಿಕಾ ಅಭಿಯಾನಕ್ಕೆ ಚಾಲನೆ ನೀಡಿದರು.

* ಪ್ರಸ್ತುತ ಭಾರತದಲ್ಲಿ ಕೋವಿಶೀಲ್ಡ್ ಮತ್ತು ಕೋವಾಕ್ಸಿನ್ ಮತ್ತು ತುರ್ತು ಬಳಕೆಗೆ ಭಾರತದ ಔಷಧ ನಿಯಂತ್ರಕದಿಂದ ಅನುಮೋದನೆ ನೀಡಿದೆ ಅದರ ಜೊತೆಯಲ್ಲಿ ರಷ್ಯಾ ದೇಶದ ಸ್ಪುಟ್ನಿಕ್ ವಿ ಲಸಿಕೆಯನ್ನು ತುರ್ತು ಬಳಕೆ ಮಾಡಲು ಅನುಮತಿ ದೊರೆತಿದೆ.

### ಭಾರತೀಯ ಅರ್ಥಶಾಸ್ತ್ರಜ್ಞ ಅಮರ್ತ್ಯ ಕುಮಾರ್ ಸೇನ್ ಅವರಿಗೆ ಸ್ಪೇನ್'ನ ಸಾಮಾಜಿಕ ವಿಜ್ಞಾನ ಪ್ರಶಸ್ತಿ



* ನೊಬೆಲ್ ಪ್ರಶಸ್ತಿ ಪಡೆದಿರುವ ಭಾರತೀಯ ಅರ್ಥಶಾಸ್ತ್ರಜ್ಞರಾಗಿರುವ ಅಮರ್ತ್ಯ ಕುಮಾರ್ ಸೇನ್ ಅವರಿಗೆ ಸಾಮಾಜಿಕ ವಿಜ್ಞಾನ ವಿಭಾಗದಲ್ಲಿ ಸ್ಪೇನ್‌ನ ಅಗ್ರ ರಾಜಕುಮಾರಿ ಆಫ್ ಅಸ್ಟೂರಿಯಸ್ ಪ್ರಶಸ್ತಿ ಲಭಿಸಿದೆ ಎಂದು ಸ್ಪ್ಯಾನಿಷ್ ಬಹುಮಾನ ಪ್ರತಿಷ್ಠಾನ ಪ್ರಕಟಣೆಯಲ್ಲಿ ಮಾಹಿತಿಯನ್ನು ನೀಡಿದೆ.

* ಪ್ರಸ್ತುತ ಈ ಸ್ಪೇನ್'ನ ಸಾಮಾಜಿಕ ವಿಜ್ಞಾನ ಪ್ರಶಸ್ತಿಗಾಗಿ 20 ದೇಶಗಳ 41 ಅಭ್ಯರ್ಥಿಗಳು ಭಾಗವಹಿಸಿದ್ದರು, ಅವರಲ್ಲಿ ಈ ಪ್ರಶಸ್ತಿಗೆ 87 ವರ್ಷ ವಯಸ್ಸಿನ ಅಮರ್ತ್ಯ ಕುಮಾರ್ ಸೇನ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಪ್ರಿನ್ಸೆಸ್ ಆಫ್ ಅಸ್ಟೂರಿಯಸ್ ಫೌಂಡೇಶನ್ ಸುದ್ದಿ ವಾಹಿನಿಯಲ್ಲಿ ವಿವರಣೆಯನ್ನು ನೀಡಿದೆ.

* ಈ ಪ್ರಶಸ್ತಿ 50 ಸಾವಿರ ಯುರೋಗಳ ನಗದು ಬಹುಮಾನ, ಜೋನ್ ಮಿರೊ ಶಿಲ್ಪವನ್ನು ಒಳಗೊಂಡಿರುತ್ತದೆ ಪ್ರಸ್ತುತ ಈ ಪ್ರಶಸ್ತಿಯನ್ನು ಕೋವಿಡ್ 19 ಸಾಂಕ್ರಾಮಿಕ ರೋಗದ ಕಾರಣದಿಂದಾಗಿ ವೀಡಿಯೊ ಕಾನ್ಫರೆನ್ಸ್ ಮೂಲಕ ಪ್ರಶಸ್ತಿಯನ್ನು ಘೋಷಣೆ ಮಾಡಿದ್ದಾರೆ.

* ಅಮರ್ತ್ಯ ಕುಮಾರ್ ಸೇನ್ ಅವರ ಈ ಪ್ರಸಿದ್ಧ ಕೃತಿಯಲ್ಲಿ ಬಡತನ ಹಾಗೂ ಅದರ ಕ್ಷಾಮಗಳು, ಮತ್ತು ಹಸಿವು ಆಹಾರದ ಕೊರತೆಯ ಪರಿಣಾಮ ಅಲ್ಲ ಆದರೆ ಅದರ ವಿತರಣೆಯ ಕಾರ್ಯವಿಧಾನಗಳಲ್ಲಿನ ಅಸಮಾನತೆಗಳು ಇವೆ ಎಂದು ಆನ್ ಎಂಟೈಟಲ್ಮೆಂಟ್ ಅಂಡ್ ಡಿಪ್ರಿವೇಷನ್ನಲ್ಲಿ ತೋರಿಸಿ ಕೊಟ್ಟಿದ್ದರು.

* 1998ರಲ್ಲಿ ಅಮರ್ತ್ಯ ಸೇನ ಅವರಿಗೆ ಅರ್ಥಶಾಸ್ತ್ರ ವಿಭಾಗದಲ್ಲಿ ನೊಬೆಲ್ ಪ್ರಶಸ್ತಿ ಲಭಿಸಿತ್ತು.

## ಕೋವಿಡ್ ನಿಂದ ಮೃತಪಟ್ಟ ಪತ್ರಕರ್ತರ ಕುಟುಂಬಕ್ಕೆ 10 ಲಕ್ಷ ಪರಿಹಾರ ಘೋಷಿಸಿದ ತಮಿಳುನಾಡು



* ಪ್ರಸ್ತುತ ತಮಿಳುನಾಡು ಸರ್ಕಾರವು ಕೋವಿಡ್ 19 ಸಾಂಕ್ರಾಮಿಕ ರೋಗದಿಂದ ಸಾವನ್ನಪಿದ ಪತ್ರಕರ್ತರ ಕುಟುಂಬಕ್ಕೆ 10 ಲಕ್ಷ ರೂಪಾಯಿ ಪರಿಹಾರ ಧನ ನೀಡಲಾಗುತ್ತದೆ ಎಂದು ಘೋಷಣೆ ಮಾಡಿದೆ, ಈ ಹಿಂದೆ ಕೋವಿಡ್ 19ನಿಂದ ಮೃತಪಟ್ಟ ಪತ್ರಕರ್ತರ ಕುಟುಂಬಕ್ಕೆ ಇಲ್ಲಿಯವರೆಗೆ ತಮಿಳುನಾಡು ರಾಜ್ಯದಲ್ಲಿ 5 ಲಕ್ಷ ರೂ.ಪರಿಹಾರ ಧನ ನೀಡಲಾಗುತ್ತಿತ್ತು, ಇದೀಗ ಅದನ್ನು10 ಲಕ್ಷ ನೀಡಲಾಗುತ್ತದೆ ಎಂದು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ನೇತೃತ್ವದ ಸರ್ಕಾರವು ಘೋಷಿಸಿದೆ.

## ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ನಿಧನ



* ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿರುವ ಎಚ್.ಎಸ್.ದೊರೆಸ್ವಾಮಿ ಅವರು ತಮ್ಮ 104ನೇ ವರ್ಷ ವಯಸ್ಸಿನಲ್ಲಿ ವಿಧಿವಶರಾಗಿದ್ದಾರೆ.

* ಹಾರೊಹಳ್ಳಿ ಶ್ರೀನಿವಾಸಯ್ಯ ದೊರೆಸ್ವಾಮಿ ಅವರು 1918ರ ಏಪ್ರಿಲ್. 10ರಂದು ಜನಿಸಿದರು ಇವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿದ್ದರು, ಹಾಗೂ ಇವರು ಕನ್ನಡ ಜನಪ್ರಿಯ ಪತ್ರಿಕೆಯಾಗಿದ್ದ ಪೌರವಾಣಿ ವರದಿಗಾರರಾಗಿ ಬ್ರಿಟಿಷರ ಕಾಲದಲ್ಲಿ ಹೆಸರುವಾಸಿಯಾಗಿದ್ದರು, ಮತ್ತು ಇವರು ಸಾಹಿತ್ಯದ ಮೂಲಕ ಹಲವಾರು ಪುಸ್ತಕಗಳನ್ನು ಪ್ರಕಟಣೆ ಮಾಡಿದ್ದರು, ಪ್ರಸ್ತುತ ದೊರೆಸ್ವಾಮಿ ಎಂದರೆ ಕರ್ನಾಟಕದ ಸಾಕ್ಷಿಪ್ರಜ್ಞೆ ಎಂದು ಬಣ್ಣಿಸುತಿದ್ದರು.

* ದೊರೆಸ್ವಾಮಿ ಅವರ ವಿದ್ಯಾಭ್ಯಾಸ ಮುಕ್ತಾಯವಾದ ಬಳಿಕ 1942ರ ಜೂನ್ ತಿಂಗಳಿನಲ್ಲಿ ಬೆಂಗಳೂರಿನ ಪ್ರೌಢಶಾಲೆಯಲ್ಲಿ ಗಣಿತ ಮತ್ತು ವಿಜ್ಞಾನ ಶಿಕ್ಷಕರಾಗಿ ವೃತ್ತಿ ಪ್ರಾರಂಭಿಸಿದರು, ಮತ್ತು ಅದೇ ವರ್ಷದಲ್ಲಿ ಆರಂಭವಾದ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗಿಯಾಗಿದ್ದರು.

## ವಿಶ್ವ ಆರೋಗ್ಯ ಸಂಸ್ಥೆ ನಿಯೋಗದಿಂದ ರಾಜ್ಯಕ್ಕೆ 100 ಆಕ್ಸಿಜನ್ ಕಾನ್ಸನ್‌ಟ್ರೇಟರ್ಸ್ ನೆರವು



* ಪ್ರಸ್ತುತ ಭಾರತದಲ್ಲಿನ ಕೋವಿಡ್ 19 ವಿರುದ್ಧ ಹೋರಾಡಲು ವಿಶ್ವ ಆರೋಗ್ಯ ಸಂಸ್ಥೆ ನಿಯೋಗವು ಕಾರನಾಟಕ ರಾಜ್ಯಕ್ಕೆ 100 ಆಕ್ಸಿಜನ್ ಕಾನ್ಸನ್‌ಟ್ರೇಟರ್ಸ್'ಗಳನ್ನೂ ವಿಶ್ವ ಆರೋಗ್ಯ ಸಂಸ್ಥೆಯ ಅಧಿಕಾರಿಗಳು ರಾಜ್ಯದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಅವರ ಮೂಲಕ ರಾಜ್ಯಕ್ಕೆ ದೇಣಿಗೆಯಾಗಿ ನೀಡಿದರು.

## ಕೇರಳ ರಾಜ್ಯದ ಹೊಸ ಸ್ಮಾರ್ಟ್ ಕಿಚನ್ ಯೋಜನೆ



* ಕೇರಳ ರಾಜ್ಯದ LDF ಪಕ್ಷವು ತನ್ನ ಬದ್ಧತೆಗಳನ್ನು ಪೂರೈಸಲು ಇದೀಗ ರಾಜ್ಯದಲ್ಲಿ ಸ್ಮಾರ್ಟ್ ಕಿಚನ್ ಯೋಜನೆಯನ್ನು ಅನುಷ್ಠಾನಗೊಳಿಸುವದಾಗಿ ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಘೋಷಣೆ ಮಾಡಿದ್ದಾರೆ.

* ಕೇರಳ ರಾಜ್ಯದಲ್ಲಿ 2021ರ ಜುಲೈ.10ರಂದು ಸ್ಮಾರ್ಟ್ ಕಿಚನ್ ಯೋಜನೆಯನ್ನು ಆರಂಭಿಸಲಾಗುವದು ಎಂದು ತಿಳಿಸಿದ್ದಾರೆ, ಮತ್ತು ಈ ಯೋಜನೆ ಅಡಿಯಲ್ಲಿ ರಾಜ್ಯದ ಮಹಿಳೆಯರಿಗೆ ತಮ್ಮ ತಮ್ಮ ಅಡುಗೆಮನೆ ನವೀಕರಿಣ ಮಾಡಿಕೊಳ್ಳಲು ಸಾಲ ನೀಡಲಾಗುತ್ತದೆ ಎಂದು ತಿಳಿಸಿದ್ದಾರೆ, ಇದರಿಂದಾಗಿ ಮಹಿಳೆಯರ ಮತ್ತು ಗೃಹ ಕಾರ್ಮಿಕರ ಕೆಲಸದ ಹೊರೆ ಕಡಿಮೆ ಮಾಡುವ ಸಲುವಾಗಿ ಈ ಯೋಜನೆಯನ್ನು ಆರಂಭಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

## ಅಸ್ಸಾಂನ ಮುಖ್ಯಮಂತ್ರಿಯಿಂದ "ಗಾರ್ಡಿಯನ್ ಮಂತ್ರಿಗಳ" ನೇಮಕ



* ಅಸ್ಸಾಂನ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ರಾಜ್ಯದಲ್ಲಿ "ಗಾರ್ಡಿಯನ್ ಮಂತ್ರಿಗಳನ್ನು" ನೇಮಿಸಿದರು, ಪ್ರಸ್ತುತ ಈ ಗಾರ್ಡಿಯನ್ ಮಂತ್ರಿಗಳು ಅಸ್ಸಾಂ ರಾಜ್ಯದ 34 ಜಿಲ್ಲೆಗಳಲ್ಲಿ ಸಮತೋಲಿತ ಹಾಗೂ ತ್ವರಿತ ಮತ್ತು ಸುಸ್ಥಿರ ಬೆಳವಣಿಗೆಗಳನ್ನು ನೋಡಿಕೊಳ್ಳುವ ಹೊಣೆಯನ್ನು ಹೊಂದಿರುತ್ತಾರೆ, ಮತ್ತು ರಾಜ್ಯ ಮತ್ತು ಕೇಂದ್ರ ಸರ್ಕಾರದ ಯೋಜನೆಗಳಿಗೆ ಸಂಬಂಧಿಸಿದ ಯಾವುದೇ ಸಮಸ್ಯೆಗಳಿದ್ದರೆ ಆ ಸಮಸ್ಯೆಗಳನ್ನೂ ಕಾರ್ಯಗತಗೊಳಿಸುವದು ಹಾಗೂ ಅವುಗಳನ್ನೂ ಪರಿಹರಿಸುವ ಜವಾಬ್ದಾರಿಯನ್ನು ಇವರು ಹೊಂದಿರುತ್ತಾರೆ ಇದರೊಂದಿಗೆ ಅಸ್ಸಾಂ ರಾಜ್ಯ ಸರ್ಕಾರದ ನೀತಿ, ನಿಯಮ ಮತ್ತು ನಿರ್ಧಾರಗಳು, ಆಡಳಿತ ಸುಧಾರಣೆಗಳು ಮತ್ತು ಸಾರ್ವಜನಿಕರಿಗಾಗಿ ಕಲ್ಯಾಣ ಯೋಜನೆಗಳನ್ನು ಸಹ ನೋಡಿಕೊಳ್ಳುವ ಜವಾಬ್ದಾರಿಯನ್ನು ಇವರಿಗೆ ನೀಡಲಾಗಿರುತ್ತದೆ.

* ಅಸ್ಸಾಂ ರಾಜ್ಯದ ನಿಯೋಜಿತ ಜಿಲ್ಲೆಗಳಿಗೆ ಈ ಗಾರ್ಡಿಯನ್ ಮಂತ್ರಿಗಳು ತುರ್ತು ಸಂದರ್ಭಗಳಲ್ಲಿ ಭೇಟಿ ನೀಡುತ್ತಾರೆ, ಮತ್ತು ಜಿಲ್ಲೆಯ ಕಲ್ಯಾಣ ಮತ್ತು ಅಭಿವೃದ್ಧಿಗೆ ಬೇಕಾಗಿರುವಂತಹ ನೀತಿ ನಿರ್ಧಾರಗಳನ್ನು ಸರ್ಕಾರಕ್ಕೆ ಸೂಚಿಸಲು ಅವಕಾಶವನ್ನು ನೀಡಲಾಗಿರುತ್ತದೆ ಎಂದು ತಿಳಿಸಿದ್ದಾರೆ.

* ಅಸ್ಸಾಂ ರಾಜ್ಯದ ಈ ಗಾರ್ಡಿಯನ್ ಮಂತ್ರಿಗಳು ನಿರುದ್ಯೋಗಿ ಯುವಕರಿಗೆ ಉದ್ಯೋಗ ನೀಡುವ ಯೋಜನೆಯನ್ನು ಕೂಡ ನೋಡಿಕೊಳ್ಳಲಿದ್ದಾರೆ.

* ಪ್ರಸ್ತುತ ಅಸ್ಸಾಂ ರಾಜ್ಯದ 13 ಸಚಿವರಲ್ಲಿ 8 ಮಂತ್ರಿಗಳಿಗೆ ತಲಾ ಮೂರು ಜಿಲ್ಲೆಗಳನ್ನು ನೀಡಲಾಗಿದೆ ಮತ್ತು ಇನ್ನುಳಿದ 5 ಮಂತ್ರಿಗಳಿಗೆ ತಲಾ ಎರಡು ಜಿಲ್ಲೆಗಳನ್ನು ನೀಡಲಾಗಿದೆ ಎಂದು ಸರ್ಕಾರವು ತಿಳಿಸಿದೆ.

# 28-05-2021

## NHAI'ನಿಂದ ಟೋಲ್ ಶುಲ್ಕ ವಿನಾಯಿತಿ



* ನ್ಯಾಷನಲ್ ಹೈವೇ ಅಥಾರಿಟಿ ಆಫ್ ಇಂಡಿಯಾ(NHAI) ವತಿಯಿಂದ ಟೋಲ್ ಪ್ಲಾಜಾಗಳಲ್ಲಿ 100 ಮೀ.ಗಿಂತಲೂ ದೂರದವರೆಗೆ ವಾಹನಗಳು ಸರದಿ ಸಾಲಿನಲ್ಲಿ ನಿಂತಿದ್ದರೆ, ಆ ಸಂಧರ್ಭದಲ್ಲಿ ಮುಂಭಾಗದಲ್ಲಿ ಇರುವಂತಹ ವಾಹನಗಳಿಗೆ ಟೋಲ್ ನಿಂದ ವಿನಾಯಿತಿ ನೀಡಲಾಗುತ್ತದೆ ಇದರಿಂದಾಗಿ ಸಂಚಾರಕ್ಕೆ ಅನುಕೂಲವಾಗುತ್ತದೆ ಎಂದು ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ(NHAI)ವು ಇತರಹದ ಹೊಸ ಮಾರ್ಗಸೂಚಿಯನ್ನು ಬಿಡುಗಡೆ ಮಾಡಿದೆ, ಅತೀ ಶೀಘ್ರದಲ್ಲಿ ದೇಶದ ಎಲ್ಲ ಹೆದ್ದಾರಿಗಳ ಟೋಲ್ ಪ್ಲಾಜಾಗಳಲ್ಲಿ ಈ ನಿಯಮ ಜಾರಿಯಾಗಲಿದೆ ಎಂದು ತಿಳಿಸಿದ್ದಾರೆ.

* ಪ್ರತಿಯೊಂದು ಟೋಲ್ ಪ್ಲಾಜಾಗಳಲ್ಲಿನ ಟೋಲ್ ಬೂತ್'ನಿಂದ 100 ಮೀ. ದೂರದಲ್ಲಿ ಹಳದಿ ಬಣ್ಣದ ಗೆರೆಯನ್ನು ಎಳೆಯಲಾಗಿರುತ್ತದೆ ಈ ಗೆರೆಗಿಂತಲೂ ಆಚೆ ವಾಹನಗಳು ಸರದಿ ಸಾಲಿನಲ್ಲಿ ನಿಂತಿದ್ದರೆ ಆ ಸಮಯದಲ್ಲಿ ಹಳದಿ ಬಣ್ಣದ ಗೆರೆಯ ಒಳಗಡೆ ಇರುವ ವಾಹನಗಳು ಟೋಲ್ ಪಾವತಿಸದೇ ಮುಂದೆ ಸಾಗಬಹುದು ಎಂದು NHAI ತಿಳಿಸಿದೆ, ಮತ್ತು ಹಳದಿ ಗೆರೆ ಹೊರಗಡೆ ನಿಂತಿರುವ ವಾಹನಗಳು ಟೋಲ್ ಪಾವತಿಸಬೇಕು ಎಂದು NHAI ಈ ಹೊಸ ನಿಯಮ ತಿಳಿಸಿದೆ.

* ಈ ಯೋಜನೆಯಿಂದಾಗಿ ಟೋಲ್‌ನಲ್ಲಿ ವ್ಯರ್ಥವಾಗುವ ಸಮಯವನ್ನು ತಪ್ಪಿಸಲು ಮತ್ತು ಸಂಚಾರ ದಟ್ಟಣೆಗೆ ಬ್ರೇಕ್ ಹಾಕಲು ಈ ಯೋಜನೆ ಸಹಾಯಕಾರಿ ಯಾಗಲಿದೆ ಎಂದು ನ್ಯಾಷನಲ್ ಹೈವೇ ಅಥಾರಿಟಿ ಆಫ್ ಇಂಡಿಯಾ ತಿಳಿಸಿದೆ.

## ಟಿಬೆಟ್ : ಪೆನ್ಪಾ ತ್ಸೆರಿಂಗ್ ಅಧಿಕಾರ ಸ್ವೀಕಾರ



* ಟಿಬೆಟ್ ಸರ್ಕಾರದ ಅಧ್ಯಕ್ಷರಾಗಿ ಪೆನ್ಪಾ ತ್ಸೆರಿಂಗ್'ಅವರು ಧರ್ಮಶಾಲಾದಲ್ಲಿ ಅಧಿಕಾರ ಸ್ವೀಕರಿಸಿದರು.

* ಪ್ರಸ್ತುತ ಕೋವಿಡ್ 19 ಮಾರ್ಗಸೂಚಿಯಂತೆ ಸರಳ ಸಮಾರಂಭದಲ್ಲಿ ಮುಖ್ಯ ನ್ಯಾಯ ಆಯುಕ್ತ ಸೋನಂ ನಾರ್ಬು ಡಾಗ್ಪೋ ಅವರು ಪೆನ್ಪಾ ತ್ಸೆರಿಂಗ್'ಅವರಿಗೆ ಪ್ರಮಾಣ ವಚನ ಬೋಧಿಸಿದರು.

* ಪ್ರಮಾಣ ವಚನ ಸ್ವೀಕಾರ ಸಂಧರ್ಭದಲ್ಲಿ ಪೆನ್ಪಾ ತ್ಸೆರಿಂಗ್'ಅವರು ಚೀನಾ ಟಿಬೆಟ್ ಜೊತೆ ಸಂಘರ್ಷ ಮತ್ತು ಅಹಿಂಸಾತ್ಮಕ ಪರಿಹಾರವನ್ನು ಕಂಡುಕೊಳ್ಳಲು ಚೀನಾ ಸರ್ಕಾರದ ಜೊತೆಗೆ ಸಂಪರ್ಕವನ್ನು ಸಾಧಿಸಲು ನಾವು ಸಿದ್ಧವಾಗಿದ್ದೇವೆ ಎಂದು ತಿಳಿಸಿದ್ದಾರೆ.

* ಪ್ರಸ್ತುತ ಟಿಬೆಟ್‌ನ ಅಧ್ಯಾತ್ಮ ಗುರು ದಲೈಲಾಮಾ ಅವರು ತೋರಿದ ದಾರಿಯಲ್ಲಿ ನಾವುಗಳು ಮುಂದೆ ಸಾಗಲಿದ್ದೇವೆ ಎಂದು ತಿಳಿಸಿದ್ದಾರೆ.

## ನೂತನ ವಾಣಿಜ್ಯ ಕಾರ್ಯದರ್ಶಿಯಾಗಿ ಬಿ.ವಿ.ಅರ್ .ಸುಬ್ರಹ್ಮಣ್ಯಂ ನೇಮಕ



* ಮುಖ್ಯ ಕಾರ್ಯದರ್ಶಿ ಬಿ.ವಿ.ಅರ್.ಸುಬ್ರಹ್ಮಣ್ಯಂ ಅವರನ್ನು ಕೇಂದ್ರಾಡಳಿತ ಪ್ರದೇಶ ಜಮ್ಮು ಮತ್ತು ಕಾಶ್ಮೀರದ ನೂತನ ವಾಣಿಜ್ಯ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಲಾಗಿದೆ.

* ಪ್ರಸ್ತುತ ಕೇಂದ್ರ ಸರ್ಕಾರವು ದೇಶದ ಪ್ರಮುಖ ಗೂಢಚಾರ ಸಂಸ್ಥೆ ಆರ್ಎಡಬ್ಲ್ಯೂನ (RAW) ಮುಖ್ಯಸ್ಥರಾಗಿ ಸಮಂತ್ ಗೋಯೆಲ್ ಮತ್ತು ಇಂಟೆಲಿಜೆನ್ಸ್ ಬ್ಯುರೋದ ಮುಖ್ಯಸ್ಥರಾಗಿ ಅರವಿಂದ್ ಕುಮಾರ್ ಅವರ ಅಧಿಕಾರಾವಧಿಯನ್ನು 1 ವರ್ಷಗಳ ವಿಸ್ತರಣೆ ಮಾಡಿದೆ.

* ಈಗಿನ ವಾಣಿಜ್ಯ ಕಾರ್ಯದರ್ಶಿಯಾಗಿ ಅನೂಪ್ ವಾಧ್ವಾನ್ ಅವರು ಕಾರ್ಯ ನಿರ್ವಹಿಸುತ್ತಿದ್ದಾರೆ ಇವರ ಅಧಿಕಾರ ಅವಧಿ ಜೂನ್ 30ಕ್ಕೆ ಮುಕ್ತಾಯಗೊಳ್ಳಲಿದೆ.

* ಬಿ.ವಿ.ಅರ್.ಸುಬ್ರಹ್ಮಣ್ಯಂ ಅವರು 1987ರ ಬ್ಯಾಚ್‌ನ ಛತ್ತೀಸಗಡ ಕೇಡರ್ IAS ಅಧಿಕಾರಿಯಾಗಿದ್ದಾರೆ ಇವರನ್ನು ಜಮ್ಮು ಮತ್ತು ಕಾಶ್ಮೀರದ ಮುಖ್ಯಕಾರ್ಯದರ್ಶಿಯಾಗಿ 2018ರ ಜೂನ್'ನಲ್ಲಿ ನೇಮಕ ಮಾಡಿದ್ದರು.

## ವಿಜ್ಞಾನಿ ಸಿ.ಎನ್.ಆರ್ ರಾವ್'ಗೆ ಪ್ರತಿಷ್ಠಿತ ಇಎನ್ಐ ಅಂತಾರಾಷ್ಟ್ರೀಯ ಪ್ರಶಸ್ತಿ




* ಭಾರತ ರತ್ನ ಪುರಸ್ಕೃತ ಖ್ಯಾತ ವಿಜ್ಞಾನಿಯಾಗಿರುವ ಪ್ರಾಧ್ಯಾಪಕ ಸಿ.ಎನ್.ಆರ್ ರಾವ್ ಅವರಿಗೆ ಪ್ರತಿಷ್ಠಿತ ಅಂತಾರಾಷ್ಟ್ರೀಯ ಇಎನ್ಐ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ ಹೇಳಿದೆ.

* ವಿಜ್ಞಾನಿ ಸಿ.ಎನ್.ಆರ್ ರಾವ್ ಅವರು ನವೀಕರಿಸಬಹುದಾದ ಇಂಧನ ಮೂಲಗಳು ಮತ್ತು ಇಂಧನ ಸಂಗ್ರಹಣೆಯ ಸಂಶೋಧನೆಗಾಗಿ ಈ ಪ್ರಶಸ್ತಿಯು ಇವರಿಗೆ ಲಭಿಸಿದೆ, ಈ ಪ್ರಶಸ್ತಿಯನ್ನು ಎನರ್ಜಿ ಫ್ರಾಂಟಿಯರ್ ಪ್ರಶಸ್ತಿ ಎಂದು ಕರೆಯುತ್ತಾರೆ, ಮತ್ತು ಶಕ್ತಿ ಸಂಶೋಧನೆಯಲ್ಲಿ ನೊಬೆಲ್ ಪ್ರಶಸ್ತಿ ಎಂದು ಪರಿಗಣಿಸಲಾಗಿದೆ.

* ಈ ಪ್ರಶಸ್ತಿಯನ್ನು ರೋಮ್'ನಲ್ಲಿ ಅಕ್ಟೋಬರ್. 14ರಂದು ನಡೆಯುವ ಸಮಾರಂಭದಲ್ಲಿ ಅಧಿಕೃತವಾಗಿ ವಿಜ್ಞಾನಿ ಸಿ.ಎನ್.ಆರ್ ರಾವ್ ಅವರಿಗೆ ಪ್ರದಾನ ಮಾಡಲಾಗುತ್ತದೆ ಎಂದು ತಿಳಿದು ಬಂದಿದೆ.

## ಯೋಗಿ ಸರ್ಕಾರವು ಉತ್ತರ ಪ್ರದೇಶ ರಾಜ್ಯದಲ್ಲಿ ಎಸ್ಮಾ ಜಾರಿಗೊಳಿಸಿದೆ



* ಕೋವಿಡ್ 19 ಸಂಧರ್ಭದಲ್ಲಿ ಉತ್ತರ ಪ್ರದೇಶದ ಯೋಗಿ ಆದಿತ್ಯನಾಥ ಸರ್ಕಾರವು ಇದೀಗ ರಾಜ್ಯದಲ್ಲಿ ಎಸ್ಮಾ ಜಾರಿಗೆ ಮಾಡಿದೆ, ಇದೀಗ ಉತ್ತರ ಪ್ರದೇಶದ ಯೋಗಿ ಸರ್ಕಾರವು ತಮ್ಮ ರಾಜ್ಯದಲ್ಲಿನ ಯಾರನ್ನು ಬೇಕಾದರೂ ಬಂಧಿಸಲು ಪೊಲೀಸರಿಗೆ ಸಂಪೂರ್ಣ ಅಧಿಕಾರ ನೀಡಿದೆ.

* ಎಸ್ಮಾ ಕಾಯಿದೆಯನ್ನು ಉತ್ತರ ಪ್ರದೇಶದಲ್ಲಿ ಜಾರಿಗೆ ತರಲಾಗಿದೆ, ಈ ಕಾಯ್ದೆ ಅಡಿಯಲ್ಲಿ 6 ತಿಂಗಳವರೆಗೆ ಯಾವುದೇ ಮುಷ್ಕರ, ಪ್ರತಿಭಟನೆ ನಡೆಸಲು ಅವಕಾಶ ಇರುವುದಿಲ್ಲ ಎಂದು ಆದೇಶ ಹೊರಡಿಸಿದೆ, ಇದೀಗ ರಾಜ್ಯದಲ್ಲಿ ವಾರೆಂಟ್ ಇಲ್ಲದೆ ಯಾರನ್ನು ಬೇಕಾದರೂ ಬಂಧಿಸಲು ರಾಜ್ಯದ ಪೊಲೀಸರಿಗೆ ಸಂಪೂರ್ಣ ಅಧಿಕಾರ ನೀಡಿದೆ ಎಂದು ಯೋಗಿ ಆದಿತ್ಯನಾಥ ಸರ್ಕಾರವು ತಿಳಿಸಿದೆ.

* ಪ್ರಸ್ತುತ ಉತ್ತರ ಪ್ರದೇಶದ ರಾಜ್ಯದಲ್ಲಿನ ಕೋವಿಡ್ 19 ಪರಿಸ್ಥಿತಿ ನಡುವೆಯು ಇಲ್ಲಿನ ಅನೇಕ ಸರ್ಕಾರಿ ನೌಕರರು ತಮ್ಮ ಬೇಡಿಕೆಗಳನ್ನು ಈಡೇರಿಸುವ ಸಲುವಾಗಿ ಮುಷ್ಕರ ನಡೆಸಲು ತಯಾರಿ ನಡೆಸುತ್ತಿದ್ದಾರೆ, ಈ ನಿಟ್ಟಿನಲ್ಲಿ ಇದಕ್ಕೆ ಕಡಿವಾಣ ಹಾಕಲು ಯೋಗಿ ಸರ್ಕಾರವು ಈ ನಿರ್ಧಾರವನ್ನು ತಗೆದುಕೊಂಡಿದೆ ಎಂದು ತಿಳಿದು ಬಂದಿದೆ.

## ಭಾರತೀಯ ಸೇನಾ ಸಿಬ್ಬಂದಿಗೆ ಆರೋಗ್ಯ ಸೇವೆ ಒದಗಿಸಲು ಆನ್‌ಲೈನ್ ಪೋರ್ಟಲ್ ಆರಂಭ




* ಭಾರತೀಯ ಸೇನಾ ಸಿಬ್ಬಂದಿಗೆ ನಿಯಮಿತವಾಗಿ ಆನ್‌ಲೈನ್ ಮೂಲಕ ಆರೋಗ್ಯ ಸೇವೆಯನ್ನು ಒದಗಿಸಲು ಸೇಹಟ್ (SeHAT) ಒಪಿಡಿ(OPD) ವೆಬ್‌ಸೈಟ್'ಅನ್ನು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಉದ್ಘಾಟಣೆ ಮಾಡಿದರು.

* ದೂರದ ಪ್ರದೇಶಗಳಲ್ಲಿ ಇರುವಂತಹ ಸೇನಾ ಸಿಬ್ಬಂದಿಗಳಿಗೆ ಉತ್ತಮ ಗುಣಮಟ್ಟದ ಆರೋಗ್ಯ ಸೇವೆ ಒದಗಿಸಲು ಹಾಗೂ ಆಸ್ಪತ್ರೆಗಳ ಮೇಲಿನ ಒತ್ತಡವನ್ನು ಕಡಿಮೆಗೊಳಿಸಲು ಈ ಆನ್ಲೈನ್ ಪೋರ್ಟಲ್ ಅನುಕೂಲವಾಗಲಿದೆ ಎಂದು ತಿಳಿಸಲಾಗಿದೆ.

* ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಕೋವಿಡ್ ಚಿಕಿತ್ಸೆಗಾಗಿ DRDO ಅಭಿವೃದ್ಧಿಪಡಿಸಿರುವ ನೀರಿನಲ್ಲಿ ಬೆರೆಸಿ ಬಾಯಿಯ ಮೂಲಕ ಸೇವಿಸಬಹುದಾದ 2DG ಗ್ಲೂಕೋಸ್ ಉತ್ತಮ ಫಲಿತಾಂಶ ನೀಡಿದೆ ಎಂಬ ಮಾಹಿತಿಯನ್ನು ನೀಡಿದ್ದಾರೆ.

# 29-05-2021

## ಯಸ್ ಚಂಡಮಾರುತದ ವೈಮಾನಿಕ ಸಮೀಕ್ಷೆ, ಪ್ರಧಾನಿ ಮೋದಿ ತುರ್ತು ನೆರವು 1,000 ಕೋಟಿ ಘೋಷಣೆ



* ಪ್ರಧಾನಿ ನರೇಂದ್ರ ಮೋದಿ ಅವರು ಯಸ್ ಚಂಡಮಾರುತದಿಂದ ಹಾನಿ ಉಂಟಾಗಿರುವ ರಾಜ್ಯಗಳಿಗೆ 1000 ಕೋಟಿ ರೂ. ತುರ್ತು ಪರಿಹಾರವನ್ನು ಘೋಷಣೆ ಮಾಡಿದ್ದಾರೆ, ಈ ತುರ್ತು ಪರಿಹಾರದಲ್ಲಿ ಒಡಿಶಾ ರಾಜ್ಯಕ್ಕೆ 500 ಕೋಟಿ ರೂ. ಮತ್ತು ಪಶ್ಚಿಮ ಬಂಗಾಳ ಹಾಗೂ ಜಾರ್ಖಂಡ್ ರಾಜ್ಯಗಳಿಗೆ 500 ಕೋಟಿ ರೂ. ಸದ್ಯದಲ್ಲೇ ಬಿಡುಗಡೆ ಮಾಡಲಾಗುತ್ತದೆ ಎಂದು ಪ್ರಧಾನಮಂತ್ರಿ ಕಚೇರಿಯು ಪ್ರಕಟಣೆಯ ಮೂಲಕ ಮಾಹಿತಿಯನ್ನು ನೀಡಿದೆ.

* ಪ್ರಧಾನಿ ನರೇಂದ್ರ ಮೋದಿ ಅವರು ಯಸ್ ಚಂಡಮಾರುತದಿಂದ ಹಾನಿಗೆ ಒಳಪಟ್ಟಿರುವ ಪಶ್ಚಿಮ ಬಂಗಾಳ ಮತ್ತು ಒಡಿಶಾ ರಾಜ್ಯಗಳ ಜಿಲ್ಲೆಗಳ ವೈಮಾನಿಕ ಸಮೀಕ್ಷೆಯನ್ನು ನಡೆಸಿ ಮತ್ತೇ ಆ ಎರಡು ರಾಜ್ಯಗಳ ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ ಪರಿಹಾರವನ್ನು ಘೋಷಣೆ ಮಾಡಿದ್ದಾರೆ, ಇದರ ಜೊತೆಯಲ್ಲಿ ಈ ಯಶ್ ಚಂಡಮಾರುತದಿಂದಾಗಿ ಸಾವನ್ನಪ್ಪಿದ ಕುಟುಂಬದ ಸದ್ಯಸರಿಗೆ ತಲಾ 2ಲಕ್ಷ ರೂ. ಮತ್ತು ತೀವ್ರವಾಗಿ ಗಾಯಗೊಂಡವರಿಗೆ ತಲಾ 50,000 ರೂ. ಪರಿಹಾರವನ್ನೂ ಕೂಡ ಘೋಷಣೆ ಮಾಡಿದ್ದಾರೆ.

* ಒಡಿಶಾ ರಾಜ್ಯದ ಮುಖ್ಯಮಂತ್ರಿ ನವೀನ ಪಟ್ನಾಯಕ್ ಅವರು ಕರಾವಳಿ ತೀರದ ಪ್ರದೇಶವನ್ನು ಪ್ರವಾಹಗಳಿಂದ ಸಂರಕ್ಷಿಸಲು ಶಾಶ್ವತವಾದ ವ್ಯವಸ್ಥೆ ರೂಪಿಸಲು ಕೇಳಿಕೊಂಡಿದ್ದಾರೆ, ಸದ್ಯಕ್ಕೆ ರಾಜ್ಯವು ತನ್ನ ಆರ್ಥಿಕತೆಯ ಮೂಲಕ ಈ ಪರಿಸ್ಥಿತಿಯನ್ನು ನಿರ್ವಹಣೆಮಾಡುತ್ತವೆಎಂದುತಿಳಿಸಿದ್ದಾರೆ.

## ಕೋವಿಡ್ 19 ವೈದ್ಯಕೀಯ ಉಪಕರಣಗಳ ಮೇಲಿನ ಆಮದು ತೆರಿಗೆ ವಿನಾಯಿತಿ



* ಕೇಂದ್ರ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್ ಅವರ ಸಮ್ಮುಖದಲ್ಲಿ ದೆಹಲಿಯಲ್ಲಿ 43ನೇ ಜಿಎಸ್‌ಟಿ ಕೌನ್ಸಿಲ್ ಸಭೆ ನಡೆಸಲಾಯಿತು ಈ ಸಭೆಯಲ್ಲಿ ಮಹತ್ವದ ನಿರ್ಧಾರ ಕೈಗೊಂಡರು ಅದುವೇ ಬೇರೆ ಬೇರೆ ದೇಶಗಳಿಂದ ರಾಜ್ಯಗಳಿಗೆ ಬರುವ ಕೋವಿಡ್ 19 ಸಂಬಂಧಿತ ವೈದ್ಯಕೀಯ ಉಪಕರಣಗಳ ಮೇಲೆ ಆಮದು ತೆರಿಗೆ ವಿನಾಯಿತಿ (IGST) ನೀಡಲು ತೀರ್ಮಾನವನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

* ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 2021ರ ಆಗಸ್ಟ 31ರವರೆಗೆ ಕೋವಿಡ್ 19 ಸಂಬಂದಪಟ್ಟ ಸರಬರಾಜಿನಲ್ಲಿ GSTಗೆ ವಿನಾಯಿತಿ ನೀಡಲಾಗುತ್ತಿದೆ ಎಂದು ತಿಳಿಸಿದ್ದಾರೆ.

* ಈ GST ವಿನಾಯಿತಿ ನೀಡಿರುವದರಿಂದ ಆದಾಯಕ್ಕೆ ನಷ್ಟ ಉಂಟಾಗುತ್ತದೆ ಇದರಿಂದಾಗಿ ರಾಜ್ಯಗಳಿಗೆ ಪರಿಹಾರ ಒದಗಿಸಿಕೊಡಲು ಕೇಂದ್ರ ಸರ್ಕಾರವು 1.58 ಲಕ್ಷ ಕೋಟಿ ರೂ.ಗಳನ್ನು ಸಾಲ ಮಾಡಲಿದೆ ಎಂದು ನಿರ್ಮಲ ಸೀತಾರಾಮನ್ ಅವರು ತಿಳಿಸಿದ್ದಾರೆ, ಇದರ ಜೊತೆಯಲ್ಲಿ 2022ರ ಜೂನ್ ತಿಂಗಳಿನ ನಂತರ GST ಪರಿಹಾರ ಸೆಸ್ ಬಗ್ಗೆ ಚರ್ಚಿಸಲು ವಿಶೇಷ ಅಧಿವೇಶನವನ್ನು ಏರ್ಪಡಿಸಲಾಗುವದು ಎಂದು ತಿಳಿಸಿದ್ದಾರೆ.

* ಕೋವಿಡ್ 19 ಸಂಬಂಧಿತ ವೈದ್ಯಕೀಯ ಸಲಕರಣೆಗಳ ಮೇಲಿನ GSTದರ ಕಡಿಮೆ ಗೊಳಿಸುವ ವಿಷಯದ ಬಗ್ಗೆ ಚರ್ಚಿಸಲಾಗಿದೆ ಮತ್ತು ಅಂತಿಮ ತೀರ್ಮಾನವನ್ನು ಪರಿಗಣಿಸಿ ಇದೇ ಜೂನ್.8ರಂದು ವರದಿ ತಿಳಿಸಲಾಗುವುದು ಎಂದು ಸಚಿವೆ ನಿರ್ಮಲ ಸೀತಾರಾಮನ್ ಅವರು ಹೇಳಿದ್ದಾರೆ.

## ಭಾರತಕ್ಕೆ ಕೀನ್ಯಾ ರಾಷ್ಟ್ರದಿಂದ 12 ಟನ್ ಆಹಾರೋತ್ಪನ್ನ ನೆರವು



* ಕೀನ್ಯಾವು ಹಿಂದೂ ಮಹಾಸಾಗರದ ಕರಾವಳಿಯನ್ನು ಹೊಂದಿರುವ ಪೂರ್ವ ಆಫ್ರಿಕಾದ ದೇಶವಾಗಿದೆ, ಪ್ರಸ್ತುತ ಆಫ್ರಿಕಾ ಖಂಡದ ಪ್ರಮುಖ ರಾಷ್ಟ್ರ ಕೀನ್ಯಾ ತನ್ನ ಕೋವಿಡ್ 19 ಪರಿಹಾರವಾಗಿ ಭಾರತಕ್ಕೆ 12 ಟನ್ ಆಹಾರೋತ್ಪನ್ನಗಳನ್ನು ದೇಣಿಗೆ ರೂಪದಲ್ಲಿ ನೆರವು ನೀಡಿದೆ.

* ಕೀನ್ಯಾ ಸ್ಥಳೀಯವಾಗಿ ಉತ್ಪಾದಣೆ ಮಾಡುವಂತಹ ಚಹಾ, ಕಾಫಿ ಮತ್ತು ನೆಲಗಡಲೆಯ 12 ಟನ್ ಭಾರತೀಯ ರೆಡ್‌ಕ್ರಾಸ್ ಸೊಸೈಟಿಗೆ ದೇಣಿಗೆಯಾಗಿ ನೀಡಿದೆ, ಈ ಆಹಾರ ಪದಾರ್ಥಗಳನ್ನು ಮಹಾರಾಷ್ಟ್ರ ರಾಜ್ಯದಾದ್ಯಂತ ಹಂಚಿಕೆ ಮಾಡಲಾಗುವದು ಎಂದು ತಿಳಿಸಲಾಗಿದೆ.

* ಸದ್ಯ ಆಫ್ರಿಕನ್ ದೇಶದ ಹೈ ಕಮಿಷನರ್ ವಿಲ್ಲಿ ಬೆಟ್ ಅವರು ಈ ಕೋವಿಡ್ 19 ಪರಿಸ್ಥಿತಿಯಲ್ಲಿ ಕೀನ್ಯಾ ಪ್ರಜೆಗಳು ಭಾರತ ಸರ್ಕಾರಕ್ಕೆ ಜೊತೆಯಾಗಿ ನಿಲ್ಲಬೇಕೆಂದು ಕೀನ್ಯಾ ಸರ್ಕಾರ ಬಯಸುತ್ತದೆ ಎಂದು ತಿಳಿಸಿದ್ದಾರೆ.

## ದೇಶದ ಎಲ್ಲ ಪ್ರಜೆಗಳಿಗೆ 2021 ವರ್ಷಾಂತ್ಯದ ವೇಳೆಗೆ ಕೋವಿಡ್ ಲಸಿಕೆ ವಿತರಣೆ




* ಕೇಂದ್ರ ಸರ್ಕಾರವು ದೇಶದ ಎಲ್ಲ ಪ್ರಜೆಗಳಿಗೂ 2021 ವರ್ಷಾಂತ್ಯದ ವೇಳೆಗೆ ಕೋವಿಡ್ 19 ಲಸಿಕೆ ನೀಡುವ ಗುರಿಯನ್ನು ಹೊಂದಿದೆ, ಮತ್ತು ಲಸಿಕೆ ವಿತರಣಾ ಕಾರ್ಯವನ್ನು ತ್ವರಿತಗೊಳಿಸುವ ಯೋಜನೆಯನ್ನು ರೂಪಿಸುತ್ತಿದೆ.

* ಪ್ರಸ್ತುತ 2021ರ ಡಿಸೆಂಬರ್ ವೇಳೆಗೆ ದೇಶದ ಪ್ರತಿಯೊಬ್ಬ ಪ್ರಜೆಗೂ ಕೋವಿಡ್ 19 ಲಸಿಕೆ ನೀಡಲಾಗುತ್ತದೆ ಎಂದು ಕೇಂದ್ರ ಸರ್ಕಾರ ಘೋಷಣೆ ಮಾಡಿದೆ ಈ ವಿಷಯದ ಬಗೆಗಿನ ಮಾಹಿತಿಯನ್ನು ಕೇಂದ್ರ ಸಚಿವ ಪ್ರಕಾಶ್ ಜಾವ್ಡೇಕರ್ ಅವರು ತಿಳಿಸಿದರು.

* ಪ್ರಸ್ತುತ ಭಾರತ ದೇಶದಲ್ಲಿ 130 ಕೋಟಿಗಿಂತಲೂ ಹೆಚ್ಚಿನ ಜನಸಂಖ್ಯೆ ಇದೇ ಅದರಲ್ಲಿ ಇದೀಗ 108 ಕೋಟಿ ಜನರಿಗೆ 2016 ಕೋಟಿ ಡೋಸ್ ಲಸಿಕೆ ನೀಡುವ ಯೋಜನೆ ಸಿದ್ಧವಾಗಿದೆ, ಮತ್ತು ಭಾರತದ ಲಸಿಕೆ ವಿತರಣಾ ಕಾರ್ಯಕ್ರಮವು 2021ಕ್ಕಿಂತ ಮೊದಲೇ ಪೂರ್ಣಗೊಳ್ಳಲಿದೆ ಎಂದು ಕೇಂದ್ರ ಸಚಿವ ಪ್ರಕಾಶ್ ಜಾವ್ಡೇಕರ್ ಅವರು ತಿಳಿಸಿದರು.

## 12ವರ್ಷ ಮೇಲ್ಪಟ್ಟ ಎಲ್ಲರಿಗೆ ಫೈಜರ್ ಲಸಿಕೆ ವಿತರಣೆ, ಜಪಾನ್




* ಜಪಾನ್ ಆರೋಗ್ಯ ಸಚಿವಾಲಯವು ಕೋವಿಡ್ 19 ಸಾಂಕ್ರಾಮಿಕ ರೋಗದ ವಿರುದ್ಧ ಹೋರಾಡಲು ಜಪಾನ್ ದೇಶದ 12ವರ್ಷ ಮೇಲ್ಪಟ್ಟ ಎಲ್ಲ ಜನರಿಗೆ ಫೈಜರ್ ಲಸಿಕೆಯನ್ನು ನೀಡಲು ಅನುಮೋದನೆ ನೀಡಿದೆ.

* ಈ ಹಿಂದೆ ಜಪಾನ್'ನಲ್ಲಿ 16 ವರ್ಷದ ಮೇಲ್ಪಟ್ಟ ಜನರಿಗೆ ಲಸಿಕೆ ವಿತರಣಾ ಕಾರ್ಯವು ನಡೆದಿತ್ತು ಇದೀಗ ಅಮೆರಿಕ ಮತ್ತು ಇನ್ನು ಹಲವಾರು ರಾಷ್ಟ್ರಗಳಲ್ಲಿ ಜನರಿಗೆ ಈ ಲಸಿಕೆ ನೀಡಲು ಅನುಮೋದನೆ ನೀಡಲಾಗಿದೆ ಇದನ್ನ ಅರಿತ ಜಪಾನ್ ಆರೋಗ್ಯ ಸಚಿವಾಲ ಸಮಿತಿಯು ಈ ನಿರ್ಣಯವನ್ನು ತೆಗೆದುಕೊಳ್ಳಲಾಗಿದೆ ಎಂದು ಅಧಿಕಾರಿಗಳು ಹೇಳಿಕೆ ನೀಡಿದ್ದಾರೆ.

* ಜಪಾನ್ ದೇಶವು ಇಲ್ಲಿನ ಮಕ್ಕಳಿಗೆ ಆದಷ್ಟು ಬೇಗ ಲಸಿಕೆ ಹಾಕುವ ಆಶಯವನ್ನು ವ್ಯಕ್ತ ಪಡಿಸಿದೆ ಈ ಕಾರಣದಿಂದಾಗಿ 12ವರ್ಷ ಮೇಲ್ಪಟ್ಟ ಮಕ್ಕಳಿಗಾಗಿ ಈ ವ್ಯವಸ್ಥೆಯನ್ನು ರೂಪಿಸಲಾಗಿದೆ ಎಂದು ಆರೋಗ್ಯ ಸಚಿವ ನೊರಿಹಿಸಾ ತಮುರಾ ಅವರು ಸುದ್ದಿ ವಾಹಿನಿಗಳಿಗೆ ಮಾಹಿತಿಯನ್ನು ನೀಡಿದರು.

## ಅಮೆಜಾನ್ CEO ಸ್ಥಾನದಿಂದ ಜೆಫ್ ಬೆಜೋಸ್ ಜೂನ್. 5 ರಂದು ನಿವೃತ್ತಿ



* ಅಮೆಜಾನ್ ಸಂಸ್ಥಾಪಕ ಜೆಫ್ ಬೆಜೋಸ್ ಇದೇ ಜೂನ್.5ರಂದು CEO ಸ್ಥಾನವನ್ನು ತ್ಯಜಿಸಲಿದ್ದಾರೆ, ಇವರ ನಂತರ ಈ ಸಿಇಒ ಸ್ಥಾನಕ್ಕೆ ಆಯಂಡಿ ಜೆಸ್ಸಿ ಅವರು ನೇಮಕವಾಗಲಿದ್ದಾರೆ ಎಂದು ತಿಳಿಸಿದ್ದಾರೆ.

* ಅಮೆಜಾನ್ ಇದೊಂದು ಇ ಕಾಮರ್ಸ್ ವೆಬ್‌ಸೈಟ್ ಆಗಿದೆ, ಈ ಸಂಸ್ಥೆಯನ್ನು ಜೆಫ್ ಬೆಜೋಸ್ ಅವರು ಸ್ಥಾಪಿಸಿದ್ದಾರೆ ಹಾಗೂ ಇದು ಜಗತ್ತಿನಾದ್ಯಂತ ಜನಪ್ರಿಯವಾದ ವೆಬ್‌ಸೈಟ್ ಇದಾಗಿದೆ ಇದರ ಹೆಗ್ಗಳಿಕೆ ಜೆಫ್ ಬೆಜೋಸ್ ಅವರಿಗೆ ಸೇರತಕ್ಕದು, ಈ ಸಂಸ್ಥೆಯನ್ನು ಇವರು 1994ರ ಜೂನ್.5ರಂದು ಸ್ಥಾಪನೆ ಮಾಡಿದ್ದಾರೆ (ಸುಮಾರು 27ವರ್ಷಗಳ ಹಿಂದೆ), ಆದ್ದರಿಂದ ಜೆಫ್ ಬೆಜೋಸ್ ಅವರು ಜೂನ್. 5ರಂದು ಈ CEO ಹುದ್ದೆಯನ್ನು ನಿರ್ಗಮಿಸಲು ತೀರ್ಮಾನವನ್ನು ತಗೆದುಕೊಂಡಿದ್ದೇನೆ ಎಂದು ತಿಳಿಸಿದ್ದಾರೆ.

## ಎಂಜಿನಿಯರಿಂಗ್(Engineering) ಕೋರ್ಸ್ 7 ಪ್ರಾದೇಶಿಕ ಭಾಷೆಗಳಲ್ಲಿ ಲಭ್ಯ



* ಇದೀಗ 7 ಪ್ರಾದೇಶಿಕ ಭಾಷೆಗಳಲ್ಲಿ ಎಂಜಿನಿಯರಿಂಗ್ (Engineering) ಶಿಕ್ಷಣ ನೀಡಲು ಪ್ರಸ್ತುತ ದೇಶದ ಕಾಲೇಜುಗಳಿಗೆ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (AICTE) ಅನುಮತಿ ನೀಡಿದೆ, ಪ್ರಸ್ತುತ 2020 21ನೇ ಶೈಕ್ಷಣಿಕ ವರ್ಷದಿಂದ ಕನ್ನಡ, ಹಿಂದಿ, ಬಂಗಾಲಿ, ತೆಲುಗು, ತಮಿಳು, ಗುಜರಾತಿ, ಮಲಯಾಂ ಭಾಷೆಗಳಲ್ಲಿ ಈ ಕೋರ್ಸ್ ಮಾಡಲು ಅವಕಾಶ ನೀಡಲಾಗಿದೆ ಎಂದು AICTE ತಿಳಿಸಿದೆ.

* AICTE ಅನುಮತಿ ನೀಡಿದ ಹಿನ್ನಲೆಯಿಂದಾಗಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (VTU)ವು ಕನ್ನಡದಲ್ಲಿ ಎಂಜಿನಿಯರಿಂಗ್ ವಿಷಯಗಳನ್ನು ಬೋಧಿಸಲು ಪಠ್ಯಕ್ರಮ ಸಿದ್ಧಗೊಳಿಸುತ್ತಿದೆ, ಇದೀಗ VTU ವಿಷಯ ತಜ್ಞರ ಸಮಿತಿ ರಚನೆಯನ್ನು ಮಾಡಿದೆ ಸದ್ಯದಲ್ಲೇ ಕನ್ನಡ ಪಠ್ಯಕ್ರಮ ಸಿದ್ಧವಾಗಲಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

* ತಾಂತ್ರಿಕ (Technical) ಕೋರ್ಸ್‌ಗಳ ಪಠ್ಯಕ್ರಮವು ಕನ್ನಡದಲ್ಲಿ ಲಭ್ಯವಾದರೆ ಗ್ರಾಮೀಣ ಪ್ರತಿಭೆ ಅಂದರೆ ವಿದ್ಯಾರ್ಥಿಗಳಿಗೆ ತುಂಬಾ ಅನುಕೂಲವಾಗಲಿದೆ, ಆದರೆ ತಾಂತ್ರಿಕ ಪದವಿ ಕನ್ನಡದಲ್ಲಿ ಪಡೆದರು ಕೂಡ ಪ್ರಾದೇಶಿಕ ಭಾಷೆಯ ಪಠ್ಯಕ್ರಮದ ಜೊತೆಗೆ ಜಾಗತಿಕವಾಗಿ ಅಗತ್ಯವಿರುವ ಭಾಷೆಯಲ್ಲೂ ಅಧ್ಯಯನ ಮಾಡುವದು ಅದರೊಂದಿಗೆ ವಿಷಯ ಜ್ಞಾನವನ್ನು ಪಡೆಯುವದು ಅತೀ ಮುಖ್ಯವಾಗಿದೆ ಎಂದು ತಾಂತ್ರಿಕ ವಿಷಯ ತಜ್ಞರೊಬ್ಬರು ಮಾಹಿತಿ ಹಂಚಿಕೊಂಡಿದ್ದಾರೆ.

* ಕೆಲವು ತಾಂತ್ರಿಕ ಪದಗಳ ತರ್ಜುಮೆ (ಭಾಷಾಂತರ ಅಥವಾ ಅನುವಾದ) ಕಷ್ಟ, ಕೆಲವು ಪದಗಳ ಅರ್ಥ ಅನರ್ಥ ಅಥವಾ ವ್ಯತ್ಯಾಸವಾದರೂ ಕಲಿಕೆಗೆ ಪರಿಪೂರ್ಣತೆ ಸಿಕ್ಕಂತೆ ಆಗುವದಿಲ್ಲ ಹೀಗಾಗಿ ಇಂಗ್ಲಿಷ್ ಕನ್ನಡ ತಾಂತ್ರಿಕ ನಿಘಂಟನ್ನು ತಯಾರಿಸಲಾಗುತ್ತಿದೆ ಎಂದು VTU ಕುಲಸಚಿವರಾಗಿರುವ ಡಾll ಎ.ಎಸ್. ದೇಶಪಾಂಡೆ ಮಾಹಿತಿ ನೀಡಿದ್ದಾರೆ, ಮತ್ತು ಇದರಿಂದ ತಾಂತ್ರಿಕ ವಿಷಯಗಳ ಕನ್ನಡ ಭಾಷಾಂತರಕ್ಕೆ ಈ ತಾಂತ್ರಿಕ ನಿಘಂಟು ಸಹಕಾರಿಯಾಗಲಿದೆ ಎಂದು ತಿಳಿಸಿದ್ದಾರೆ.

* ಭಾಷಾಂತರಕ್ಕಾಗಿ AICTE ದೇಶೀಯವಾಗಿ ಅಭಿವೃದ್ಧಿಪಡಿಸಿರುವ ಸಾಫ್ಟ್‌ವೇರ್ ಮೂಲಕ ಎಂಜಿನಿಯರಿಂಗ್ ಪಠ್ಯಕ್ರಮ ಅನುವಾದ ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ.

## 31-05-2021

### ಪೂಜಾ ರಾಣಿಗೆ ಏಶ್ಯನ್ ಬಾಕ್ಸಿಂಗ್ ಚಾಂಪಿಯನ್‌ಶಿಪ್'ನಲ್ಲಿ ಚಿನ್ನ



* ಭಾರತದ ಪೂಜಾ ರಾಣಿ ಅವರು ಏಶ್ಯನ್ ಬಾಕ್ಸಿಂಗ್ ಚಾಂಪಿಯನ್‌ಶಿಪ್'ನಲ್ಲಿ 75 KG ವಿಭಾಗದಲ್ಲಿ ಬಂಗಾರದ ಪದಕ ಜಯಿಸಿಕೊಂಡಿದ್ದಾರೆ, ಮೇರಿ ಕೋಮ್ ಮತ್ತು ಲಾಲ್‌ಬೌತ್ಸಾಹಿ ಅವರು ಬೆಳ್ಳಿ ಪದಕವನ್ನು ಜಯಿಸಿದ್ದಾರೆ.

* ಇತ್ತೀಚಿಗೆ ನಡೆದ ಏಶ್ಯನ್ ಬಾಕ್ಸಿಂಗ್ ಚಾಂಪಿಯನ್‌ಶಿಪ್ ಫೈನಲ್ ಹಣಾಹಣಿಯಲ್ಲಿ ಭಾರತ ಎರಡು ರಜತ ಗೆದ್ದ ನಂತರ ಪೂಜಾ ರಾಣಿ ಬಂಗಾರದ ಪದಕವನ್ನು ಜಯಿಸಿದ್ದಾರೆ. ಪ್ರಸ್ತುತ ಭಾರತದ ಪೂಜಾ ರಾಣಿ ಅವರು ಮೊವ್ಲೊನೋವಾ ಅವರ ವಿರುದ್ಧ ಜಯ ಸಾಧಿಸಿ ಬಂಗಾರವನ್ನು ಪಡೆದುಕೊಂಡಿದ್ದಾರೆ.

* ಮೇರಿ ಕೋಮ್ ಅವರು 51 KG ವಿಭಾಗದ ಫೈನಲ್‌ನಲ್ಲಿ ನಾಜಿಮ್ ಕೈಝುಬೆ ಅವರನ್ನು 3 2 ಅಂತರದಿಂದ ಸೋಲಿಸಿದರು, ಪ್ರಸ್ತುತ ಮೇರಿ ಕೋಮ್‌ಗೆ ಏಶ್ಯನ್ ಚಾಂಪಿಯನ್‌ಶಿಪ್‌ನಲ್ಲಿ ಒಲಿದ ಬಂದ 7ನೇ ಪದಕ ಇದಾಗಿದೆ, ಈ 7ರಲ್ಲಿ 5 ಚಿನ್ನದ ಪದಕಗಳಿವೆ.

### ನವೊಮಿ ಒಸಾಕ ಅವರಿಗೆ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಮೊದಲ ಜಯ



* ಜಪಾನ್'ನ ಮೂಲದ ನವೊಮಿ ಒಸಾಕ ಅವರು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಗೆಲುವನ್ನು ಆರಂಭಿಸಿದರು, ಪ್ರಸ್ತುತ ರವಿವಾರ ನಡೆದ ಹಣಾಹಣಿಯಲ್ಲಿ ಒಸಾಕ ಅವರು ರೊಮೇನಿಯಾದ ಪ್ಯಾಟ್ರಿಸಿಯಾ ಮರಿಯಾ ಟಿಗ್ ವಿರುದ್ಧ ಜಯ ಸಾಧಿಸಿದರು.

* ಒಸಾಕ ಅವರು ವಿಶ್ವ ಕ್ರಮಾಂಕದಲ್ಲಿ 2ನೇ ಸ್ಥಾನದಲ್ಲಿದ್ದಾರೆ, ಇವರು ಫಿಲಿಪ್ ಚಾಟ್ರಿಯರ್ ಕೋರ್ಟ್‌ನಲ್ಲಿ ಉತ್ತಮ ಆಟದ ಪ್ರದರ್ಶನವನ್ನು, ಒಸಾಕ ಅವರು 63ನೇ ಕ್ರಮಾಂಕದ ಟಿಗ್'ರ ವಿರುದ್ಧ ಮೊದಲ ಸೆಟ್‌ನಲ್ಲಿ 5 2ರ ಅಂತರದಲ್ಲಿ ಜಯ ಸಾಧಿಸಿದರು.

* ಈ ಹಿಂದೆ ವಿಶ್ವ ಕ್ರಮಾಂಕದಲ್ಲಿ ಮೊದಲ ಸ್ಥಾನದಲ್ಲಿದ್ದ ಜರ್ಮನಿಯ ಏಂಜಲಿಕ್ ಕರ್ಬರ್ ಮೊದಲ ಸುತ್ತಿನಲ್ಲೇ ಸೋಲು ಅನುಭವಿಸಿ ಹೊರನಡೆದರು, ಪ್ರಸ್ತುತ ಕರ್ಬರ್ 3 ಗ್ರ್ಯಾನ್‌ಸ್ಲಾಂ ಟೂರ್ನಿಗಳಲ್ಲಿ ಪ್ರಶಸ್ತಿ ಗೆದ್ದು ಬೀಗಿದ್ದರು.

### ಮೌಂಟ್ ಎವರೆಸ್ಟ್ ಏರಿದ ಏಷ್ಯಾದ ಮೊದಲ ಅಂಧ ವ್ಯಕ್ತಿ



* ಪ್ರಸ್ತುತ ಚೀನಾ ದೇಶದ 46 ವರ್ಷದ ಝಾಂಗ್ ಹೊಂಗ್ ಜಗತ್ತಿನ ಅತಿ ಎತ್ತರದ ಪರ್ವತ ಶಿಖರವಾಗಿರುವ ಮೌಂಟ್ ಎವರೆಸ್ಟ್'ನ್ನು ಏರಿದ್ದಾರೆ ಹಾಗು ಇವರು ಏಷ್ಯಾ ಮೊದಲ ಹಾಗೂ ಜಗತ್ತಿನ ಮೂರನೇ ಅಂಧ ವ್ಯಕ್ತಿಯಾಗಿ ದಾಖಲೆಯನ್ನು ಬರೆದಿದ್ದಾರೆ.

* ಪ್ರಸ್ತುತ ಝಾಂಗ್ ಹೊಂಗ್ ಅವರು ನೈರುತ್ಯ ಚೀನಾ ದೇಶದ ಚೊಂಗ್ಕಿಂಗ್ ನಗರದಲ್ಲಿ ಜನಿಸಿದ್ದಾರೆ, ಇವರಿಗೆ 21ನೇ ವರ್ಷದ ವಯಸ್ಸಿನಲ್ಲಿ ಗ್ಲೌಕೋಮದಿಂದಾಗಿ ಕಣ್ಣಿನ ದೃಷ್ಟಿಯನ್ನು ಕಳೆದು ಕೊಂಡಿದ್ದಾರೆ ಎಂದು ತಿಳಿಸಲಾಗಿದೆ.

* ಪ್ರಸ್ತುತ ಇವರು 8,849 ಮೀ. ಎತ್ತರದ ಹಿಮಾಚ್ಛಾದಿತ ಶಿಖರವನ್ನು ಇದೇ ಮೇ. 24ರಂದು ನೇಪಾಳ ರಾಷ್ಟ್ರದ ಕಡೆಯಿಂದ ಏರಿದ್ದಾರೆ ಮತ್ತು ಇವರಿಗೆ 3 ಜನ ಮಾರ್ಗದರ್ಶಕರು ನೆರವು ನೀಡಿದ್ದಾರೆ.

## ಮಹಾರಾಷ್ಟ್ರ ರಾಜ್ಯದಲ್ಲಿ 10ನೇ ತರಗತಿ ಪರೀಕ್ಷೆಗಳು ರದ್ದು



* ಪ್ರಸ್ತುತ ಮಹಾರಾಷ್ಟ್ರ ರಾಜ್ಯದಲ್ಲಿನ ಕೋವಿಡ್ 19 ಪರಿಸ್ಥಿತಿಯಿಂದಾಗಿ ರಾಜ್ಯದಲ್ಲಿನ 10ನೇ ತರಗತಿ ವಿದ್ಯಾರ್ಥಿಗಳ ಪರೀಕ್ಷೆಗಳನ್ನು (Board Exams) ರದ್ದು ಮಾಡಲು ನಿರ್ಧರಿಸಲಾಗಿದೆ ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರು ತಿಳಿಸಿದ್ದಾರೆ, ಮತ್ತು ಇದು ವಿದ್ಯಾರ್ಥಿಗಳ ಆರೋಗ್ಯ ಕಾಪಾಡುವ ಹಿತದೃಷ್ಟಿಯಿಂದ ಈ ನಿರ್ಧಾರವನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

* ಇದರ ಜೊತೆಯಲ್ಲಿ 12ನೇ ತರಗತಿಯ ಪರೀಕ್ಷೆಗಳನ್ನೂ ರದ್ದುಮಾಡುವ ಕುರಿತು ನಮ್ಮ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ನಿಲುವನ್ನು ಕಾಯುತ್ತಿದ್ದೇವೆ ಎಂದು ತಿಳಿಸಿದರು.

## 35ನೇ ಗೋವಾ ರಾಜ್ಯತ್ವ ದಿನ




* ಪ್ರಸ್ತುತ 35ನೇಯ ಗೋವಾ ರಾಜ್ಯತ್ವ ದಿನದ ಪ್ರಯುಕ್ತ ರಾಜ್ಯದಲ್ಲಿ ಕೋವಿಡ್ 19 ನಿಂದ ಮೃತಪಟ್ಟಿರುವ ಮತ್ತು ಆರ್ಥಿಕ ದೃಷ್ಟಿಯಿಂದ ಹಿಂಜರಿದಿರುವ ಕುಟುಂಬಗಳಿಗೆ 2 ಲಕ್ಷ ರೂ ಪರಿಹಾರವನ್ನು ನೀಡಲಾಗುವದು ಮತ್ತು 10ನೇ ತರಗತಿಯ ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪಟಾಪ್ ಇದರ ಜೊತೆಯಲ್ಲಿ ಮುಖ್ಯಮಂತ್ರಿ ಅನಾಥ ಆಧಾರ ಯೋಜನೆಯನ್ನು ಆರಂಭಿಸಲಾಗುವದು ಎಂದು ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾಸಾವಂತ್ ಅವರು ತಿಳಿಸಿದ್ದಾರೆ.

* ಪ್ರಸ್ತುತ ಈ ಹಿಂದೆ ಗೋವಾ ಒಂದು ರಾಜ್ಯ ಎಂದು ಘೋಷಣೆ ಆಗುವದಕ್ಕಿಂತ ಮೊದಲು ಈ ರಾಜ್ಯವನ್ನು ಗೋವಾ ದಮನ್ ಮತ್ತು ದೀವ್ ಎಂಬ ಹೆಸರಿನಿಂದ ಕರೆಯಲಾಗುತಿತ್ತು, ಇದೇ ಕಾರಣದಿಂದಾಗಿ ಇನ್ನು ಈ ರಾಜ್ಯದಲ್ಲಿ ಹಲವು ಕಾರ್ಯ್ಯಗಳು ಇನ್ನು ಅದೇ ಹೆಸರಿನಲ್ಲೇ ಇವೆ, ಹಾಗು ಇವುಗಳನ್ನು ತಿದ್ದುಪಡಿಮಾಡಿ ಕೇವಲ ಗೋವಾ ಎಂದು ಇಡಲಾಗುತ್ತದೆ ಎಂದು ಮುಖ್ಯಮಂತ್ರಿ ಸಾವಂತ್ ತಿಳಿಸಿದರು.

## ಕರ್ನಾಟಕ ರಾಜ್ಯದಲ್ಲಿ ಬಾಲ ಸೇವಾ ಯೋಜನೆ'ಯಡಿ ಹಲವು ಯೋಜನೆ



* ಪ್ರಸ್ತುತ ಕರ್ನಾಟಕ ರಾಜ್ಯದಲ್ಲಿ ಕೋವಿಡ್ 19 ಸಾಂಕ್ರಾಮಿಕ ರೋಗದಿಂದ ಪೋಷಕರನ್ನು ಕಳೆದುಕೊಂಡ ಮಕ್ಕಳಿಗೆ ಇದೀಗ ರಾಜ್ಯ ಸರ್ಕಾರವು ಬಾಲ ಸೇವಾ ಯೋಜನೆ'ಯನ್ನು ಘೋಷಿಸಿದೆ.

* ರಾಜ್ಯ ಸರ್ಕಾರದ ಈ ಬಾಲ ಸೇವಾ ಯೋಜನೆ ಅಡಿಯಲ್ಲಿ ಪೋಷಕರನ್ನು ಕಳೆದುಕೊಂಡ ಮಕ್ಕಳಿಗೆ ಉಚಿತ ಶಿಕ್ಷಣ ಮತ್ತು ತಿಂಗಳಿಗೆ 3500 ರೂ. ನೀಡಲಾಗುವದು ಎಂದು ರಾಜ್ಯ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಘೋಷಣೆ ಮಾಡಿದ್ದಾರೆ.

* 10ನೇ ತರಗತಿ ಪೂರ್ಣಗೊಳಿಸಿದ ಮಕ್ಕಳಿಗೆ ಉನ್ನತ ಶಿಕ್ಷಣ, ಉಚಿತವಾಗಿ ಲ್ಯಾಪ್ಟಾಪ್, ಟ್ಯಾಬ್ ಮತ್ತು 21ವರ್ಷ ಪೂರೈಸಿದ ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣ, ಮದುವೆ, ಸ್ವಯಂ ಉದ್ಯೋಗದ ಉದ್ದೇಶಗಳಿಗೆ 1ಲಕ್ಷ ರೂ. ಸಹಾಯಧನ ನೀಡಲಾಗುತ್ತದೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರು ತಿಳಿಸಿದರು.

## ಬೆಲ್‌ಗ್ರೇಡ್ ಓಪನ್' ಟೆನಿಸ್ ಗೆದ್ದ ನೊವಾಕ್ ಜೊಕೋವಿಕ್



* ಪ್ರಸ್ತುತ ಬೆಲ್‌ಗ್ರೇಡ್ ಓಪನ್ ಟೆನಿಸ್ ಪ್ರಶಸ್ತಿಯನ್ನು ನೊವಾಕ್ ಜೊಕೋವಿಕ್ ಅವರು ಜಯಿಸಿದ್ದಾರೆ.

* ನೊವಾಕ್ ಜೊಕೋವಿಕ್ ಅವರು ಫೈನಲ್ ಪಂದ್ಯದಲ್ಲಿ ಸ್ಲೊವಾಕಿಯನ್ ಆಟಗಾರ ಅಲೆಕ್ಸ್ ಮಾಲ್‌ಕ್ಯಾನ್ ಅವರ ವಿರುದ್ಧ ಜಯ ಸಾಧಿಸಿದ್ದಾರೆ.

* ಬೆಲ್‌ಗ್ರೇಡ್ ಓಪನ್ ಟೆನಿಸ್ ಪ್ರಶಸ್ತಿಯ ನೊವಾಕ್ ಜೊಕೋವಿಕ್ ಅವರ ಟೆನಿಸ್'ನ 83ನೇ ಎಟಿಪಿ ಪ್ರಶಸ್ತಿ ಇದಾಗಿದೆ.


KPSC Vaani
KPSC VAANI
Karnataka's no 1 compitative website
ಕರ್ನಾಟಕದ no 1 ಸ್ಪರ್ಧಾತ್ಮಕ ಜಾಲತಾಣ
ಸೇವೆಗಳು:
• ಪ್ರತಿದಿನದ ಉದ್ಯೋಗ ಮಾಹಿತಿ
• ಪ್ರತಿದಿನದ ಪ್ರಚಲಿತ ಘಟನೆಗಳು
• ಸ್ಟಡಿ ಮೆಟೀರಿಯಲ್ಸ್
• ಹಳೆಯ ಪ್ರಶ್ನೆಪತ್ರಿಕೆಗಳ ಸಂಗ್ರಹ
• ಕಟ್ ಆಫ್ ಅಂಕಗಳ ಮಾಹಿತಿ
• ಸ್ಪರ್ಧಾತ್ಮಕ ಲೇಖನಗಳು
• ವೀಡಿಯೊ ತರಗತಿಗಳು
• ಹಾಗೂ ಇನ್ನು ಹತ್ತು ಹಲವು ಸ್ಪರ್ಧಾತ್ಮಕ ಮಾಹಿತಿಗಾಗಿ ಕೂಡಲೇ ಬೇಟಿ ನೀಡಿ
www.kpscvaani.com
Google Play Store ನಿಂದ KPSC Vaani app ಕೂಡಾ ಡೌನ್ಲೋಡ್ ಮಾಡಿಕೊಳ್ಳಿ
Scan QR Code to download kpscvaani App